ಬುಧವಾರ, ಜೂನ್ 23, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 174 | ಪುಟ 16

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಈಗ ಎಲ್ಲೆಲ್ಲೂ ಕ್ಲಬ್‌ಹೌಸ್ ಮೇನಿಯಾ. ಇದು ಇಡೀ ಸೋಷಿಯಲ್ ಮೀಡಿಯಾ ಪ್ರಿಯರಲ್ಲಿ ಹೊಸ ಸಂಚಲನ ಮೂಡಿಸಿದೆ. ಹಾಗಾದರೆ, ಈ ಹೊಸ ಆ್ಯಪ್‌ನ ಬಳಕೆ ಹೇಗೆ? ಇಲ್ಲಿದೆ ಮಾಹಿತಿ



ಆಳ-ಅಗಲ ತೃತೀಯ ರಂಗ ರಚನೆಯ ಇನ್ನೊಂದು ಪ್ರಯತ್ನ?

ಕೋವಿಡ್ ಸಾವು: ಕಾಂಗ್ರೆಸ್ ಸಮೀಕ್ಷೆ 7

‘ಅಮ್ಮ ಯಾವಾಗ ಬರ್ತಾಳೆ?’ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,588 ▲	15,773 ▲	₹48,600 (ಬೆಂಗಳೂರು)	₹70,100 (ಬೆಂಗಳೂರು)	74.37 ▼

ಮಹಾರಾಷ್ಟ್ರ, ಕೇರಳ ಮತ್ತು ಮಧ್ಯಪ್ರದೇಶದಲ್ಲಿ ಕೊರೊನಾ ರೂಪಾಂತರಿತ ತಳಿ

‘ಡೆಲ್ಟಾ ಪ್ಲಸ್’: ದೇಶದಲ್ಲಿ 22 ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೊರೊನಾ ಎರಡನೇ ಅಲೆಯಿಂದ ದೇಶವು ಚೇತರಿಸಿಕೊಳ್ಳುವುದಕ್ಕೂ ಮುನ್ನ, ಅದರ ಇನ್ನೊಂದು ರೂಪಾಂತರಿತ ತಳಿ ‘ಡೆಲ್ಟಾ ಪ್ಲಸ್’ ಹಲವೆಡೆ ಕಾಣಿಸಿಕೊಂಡಿದೆ. ದೇಶದ ವಿವಿಧ ರಾಜ್ಯಗಳಲ್ಲಿ ಈ ಸೋಂಕಿನ 22 ಪ್ರಕರಣಗಳು ಪತ್ತೆಯಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

22 ಪ್ರಕರಣಗಳ ಪೈಕಿ ಮಹಾರಾಷ್ಟ್ರದ ರತ್ನಗಿರಿ ಹಾಗೂ ಜಲಗಾಂವ್ ಜಿಲ್ಲೆಯಲ್ಲಿ 16 ಪ್ರಕರಣಗಳು ವರದಿಯಾಗಿವೆ. ಕೇರಳದ ಪಾಲಕ್ಕಾಡ್ ಮತ್ತು ಪತ್ತನಂತಿಟ್ಟ ಜಿಲ್ಲೆಗಳು ಹಾಗೂ ಮಧ್ಯಪ್ರದೇಶದ ಭೋಪಾಲ್ ಮತ್ತು ಶಿವಪುರಿ ಜಿಲ್ಲೆಗಳಲ್ಲಿ ಉಳಿದ ಪ್ರಕರಣಗಳು ಕಂಡುಬಂದಿವೆ ಎಂದು ಅಧಿಕಾರಿಗಳು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಡೆಲ್ಟಾ ಪ್ಲಸ್ ತಳಿ ಕಾಣಿಸಿಕೊಂಡಿರುವ ರಾಜ್ಯಗಳಿಗೆ ಕೆಲವು ಸಲಹೆಗಳನ್ನು ನೀಡಲಾಗಿದೆ. ಕೋವಿಡ್ ನಿಯಮಾವಳಿಯನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಸೋಂಕಿತರ ಸಂಖ್ಯೆಯು ಏರಿಕೆಯಾಗದಂತೆ ನೋಡಿಕೊಳ್ಳಬೇಕು, ಸೋಂಕಿತರ ಮಾದರಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಅಧಿಕೃತ ಪ್ರಯೋಗಾಲಯಗಳಿಗೆ ಕಳುಹಿಸಬೇಕು ಎಂದು ರಾಜ್ಯಗಳಿಗೆ ಸೂಚಿಸಲಾಗಿದೆ.

ಡೆಲ್ಟಾ ಪ್ಲಸ್ ತಳಿಯು ಹೆಚ್ಚಿನ ಪ್ರಸರಣದ ಸಾಮರ್ಥ್ಯವನ್ನು ಹೊಂದಿದೆ. ಇನ್ನಷ್ಟು ಗಟ್ಟಿಯಾಗಿ ಶ್ವಾಸಕೋಶಕ್ಕೆ ಅಂಟಿಕೊಳ್ಳುವ ಶಕ್ತಿ ಹೊಂದಿದೆ ಹಾಗೂ ಪ್ರತಿಕಾಯ ಚಿಕಿತ್ಸೆಗೆ ಸ್ಪಂದಿಸದಷ್ಟು ಶಕ್ತಿಯುತವಾಗಿದೆ. ಆದರೆ, ಸದ್ಯಕ್ಕೆ ಅದರ ಹರಡುವಿಕೆಯ ಪ್ರಮಾಣ ಕಡಿಮೆ ಇದೆ ಎಂದು ಕೊರೊನಾ ವೈರಾಣುಗಳ ಮ್ಯಾಪಿಂಗ್ ಮಾಡುವ ಭಾರತೀಯ ವಿಜ್ಞಾನಿಗಳು ಸಚಿವಾಲಯಕ್ಕೆ ತಿಳಿಸಿದ್ದಾರೆ.

‘ಕೆ417ಎನ್’ ಎಂದು ಗುರುತಿಸಲಾಗುವ ಈ ತಳಿಯು ಭಾರತವಲ್ಲದೆ ಅಮೆರಿಕ, ಬ್ರಿಟನ್, ಪೋರ್ಚುಗಲ್, ಸ್ವಿಡ್ಜರ್ಲೆಂಡ್, ಜಪಾನ್, ಪೋಲೆಂಡ್, ನೇಪಾಳ, ಚೀನಾ ಹಾಗೂ ರಷ್ಯಾದಲ್ಲೂ ಕಾಣಿಸಿದೆ.

ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಗಳು ಈ ತಳಿಯ ವಿರುದ್ಧವೂ ಪರಿಣಾಮಕಾರಿ ಎನಿಸಬಲ್ಲವು ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ಪ್ರತಿಪಾದಿಸಿದ್ದಾರೆ.

ಪ್ರಕರಣ ಇಳಿಕೆ: ‘ದೇಶದಲ್ಲಿ ಕೋವಿಡ್–19 ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಮೇ 7ರಂದು ಗರಿಷ್ಠ ಸಂಖ್ಯೆಯ ಪ್ರಕರಣಗಳು ವರದಿಯಾಗಿದ್ದವು. ಆ ದಿನದ ಸಂಖ್ಯೆಗೆ ಹೋಲಿಸಿದರೆ ಪ್ರತಿನಿತ್ಯ ವರದಿಯಾಗುವ ಪ್ರಕರಣಗಳ ಸಂಖ್ಯೆಯಲ್ಲಿ ಶೇ 90ರಷ್ಟು ಇಳಿಕೆ ಕಂಡುಬಂದಿದೆ’ ಎಂದು ಆರೋಗ್ಯ ಇಲಾಖೆ ಅಧಿಕಾರಿ ತಿಳಿಸಿದ್ದಾರೆ.

ಮಂಗಳವಾರ ಬೆಳಿಗ್ಗೆ 8ಗಂಟೆಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ದೇಶದಲ್ಲಿ 42,640 ಪ್ರಕರಣಗಳು ವರದಿಯಾಗಿವೆ. ಇದು ಕಳೆದ 91 ದಿನಗಳಲ್ಲಿ ವರದಿಯಾದ ಕನಿಷ್ಠ ಸಂಖ್ಯೆಯಾಗಿದೆ ಎಂದೂ ಅಧಿಕಾರಿಗಳು ಹೇಳಿದ್ದಾರೆ.



ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಬೆಂಗಳೂರಿನ ನಾಗರಬಾವಿ ಮುಖ್ಯ ರಸ್ತೆ ಬಳಿಯ ಆರೋಗ್ಯ ಕೇಂದ್ರದ ಮುಂದೆ ಮಂಗಳವಾರ ಸೇರಿದ್ದ ಜನ ಪ್ರಜಾವಾಣಿ ಚಿತ್ರ/ ಅನೂಪ್ ರಾಘ.ಟಿ.

ಲಸಿಕೆ ನೀಡಿಕೆ: ಹೊಸ ದಾಖಲೆ

ನವದೆಹಲಿ: ಜೂನ್ 21ರಂದು ಹಮ್ಮಿಕೊಂಡಿದ್ದ ಲಸಿಕೆ ಮೇಳದಲ್ಲಿ ದಾಖಲೆಯ 88.09 ಲಕ್ಷ ಡೋಸ್‌ಗಳನ್ನು ನೀಡಲಾಗಿದ್ದು, ಇದೊಂದು ಮೈಲುಗಲ್ಲು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಂಗಳವಾರ ತಿಳಿಸಿದೆ. ನಗರ ಪ್ರದೇಶಗಳಿಗೆ ಹೋಲಿಸಿದರೆ, ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಜನರಿಗೆ ಕೋವಿಡ್ ಲಸಿಕೆ ನೀಡಲಾಗಿದೆ. ನಗರ ಪ್ರದೇಶದಲ್ಲಿ ಶೇ 36.32ರಷ್ಟು ಜನರಿಗೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಶೇ 63.68ರಷ್ಟು ಜನರಿಗೆ ಲಸಿಕೆ ನೀಡಲಾಗಿದೆ ಎಂದು ತಿಳಿಸಿದೆ.

ಕೋವಿಡ್ ಲಸಿಕೆಯ ಹೆಚ್ಚು ಡೋಸ್‌ಗಳನ್ನು ನೀಡಿರುವ ರಾಜ್ಯಗಳಲ್ಲಿ ಮಧ್ಯಪ್ರದೇಶ ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಉತ್ತರ ಪ್ರದೇಶ, ಬಿಹಾರ, ಹರಿಯಾಣ, ಗುಜರಾತ್, ರಾಜಸ್ಥಾನ, ತಮಿಳುನಾಡು, ಮಹಾರಾಷ್ಟ್ರ ಹಾಗೂ ಅಸ್ಸಾಂ ಇವೆ ಎಂದು ಸಚಿವಾಲಯದ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ತಿಳಿಸುತ್ತವೆ.

ಮೈಸೂರಿನಲ್ಲಿ ಡೆಲ್ಟಾ ಪ್ಲಸ್ ತಳಿ ಪತ್ತೆ?

ಮೈಸೂರು: ಕೋವಿಡ್ ಪಾಸಿಟಿವಿಟಿ ಪ್ರಮಾಣ ತಗ್ಗಿಸಲು ಕಸರತ್ತು ನಡೆಸುತ್ತಿರುವ ಮೈಸೂರು ಜಿಲ್ಲೆಯಲ್ಲಿ ಡೆಲ್ಟಾ ಪ್ಲಸ್ ರೂಪಾಂತರಿ ತಳಿಯ ಕೊರೊನಾ ವೈರಾಣು ಪತ್ತೆಯಾಗಿರುವ ವರದಿ ಬಂದಿದೆ ಎನ್ನಲಾಗಿದೆ. ಆದರೆ, ‘ಅಧಿಕೃತ ಮಾಹಿತಿ ಬಂದಿಲ್ಲ’ ಎಂಬುದಾಗಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಹೇಳಿದರು.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿಆರ್‌ಐ) ವತಿಯಿಂದ ಮಾದರಿಯನ್ನು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಗೆ (ನಿಮ್ಹಾನ್ಸ್) ಕಳುಹಿಸಲಾಗಿತ್ತು.

‘ನಿಮ್ಹಾನ್ಸ್‌ಗೆ ಸುಮಾರು 40 ಮಾದರಿ ಕಳುಹಿಸಲಾಗಿದೆ. ಡೆಲ್ಟಾ ಪ್ಲಸ್ ಪತ್ತೆಯಾಗಿರುವ ಬಗ್ಗೆ ಇದುವರೆಗೆ ಅಧಿಕೃತ ಮಾಹಿತಿ ಬಂದಿಲ್ಲ. ಅಧಿಕೃತವಾಗಿ ಗೊತ್ತಾಗುವವರೆಗೆ ಈ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ. ಯಾವುದೇ ರೀತಿಯ ವೈರಾಣುವನ್ನು ಎದುರಿಸಲು ನಾವು ಸಿದ್ಧವಿದ್ದೇವೆ’ ಎಂದು ಗೌತಮ್ ತಿಳಿಸಿದರು. ಈ ಕುರಿತು ಪ್ರತಿಕ್ರಿಯಿಸಿರುವ ಎಂಎಂಸಿಆರ್‌ಐ ನಿರ್ದೇಶಕ ಡಾ.ಸಿ.ಪಿ.ನಂಜರಾಜ್, ‘ಒಬ್ಬ ವ್ಯಕ್ತಿಯ ಗಂಟಲು ದ್ರವ ಮಾದರಿಯಲ್ಲಿ ಡೆಲ್ಟಾ ಪ್ಲಸ್ ತಳಿ ಪತ್ತೆಯಾಗಿರುವುದಾಗಿ ನಿಮ್ಹಾನ್ಸ್ ಅಧಿಕಾರಿಗಳು ಹೇಳುತ್ತಿದ್ದಾರೆ. ಪರೀಕ್ಷೆಗಾಗಿ ಕಳೆದ ತಿಂಗಳು ಮಾದರಿ ಕಳುಹಿಸಿದ್ದೆವು’ ಎಂದರು.

ಒಂದು ಪ್ರಕರಣ ವರದಿಯಾಗಿರುವುದು ಗೊತ್ತಾಗಿದೆ ಎಂದು ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಎಚ್.ಪ್ರಸಾದ್ ಹೇಳಿದರು.

ಲಸಿಕೆ: ಶೇ 40ರಷ್ಟು ಇಳಿಕೆ

ನವದೆಹಲಿ: ದೇಶದಲ್ಲಿ 53 ಲಕ್ಷ ಜನರಿಗೆ ಮಂಗಳವಾರ ಕೋವಿಡ್ ಲಸಿಕೆ ಹಾಕಲಾಗಿದೆ. ಸೋಮವಾರದ ದಾಖಲೆಗೆ ಹೋಲಿಸಿದರೆ ಮಂಗಳವಾರದ ಪ್ರಮಾಣದಲ್ಲಿ ಶೇ 40ರಷ್ಟು ಇಳಿಕೆ ಕಂಡುಬಂದಿದೆ.

ಅತಿಹೆಚ್ಚು ಜನರಿಗೆ ಲಸಿಕೆ ಹಾಕಲಾಗಿದೆ ಎಂದರೆ, ಸರಬರಾಜು, ರಾಜ್ಯಗಳ ಸಹಯೋಗ ಮತ್ತು ಸಾರ್ವಜನಿಕರ ಉತ್ಸಾಹ ಅದಕ್ಕೆ ಕಾರಣ ಎಂದು ತಜ್ಞರು ಹೇಳುತ್ತಾರೆ. ಕರ್ನಾಟಕದಲ್ಲಿ ಸೋಮವಾರ 11.38 ಲಕ್ಷ ಜನರಿಗೆ ಲಸಿಕೆ ಸಿಕ್ಕಿದೆ. ಆದರೆ ಮಂಗಳವಾರ 3.78 ಲಕ್ಷ ಜನರಿಗೆ ಲಸಿಕೆ ನೀಡಲಾಗಿದೆ.

‘ಸದ್ಯದ ಲಸಿಕೆ ಉತ್ಪಾದನೆ ಸಾಮರ್ಥ್ಯದ ಪ್ರಕಾರ, ಸೋಮವಾರ ನಡೆದ ದಾಖಲೆಯ ಲಸಿಕೆ ನೀಡಿಕೆಯನ್ನು ಎಲ್ಲ ದಿನಗಳಿಗೂ ಅನ್ವಯಿಸುವುದು ಸಾಧ್ಯವಿಲ್ಲ’ ಎಂದು ಕೋಯಿಕ್ಕೋಡ್‌ನ ಐಐಎಂ ಪ್ರಾಧ್ಯಾಪಕ ರಿಜೊ ಜಾನ್ ಹೇಳಿದ್ದಾರೆ.

ಲಸಿಕೆ ಬಳಿಕ ಪದವಿ ತರಗತಿ

ಡಾ.ದೇವಿ ಪ್ರಸಾದ್ ಶೆಟ್ಟಿ ನೇತೃತ್ವದ ತಜ್ಞರ ಸಮಿತಿ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: 18 ವರ್ಷಕ್ಕಿಂತ ಮೇಲಿನ ವಿದ್ಯಾರ್ಥಿಗಳಿಗೆ ಕೋವಿಡ್ ಲಸಿಕೆ ನೀಡಿದ ಬಳಿಕವೇ ಪದವಿ ಕಾಲೇಜುಗಳ ತರಗತಿಗಳನ್ನು ಆರಂಭಿಸುವಂತೆ ಹೃದ್ರೋಗ ತಜ್ಞ ಡಾ.ದೇವಿ ಪ್ರಸಾದ್ ಶೆಟ್ಟಿ ನೇತೃತ್ವದ ತಜ್ಞರ ಸಮಿತಿ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಕೋವಿಡ್ ಮೂರನೇ ಅಲೆ ನಿಯಂತ್ರಣ ಮತ್ತು ಚಿಕಿತ್ಸಾ ಸಿದ್ಧತೆಗಳ ಕುರಿತು ಅಧ್ಯಯನ ನಡೆಸಿ, ಸಲಹೆ ನೀಡಲು ನೇಮಿಸಿರುವ ತಜ್ಞರ ಸಮಿತಿಯು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮಂಗಳವಾರ ತನ್ನ ಮಧ್ಯಂತರ ವರದಿ ಸಲ್ಲಿಸಿತು.

ಮುಖ್ಯಮಂತ್ರಿಯವರ ಗೃಹ ಕಚೇರಿಯಲ್ಲಿ ನಡೆದ ಸಭೆಯಲ್ಲಿ ವರದಿಯಲ್ಲಿನ ಶಿಫಾರಸುಗಳ ಕುರಿತು ವಿಸ್ತೃತ ಚರ್ಚೆಯೂ ನಡೆಯಿತು.

ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಯಡಿಯೂರಪ್ಪ, ‘ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಲಸಿಕೆ ನೀಡಿದ ಬಳಿಕ ಪದವಿ ಕಾಲೇಜುಗಳನ್ನು ತೆರೆಯುವಂತೆ ಸಮಿತಿ ಶಿಫಾರಸು ಮಾಡಿದೆ. 18 ವರ್ಷಕ್ಕಿಂತ ಕೆಳಗಿನವರಿಗೆ ಇನ್ನೂ ಲಸಿಕೆ ಲಭ್ಯ ಇಲ್ಲ. ಆದ್ದರಿಂದ, ಪದವಿಗಿಂತ ಕೆಳಗಿನ ಹಂತದ ಎಲ್ಲ ಶಾಲಾ, ಕಾಲೇಜುಗಳನ್ನು ಹಂತ ಹಂತವಾಗಿ ತೆರೆಯುವಂತೆ ಸಮಿತಿ ಸಲಹೆ ನೀಡಿದೆ’ ಎಂದರು.

12ನೇ ಪುಟ ನೋಡಿ

ತರಾತುರಿ ಇಲ್ಲ: ಡಾ.ಕೆ. ಸುಧಾಕರ್

ಬೆಂಗಳೂರು: ಶಾಲೆ, ಕಾಲೇಜುಗಳನ್ನು ತೆರೆಯಲು ಸರ್ಕಾರಕ್ಕೆ ಯಾವುದೇ ರೀತಿಯ ತರಾತುರಿ ಇಲ್ಲ. ಮಕ್ಕಳ ಸುರಕ್ಷತೆಯೇ ಸರ್ಕಾರದ ಮೊದಲ ಆದ್ಯತೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಪತ್ರಕರ್ತರ ಜತೆ ಮಾತನಾಡಿದ ಅವರು, ‘ಒಂದು ಕಡೆಯಿಂದ ಶಾಲೆ, ಕಾಲೇಜು ತರಗತಿ ಆರಂಭಕ್ಕೆ ಒತ್ತಡವಿದೆ. ಪೋಷಕರು ಯಥಾಸ್ಥಿತಿ ಮುಂದುವರಿಸುವಂತೆ ಒತ್ತಾಯಿಸುತ್ತಿದ್ದಾರೆ. ಮಕ್ಕಳಿಗೆ ಶಿಕ್ಷಣದಷ್ಟೇ ಆರೋಗ್ಯವೂ ಮುಖ್ಯ. ಈ ವಿಚಾರದಲ್ಲಿ ಸಾಧಕ– ಬಾಧಕಗಳನ್ನು ಚರ್ಚಿಸಿದ ಬಳಿಕವೇ ನಿರ್ಧಾರಕ್ಕೆ ಬರಬೇಕಿದೆ’ ಎಂದರು. ಮಕ್ಕಳಿಗೆ ಬೇಗ ಸೋಂಕು ಹರಡುತ್ತದೆ. ಒತ್ತಡಕ್ಕೆ ಮಣಿದು ನಿರ್ಧಾರ ಕೈಗೊಳ್ಳುವ ಪ್ರಶ್ನೆಯೇ ಇಲ್ಲ. ಕೋವಿಡ್ ತಾಂತ್ರಿಕ ಸಲಹಾ ಸಮಿತಿ, ತಜ್ಞರ ಸಮಿತಿ, ಕಾರ್ಯಪಡೆ ಸಭೆಗಳನ್ನು ನಡೆಸಿ, ಚರ್ಚಿಸಿದ ಬಳಿಕವೇ ತೀರ್ಮಾನಕ್ಕೆ ಬರಲಾಗುವುದು ಎಂದು ಹೇಳಿದರು.

ನಾಲ್ಕು ಜಿಲ್ಲೆಗಳಲ್ಲಿ ಮತ್ತಷ್ಟು ಸಡಿಲಿಕೆ

ಬೆಂಗಳೂರು: ಭಾಗಶಃ ಲಾಕ್‌ಡೌನ್ ಸಡಿಲಿಕೆಯ ವ್ಯಾಪ್ತಿಯಲ್ಲಿದ್ದ ದಕ್ಷಿಣ ಕನ್ನಡ, ಹಾಸನ, ದಾವಣಗೆರೆ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಮಧ್ಯಾಹ್ನ 1 ಗಂಟೆಯವರೆಗೆ ಎಲ್ಲ ಬಗೆಯ ಅಂಗಡಿಗಳನ್ನೂ ತೆರೆಯಲು ಅನುಮತಿ ನೀಡಿ ಮಂಗಳವಾರ ಆದೇಶ ಹೊರಡಿಸಲಾಗಿದೆ.

ಸೋಮವಾರದವರೆಗೂ ಈ ಜಿಲ್ಲೆಗಳಲ್ಲಿ ಮಧ್ಯಾಹ್ನದವರೆಗೆ ಅಗತ್ಯ ವಸ್ತುಗಳ ಮಾರಾಟಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು. ಈ ನಿರ್ಬಂಧವನ್ನು ತೆರವುಗೊಳಿಸಿ, ನಾಲ್ಕೂ ಜಿಲ್ಲೆಗಳಲ್ಲಿ ಮಧ್ಯಾಹ್ನದವರೆಗೂ ಎಲ್ಲ ಅಂಗಡಿಗಳೂ ವಹಿವಾಟು ನಡೆಸಲು ಅವಕಾಶ ನೀಡಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಆದೇಶ ಹೊರಡಿಸಿದ್ದಾರೆ.

ಹವಾ ನಿಯಂತ್ರಣ ವ್ಯವಸ್ಥೆ ಹೊಂದಿರುವ ಅಂಗಡಿ ಮಳಿಗೆಗಳನ್ನು ತೆರೆಯುವಂತಿಲ್ಲ. ಹೋಟೆಲ್‌ಗಳಲ್ಲಿ ಪಾರ್ಸೆಲ್ ನೀಡುವುದಕ್ಕೆ ಮಾತ್ರ ಅವಕಾಶ ಇರಲಿದೆ.ಮಂಗಳವಾರದಿಂದ ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಮಧ್ಯಾಹ್ನದವರೆಗೆ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ಕಲ್ಪಿಸುವ ಭಾಗಶಃ ಲಾಕ್‌ಡೌನ್ ಇರಲಿದೆ. ಮೈಸೂರು ಜಿಲ್ಲೆಯಲ್ಲಿ ಮಾತ್ರ ಸಂಪೂರ್ಣ ಲಾಕ್‌ಡೌನ್‌ನ ಕಠಿಣ ನಿರ್ಬಂಧಗಳು ಮುಂದುವರಿಯಲಿವೆ.

ಪ್ರಮುಖ ರಾಜಕೀಯ ಪಕ್ಷಗಳೊಂದಿಗೆ ನಾಳೆ ಮಾತುಕತೆ

ಪ್ರಧಾನಿ ಸಭೆಯಲ್ಲಿ ಪಾಲ್ಗೊಳ್ಳಲು ಗುಪ್ಕಾರ್ ಕೂಟದ ನಿರ್ಧಾರ

ಶ್ರೀನಗರ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯಲ್ಲಿ ಗುರುವಾರ ಕರೆದಿರುವ ಜಮ್ಮು ಕಾಶ್ಮೀರದ ಸರ್ವಪಕ್ಷ ಸಭೆಯಲ್ಲಿ ಭಾಗವಹಿಸಲು ಗುಪ್ಕಾರ್ ಕೂಟದ ಪಕ್ಷಗಳು ನಿರ್ಧರಿಸಿವೆ.

ಕೇಂದ್ರಾಡಳಿತ ಪ್ರದೇಶವಾಗಿರುವ ಕಾಶ್ಮೀರದಲ್ಲಿ ರಾಜಕೀಯ ಚಟುವಟಿಕೆಗಳನ್ನು ಚುರುಕುಗೊಳಿಸುವ ಬಗ್ಗೆ ಚರ್ಚಿಸಲು, ಜಮ್ಮು ಕಾಶ್ಮೀರದ 14 ನಾಯಕರನ್ನು ಪ್ರಧಾನಿ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಗೆ ಆಹ್ವಾನಿಸಲಾಗಿದೆ. 2019ರ ಆಗಸ್ಟ್ 5ರಂದು ರಾಜ್ಯದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿದ ನಂತರ ನಡೆಯಲಿರುವ ಮೊದಲ ಸಭೆ ಇದಾಗಿದೆ. ಪ್ರಧಾನಿ ಅವರ ಆಹ್ವಾನವನ್ನು ಒಪ್ಪಿಕೊಳ್ಳಬೇಕೇ, ಬೇಡವೇ ಎಂದು ಚರ್ಚಿಸಲು ಗುಪ್ಕಾರ್ ಒಕ್ಕೂಟದ ಮುಖ್ಯಸ್ಥ ಫಾರೂಕ್ ಅಬ್ದುಲ್ಲಾ ಅವರ ನಿವಾಸದಲ್ಲಿ ಮಂಗಳವಾರ ಪ್ರಮುಖ ಪಕ್ಷಗಳ ಪ್ರತಿನಿಧಿಗಳ ಸಭೆ ನಡೆಯಿತು.

‘ಪ್ರಧಾನಿ ಮೋದಿ ಮತ್ತು ಗೃಹ ಸಚಿವರ ಮುಂದೆ ಗುಪ್ಕಾರ್ ಕೂಟವು ತನ್ನ ನಿಲುವನ್ನು ಮಂಡಿಸಲಿದೆ. ರಾಜ್ಯದ ಕೆಲವು ಪಕ್ಷಗಳ ಮುಖಂಡರಿಗೆ ವೈಯಕ್ತಿಕ ಆಹ್ವಾನ ಇರುವುದರಿಂದ ಅವರೆಲ್ಲರೂ ಪ್ರತ್ಯೇಕವಾಗಿ ತಮ್ಮ ನಿಲುವುಗಳನ್ನು ಮಂಡಿಸುವರು. ಸಭೆಯಲ್ಲಿ ನಾವು ಹೇಳಿದ್ದೇನು, ಅದಕ್ಕೆ ಸರ್ಕಾರದ ಪ್ರತಿಕ್ರಿಯೆ ಏನಾಗಿತ್ತು ಎಂಬುದರ ಮಾಹಿತಿಯನ್ನು ಸಭೆಯ ನಂತರ ನಿಮ್ಮೆಲ್ಲರಿಗೂ ನೀಡುತ್ತೇವೆ’ ಎಂದು ಅಬ್ದುಲ್ಲಾ ಸುದ್ದಿಗಾರರಿಗೆ ತಿಳಿಸಿದರು.

ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿದ ನಂತರ ಮುಖ್ಯವಾಹಿನಿಯ ಆರು ಪಕ್ಷಗಳು ಗುಪ್ಕಾರ್ ಒಕ್ಕೂಟ ರಚಿಸಿಕೊಂಡಿದ್ದವು.

ಇನ್ನೊಂದು ಸುದ್ದಿ 11

ಪವಾರ್ ನೇತೃತ್ವದ ಪ್ರತಿಪಕ್ಷಗಳ ಸಭೆಗೆ ಬಾರದ ಕಾಂಗ್ರೆಸ್

ಬಿಜೆಪಿ ವಿರೋಧಿಗಳ ಒಗ್ಗಟ್ಟು?

ನವದೆಹಲಿ (ಪಿಟಿಐ): ಟಿಎಂಸಿ, ಎಸ್‌ಪಿ, ಎಎಪಿ, ಆರ್‌ಎಲ್‌ಡಿ, ಎಡರಂಗ ಸೇರಿದಂತೆ ಪ್ರತಿಪಕ್ಷಗಳ ಮುಖಂಡರು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಭಾಗಿಯಾಗಿದ್ದರು. ದೇಶದ ಮುಂದಿರುವ ಹಲವು ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದಿದೆ ಎಂದು ಹೇಳಲಾಗಿದೆ.

ಸಭೆಯ ಅಧ್ಯಕ್ಷತೆಯನ್ನು ಎನ್‌ಸಿಪಿ ಮುಖಂಡ ಶರದ್ ಪವಾರ್ ವಹಿಸಿದ್ದರೂ, ಸಭೆಯನ್ನು ಯಶವಂತ್ ಸಿನ್ಹಾ ಅವರ ‘ರಾಷ್ಟ್ರ ಮಂಚ್’ನ ನೇತೃತ್ವದಲ್ಲಿ ಆಯೋಜಿಸಲಾಗಿತ್ತು ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಎನ್‌ಸಿಪಿಯ ಮುಖಂಡರೊಬ್ಬರು ತಿಳಿಸಿದ್ದಾರೆ. ಎಡಪಕ್ಷ ಹೊರತುಪಡಿಸಿದರೆ, ಬಹುತೇಕ ಪ್ರಾದೇಶಿಕ ಪಕ್ಷಗಳ ಮುಖಂಡರೇ ಸಭೆಯಲ್ಲಿದ್ದರು. ದೇಶದಲ್ಲಿ ಸಂಭಾವ್ಯ ತೃತೀಯ ರಂಗದ ಸಭೆ ಇದಾಗಿದೆ ಎಂದು ವಿಶ್ಲೇಷಿಸಲಾಗಿದೆ.

ಪವಾರ್ ನಿವಾಸದಲ್ಲಿ ಎರಡು ಗಂಟೆಗಳು ಮಾತುಕತೆ ನಡೆಯಿತು. ಯಶವಂತ್ ಸಿನ್ಹಾ, ಎಸ್‌ಪಿಯ ಘನಶ್ಯಾಮ್ ತಿವಾರಿ, ಆರ್‌ಎಲ್‌ಡಿ ಪಕ್ಷದ ಮುಖ್ಯಸ್ಥ ಜಯಂತ್ ಚೌಧರಿ, ಆಮ್ ಆದ್ಮಿ ಪಕ್ಷದ ಸುಶೀಲ್ ಗುಪ್ತಾ, ಸಿಪಿಐನ ಬಿನೋಯ್ ವಿಶ್ವಂ ಅವರು ಸಭೆಯಲ್ಲಿ ಇದ್ದರು.

ಇವರ ಜೊತೆಗೆ ಎನ್‌ಸಿ ಮುಖ್ಯಸ್ಥ ಫಾರೂಕ್ ಅಬ್ದುಲ್ಲಾ, ಕಾಂಗ್ರೆಸ್‌ನ ಮಾಜಿ ಮುಖಂಡ ಸಂಜಯ್ ಝಾ, ಜೆಡಿಯು ಮಾಜಿ ಮುಖಂಡ ಪವನ್ ವರ್ಮಾ, ಪ್ರಸಿದ್ಧ ಗೀತರಚನಕಾರ ಜಾವೇದ್ ಅಖ್ತರ್, ಮಾಜಿ ರಾಜತಾಂತ್ರಿಕ ಕೆ.ಸಿ. ಸಿಂಗ್ ಹಾಗೂ ಇತರ ಗಣ್ಯರಿದ್ದರು.

ಕೆಲವು ಕಾಂಗ್ರೆಸ್ ಮುಖಂಡರಿಗೆ ಆಹ್ವಾನ ಕಳುಹಿಸಲಾಗಿದ್ದರೂ ಅವರು ಭಾಗವಹಿಸಲಿಲ್ಲ. ಆ ಮೂಲಕ ಪ್ರಾದೇಶಿಕ ಪಕ್ಷಗಳ ನೇತೃತ್ವದ ಗುಂಪಿನ ಭಾಗವಾಗಿರಲು ಮುಖ್ಯ ವಿರೋಧ ಪಕ್ಷವು ಬಯಸುವುದಿಲ್ಲ ಎಂಬ ಸಂದೇಶವನ್ನು ಕಾಂಗ್ರೆಸ್ ರವಾನಿಸಿತು.

‘ಇದು ರಾಜಕೀಯ ಸಭೆಯಲ್ಲ, ಸಮಾನ ಮನಸ್ಕರ ಸಂವಹನ. ಕೋವಿಡ್ ನಿರ್ವಹಣೆ, ಸಾಂವಿಧಾನಿಕ ಸಂಸ್ಥೆಗಳ ಮೇಲಿನ ದಾಳಿ, ನಿರುದ್ಯೋಗ ಮುಂತಾದ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಲಾಗಿದೆ’ ಎಂದು ಸಭೆಯಲ್ಲಿ ಪಾಲ್ಗೊಂಡಿದ್ದ ಸಿಪಿಎಂ ನಾಯಕ ನಿಲೋತ್ಪಲ ಬಸು ಹೇಳಿದ್ದಾರೆ.

ಕಾಂಗ್ರೆಸ್ ಜೊತೆ ಮೈತ್ರಿ ಮಾಡಿಕೊಂಡು ಅಧಿಕಾರದಲ್ಲಿರುವ ಶಿವಸೇನೆ, ಡಿಎಂಕೆ ಮತ್ತು ಜಾರ್ಖಂಡ್ ಮುಕ್ತಿ ಮೋರ್ಚಾದಂತಹ ಅನೇಕ ಪ್ರಮುಖ ಪ್ರಾದೇಶಿಕ ಪಕ್ಷಗಳು ಪವಾರ್ ಅವರ ಮನೆಯಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿರಲಿಲ್ಲ.



ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ನಿವಾಸದಲ್ಲಿ ಮಂಗಳವಾರ ಸಭೆ ನಡೆಯಿತು. ಟಿಎಂಸಿ ಮುಖಂಡ ಯಶವಂತ್ ಸಿನ್ಹಾ, ಇತರರು ಇದ್ದರು–ಪಿಟಿಐ ಚಿತ್ರ

‘ರಾಜಕೀಯ ಚರ್ಚೆಗೆ ಸಮಯವಲ್ಲ’

ವಿವಿಧ ಪಕ್ಷಗಳ ನಾಯಕರು ನಡೆಸಿದ ಸಭೆ ಹಾಗೂ ತೃತೀಯ ರಂಗ ರಚನೆ ಸಾಧ್ಯತೆಯ ಬಗ್ಗೆ ಪ್ರತಿಕ್ರಿಯಿಸಲು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ನಿರಾಕರಿಸಿದ್ದಾರೆ. ಮಂಗಳವಾರ ವರ್ಚುವಲ್ ಪತ್ರಿಕಾಗೋಷ್ಠಿ ನಡೆಸಿದ ಅವರು, ‘ಕೋವಿಡ್ ಪರಿಸ್ಥಿತಿ ಹಾಗೂ ಮುಂದೆ ಸಂಭವಿಸಬಹುದಾದ ಮೂರನೇ ಅಲೆಯಿಂದ ದೇಶವನ್ನು ರಕ್ಷಿಸುವುದು ಹೇಗೆ ಎಂಬತ್ತ ಗಮನ ಹರಿಸುತ್ತಿದ್ದೇನೆ. ಈ ಕಡೆಗೆ ಗಮನಹರಿಸಿ ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಸರ್ಕಾರದ ಮೇಲೆ ಒತ್ತಡ ಹೇರುವುದು ನನ್ನ ಈಗಿನ ಜವಾಬ್ದಾರಿಯಾಗಿದೆ. ರಾಜಕೀಯದಲ್ಲಿ ಏನು ನಡೆಯುತ್ತಿದೆ ಎಂದು ನಿಮಗೆ ತಿಳಿದಿದೆ. ಹೀಗಾಗಿ ನಾನು ಗಮನವನ್ನು ಬೇರೆಡೆಗೆ ತಿರುಗಿಸಲು ಹೋಗುವುದಿಲ್ಲ’ ಎಂದರು.

ಬಿಡಿಎ: ಆಸ್ತಿ ತೆರಿಗೆ ಪಾವತಿಗೆ ಇನ್ನೂ ತೆರೆದಿಲ್ಲ ಕಿಂಡಿ

● ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: 2021–22ನೇ ಆರ್ಥಿಕ ವರ್ಷ ಪ್ರಾರಂಭವಾಗಿ ಅದಾಗಲೇ ಎರಡೂವರೆ ತಿಂಗಳುಗಳಾಗಿವೆ. ಆದರೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿವಿಧ ಬಡಾವಣೆಗಳ ನಿವೇಶನದಾರರು ಇನ್ನೂ ಆಸ್ತಿ ತೆರಿಗೆ ಪಾವತಿಸಲು ಸಾಧ್ಯವಾಗಿಲ್ಲ.

ಬಿಡಿಎ ಎರಡು ವರ್ಷಗಳಿಂದೀಚೆಗೆ ಆಸ್ತಿ ತೆರಿಗೆಯನ್ನು ಆನ್‌ಲೈನ್ ಮೂಲಕ ಪಾವತಿಸಲು ಮಾತ್ರ ಅವಕಾಶ ಕಲ್ಪಿಸುತ್ತಿದೆ. ಆದರೆ, ಈ ಬಾರಿ ಆಸ್ತಿ ತೆರಿಗೆ ಪಾವತಿಸಲು ಬಿಡಿಎ ವೆಬ್‌ಸೈಟ್ (bdabangalore.org) ನೋಡಿದರೆ, ‘ಕೋವಿಡ್‌ನಿಂದ ರಾಜ್ಯದಲ್ಲಿ ಲಾಕ್ ಡೌನ್ ಜಾರಿಯಲ್ಲಿದ್ದು, ಕಚೇರಿಯಲ್ಲಿ ಶೇ 50ರಷ್ಟು ಸಿಬ್ಬಂದಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಆಸ್ತಿ ತೆರಿಗೆ ಪರಿಷ್ಕರಣೆಗೊಳಿಸಿ ಅಂತರ್ಜಾಲದಲ್ಲಿ ತೆರಿಗೆ ಪಾವತಿಸಲು ಶೀಘ್ರದಲ್ಲೇ ಅನುವು ಮಾಡಿಕೊಡಲಾಗುತ್ತದೆ’ ಎಂಬ ಸಂದೇಶ ಕಾಣಿಸಿಕೊಳ್ಳುತ್ತಿದೆ.

‘ಪ್ರತಿವರ್ಷವೂ ತೆರಿಗೆ ಪಾವತಿಯ ವೆಬ್‌ಲಿಂಕ್ ಏಪ್ರಿಲ್ ಅಂತ್ಯದಲ್ಲಿ ಅಥವಾ ಮೇ ಮೊದಲ ವಾರದಲ್ಲಿ ಸಿದ್ಧವಾಗುತ್ತಿತ್ತು. ನಾನು ಯಾವಾಗಲೂ ಆರ್ಥಿಕ ವರ್ಷಾರಂಭದಲ್ಲೇ ತೆರಿಗೆ ಪಾವತಿಸುತ್ತಿದ್ದೆ. ಆದರೆ, ಈ ಸಲ ಜೂನ್ ತಿಂಗಳ ಅರ್ಧ ಮುಗಿದರೂ ಇನ್ನೂ ತೆರಿಗೆ ಪಾವತಿಸಲು ಸಾಧ್ಯವಾಗಿಲ್ಲ’ ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿವೇಶನದಾರ ಸೂರ್ಯಕಿರಣ್ ತಿಳಿಸಿದರು.

ಪ್ರಜಾವಾಣಿ ವಿಶೇಷ

3B ಪುಟ ನೋಡಿ

ಬೇರುಮಟ್ಟದಲ್ಲಿ ಪಕ್ಷದ ಪದಾಧಿಕಾರಿಗಳ ಬದಲಾವಣೆಗೆ ಚಿಂತನೆ

ಡಿ.ಕೆ. ಶಿವಕುಮಾರ್– ಸಿದ್ದರಾಮಯ್ಯ ನಡುವೆ ಶೀತಲ ಸಮರ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಮುಂದಿನ ಮುಖ್ಯಮಂತ್ರಿ ಯಾರು’ ಎಂಬ ಚರ್ಚೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬೆಂಬಲಿಗರ ನಡುವಿನ ಮುಸುಕಿನ ಗುದ್ದಾಟಕ್ಕೆ ಕಾರಣವಾಗಿದ್ದರೆ, ಪಕ್ಷದ ಪದಾಧಿಕಾರಿಗಳ ಬದಲಾವಣೆ ಪ್ರಸ್ತಾಪವು ಉಭಯ ನಾಯಕರ ನಡುವೆ ಶೀತಲ ಸಮರಕ್ಕೆ ನಾಂದಿ ಹಾಡಿದೆ.

ದಿನೇಶ್ ಗುಂಡೂರಾವ್ ಕೆಪಿಸಿಸಿ ಅಧ್ಯಕ್ಷರಾಗಿದ್ದ ವೇಳೆ ಸಿದ್ದರಾಮಯ್ಯ ಅವರ ಶಿಫಾರಸ್ಸಿನ ಮೇರೆಗೆ ನೇಮಕಗೊಂಡಿದ್ದಾರೆ ಎಂಬ ಗುಮಾನಿಯಿಂದ ಪಕ್ಷದ ಅರ್ಧಕ್ಕೂ ಹೆಚ್ಚು ಜಿಲ್ಲಾ ಮತ್ತು ಬ್ಲಾಕ್ ಮಟ್ಟದ ಅಧ್ಯಕ್ಷರು, ಪದಾಧಿಕಾರಿಗಳನ್ನು ತೆಗೆದು, ತಮ್ಮ ಆಪ್ತರಿಗೆ ಪಟ್ಟ ಕಟ್ಟಲು ಡಿ.ಕೆ. ಶಿವಕುಮಾರ್ ವೇದಿಕೆ ಸಿದ್ಧಪಡಿಸಿಕೊಂಡಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ.

ಆಡಳಿತಾರೂಢ ಬಿಜೆಪಿಯಲ್ಲಿ ನಾಯಕತ್ವ ಬದಲಾವಣೆಯ ಕೂಗು ಸೃಷ್ಟಿಸಿರುವ ಗೊಂದಲದ ಲಾಭವನ್ನು ಪಡೆಯಲು ಸನ್ನದ್ಧರಾಗಿರುವ ಕಾಂಗ್ರೆಸ್ ನಾಯಕರು, ಪಕ್ಷದ ಬೇರು ಮಟ್ಟದಲ್ಲಿ ತಮ್ಮ ಬೆಂಬಲಿಗರೇ ಇರುವಂತೆ ನೋಡಿಕೊಳ್ಳಲು ಮುಂದಾಗಿದ್ದಾರೆ. ಅಲ್ಲದೆ, ವಿಧಾನಸಭೆ ಅಥವಾ ಲೋಕಸಭೆ ಚುನಾವಣೆಯ ಅಭ್ಯರ್ಥಿಗಳ ಆಯ್ಕೆಯು ರಾಜ್ಯ ಮುಖಂಡರ ಶಿಫಾರಸ್ಸಿಗೆ ಬದಲಾಗಿ, ಜಿಲ್ಲಾ ಮತ್ತು ಬ್ಲಾಕ್ ಮಟ್ಟದ ಮುಖ್ಯಸ್ಥರ ಶಿಫಾರಸ್ಸನ್ನೇ ಆಧರಿಸಿ ನಡೆಯಬೇಕು’ ಎಂಬುದು ರಾಹುಲ್ ಗಾಂಧಿ ಆಶಯವಾಗಿದೆ. ಹಾಗಾಗಿಯೇ ಜಿಲ್ಲಾ ಘಟಕಗಳ ಮುಖ್ಯಸ್ಥರ ಸ್ಥಾನದಲ್ಲಿ ತಮ್ಮ ಬೆಂಬಲಿಗರೇ ಇರುವುದು ಸೂಕ್ತ ಎಂಬುದು ಈ ಇಬ್ಬರೂ ಮುಖಂಡರ ನಿಲುವಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಬೇರು ಮಟ್ಟದಲ್ಲಿ ಬೆಂಬಲಿಗರ ಪಡೆ ಇದ್ದಲ್ಲಿ, ವಿಧಾನಸಭೆ ಚುನಾವಣೆಗೂ ತಮ್ಮದೇ ಅಭ್ಯರ್ಥಿಯನ್ನು ಕಣಕ್ಕಿಳಿಸಬಹುದು ಎಂಬ ಲೆಕ್ಕಾಚಾರವೂ ಇದರಲ್ಲಿ ಅಡಗಿದೆ. ಗೆದ್ದ ನಂತರ ‘ಮುಖ್ಯಮಂತ್ರಿ’ ಪಟ್ಟ ಪಡೆಯುವುದೂ ಸುಲಭ ಎಂಬುದೇ ಈ ಲೆಕ್ಕಾಚಾರದ ಮೂಲ ಎಂಬುದು ಇಬ್ಬರೂ ಮುಖಂಡರ ನಡುವಿನ ಹಗ್ಗ–ಜಗ್ಗಾಟಕ್ಕೆ ಕಾರಣವಾಗಿದೆ.

ಎರಡು ದಿನಗಳಿಂದ ದೆಹಲಿಯಲ್ಲಿ ಬೀಡುಬಿಟ್ಟಿರುವ ಶಿವಕುಮಾರ್, ಪದಾಧಿಕಾರಿಗಳ ಬದಲಾವಣೆಯ ಸುಳಿವು ನೀಡಿದ್ದಾರೆ. ಅಲ್ಲದೆ, ‘ಸಿದ್ದರಾಮಯ್ಯ ಅವರೇ ಮುಂದಿನ ಮುಖ್ಯಮಂತ್ರಿ’ ಎಂಬ ಹೇಳಿಕೆಗಳಿಗೆ ಕಡಿವಾಣ ಹಾಕಬೇಕು ಎಂಬ ಅವರ ಬೇಡಿಕೆಗೆ ಸ್ಪಂದಿಸಿದ ಹೈಕಮಾಂಡ್, ಈ ಸಂಬಂಧ ಎಚ್ಚರಿಕೆಯನ್ನೂ ನೀಡಿದೆ.



ಸಿದ್ದರಾಮಯ್ಯ



ಡಿ.ಕೆ. ಶಿವಕುಮಾರ್

2ನೇ ಪುಟ ನೋಡಿ

ಮಹಿಳಾ ನೌಕರರಿಗೆ 180 ದಿನ ಶಿಶುಪಾಲನಾ ರಜೆ: ಆದೇಶ

ಬೆಂಗಳೂರು: ರಾಜ್ಯ ಸರ್ಕಾರಿ ಮಹಿಳಾ ನೌಕರರಿಗೆ ಅವರ ಸೇವಾವಧಿಯಲ್ಲಿ 180 ದಿನಗಳು ಶಿಶು ಪಾಲನಾ ರಜೆ ನೀಡುವ ಸಂಬಂಧ ಸರ್ಕಾರ ಆದೇಶ ಹೊರಡಿಸಿದೆ.

ಮಹಿಳಾ ನೌಕರರು ಹೊಂದಿರುವ ಮಕ್ಕಳ ಸಂಖ್ಯೆಯನ್ನು ಪರಿಗಣಿಸದೇ ಕಿರಿಯ ಮಗು 18 ವರ್ಷ ತುಂಬುವವರೆಗೆ ಈ ರಜೆ ಸೌಲಭ್ಯವನ್ನು ಬಳಸಿಕೊಳ್ಳಬಹುದು. ಪ್ರತಿ ಬಾರಿ ರಜೆ ತೆಗೆದುಕೊಳ್ಳುವಾಗ ಕನಿಷ್ಠ 15 ದಿನಗಳಿಗೂ ಕಡಿಮೆ ಇಲ್ಲದಂತೆ ರಜೆ ಪಡೆಯಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಮಕ್ಕಳ ಆರೈಕೆ, ಪಾಲನೆ, ಪೋಷಣೆಗೆ ಶಿಶುಪಾಲನಾ ರಜೆ ನೀಡುವಂತೆ ರಾಜ್ಯ ಸರ್ಕಾರಿ ನೌಕರರ ಸಂಘ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿತ್ತು. 2020ರಲ್ಲಿ ಯಡಿಯೂರಪ್ಪ ಅವರು ಮಂಡಿಸಿದ ಬಜೆಟ್‌ನಲ್ಲಿ ಈ ಸೌಲಭ್ಯ ಕಲ್ಪಿಸುವುದಾಗಿ ಭರವಸೆ ನೀಡಿದ್ದರು. ಈಗ ಸರ್ಕಾರಿ ಆದೇಶ ಹೊರಡಿಸಲಾಗಿದೆ. ‘ಸರ್ಕಾರದ ಈ ನಿರ್ಧಾರದಿಂದ ಶೇ 75 ರಷ್ಟು ಮಹಿಳಾ ನೌಕರರಿಗೆ ಇದರ ಪ್ರಯೋಜನ ಸಿಗಲಿದೆ. ರಾಜ್ಯ ಸರ್ಕಾರಿ ನೌಕರರ ಪರವಾಗಿ ಯಡಿಯೂರಪ್ಪ ಅವರಿಗೆ ಧನ್ಯವಾದ ಸಲ್ಲಿಸುತ್ತೇನೆ’ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ಕೋವಿಡ್ ಅಂಕಿ–ಅಂಶ

28,15,029 ▲	ಒಟ್ಟು ಸೋಂಕಿತರು (28,11,320 ನಿನ್ನೆಯ ವಿವರ)
1,18,592 ▼	ಸಕ್ರಿಯ ಪ್ರಕರಣಗಳು
26,62,250 ▲	ಗುಣಮುಖರಾದವರು
34,164 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	3,709 ▼
ಗುಣಮುಖ	8,111 ▼
ಸಾವು	139 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಒಳ ಪುಟ
‘ಅನುಮತಿಯಿಲ್ಲದೇ ಈಜುಕೊಳ ನಿರ್ಮಾಣ’ 8

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮರ ಸ್ಥಳಾಂತರದ ವಿವರ ನೀಡಲು ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ರೈಲು ಮಾರ್ಗದ ಕಾಮಗಾರಿಗಾಗಿ ಮರಗಳನ್ನು ಸ್ಥಳಾಂತರಿಸಲು ಉದ್ದೇಶಿಸಿರುವ ನಿರ್ದಿಷ್ಟ ಸ್ಥಳದ ವಿವರ ಸಲ್ಲಿಸುವಂತೆ ಮರಗಳ ತಜ್ಞರ ಸಮಿತಿಗೆ (ಟಿಇಸಿ) ಹೈಕೋರ್ಟ್ ನಿರ್ದೇಶನ ನೀಡಿದೆ.

ಟಿಇಸಿ ಕಾರ್ಯನಿರ್ವಹಣೆ ಬಗ್ಗೆ ಮಾರ್ಗಸೂಚಿ ರೂಪಿಸುವಂತೆ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಸೂಚನೆ ನೀಡಿತು.

'ಮರಗಳು ಇರುವ ಜಾಗದಿಂದ ಸಮೀಪದ ಸ್ಥಳಗಳನ್ನು ಗುರುತಿಸಿ ಅಂದೇ ಸ್ಥಳಾಂತರ ಮಾಡಬೇಕಾಗುತ್ತದೆ. ನಿರ್ದಿಷ್ಟ ಜಾಗವನ್ನು ಟಿಇಸಿ ಅಂತಿಮಗೊಳಿಸಿದ ಬಳಿಕವೇ ಸ್ಥಳಾಂತರ ಮಾಡಬೇಕು' ಎಂದು ಪೀಠ ತಿಳಿಸಿತು.

'ಮರಗಳ ಸಂರಕ್ಷಣಾ ಕಾಯ್ದೆಯಡಿ ಇರುವ ನಿಬಂಧನೆಗಳನ್ನು ಗಮನದಲ್ಲಿಟ್ಟುಕೊಂಡು ಸ್ಥಳಾಂತರ ಮಾಡಬೇಕು. ಸ್ಥಳಾಂತರ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು' ಎಂದು ನಿರ್ದೇಶನ ನೀಡಿತು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪಗೆ ಬೇಡಿಕೆ ರವಾನೆ

ವೇತನ, ಭತ್ಯೆ ಹೆಚ್ಚಳಕ್ಕೆ ಪೊಲೀಸರ ಆಗ್ರಹ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 12 ಬೇಡಿಕೆಗಳ ಈಡೇರಿಕೆಗೆ ಒತ್ತಾಯ
- ಮೂಲ ವೇತನದಲ್ಲಿ ಶೇಕಡ 30ರಿಂದ 35ರಷ್ಟು ಹೆಚ್ಚಳಕ್ಕೆ ಆಗ್ರಹ

ಬೆಂಗಳೂರು: ತಮ್ಮ ವೇತನ ಮತ್ತು ಭತ್ಯೆಗಳಲ್ಲಿ ಹೆಚ್ಚಳ ಮಾಡುವಂತೆ ಆಗ್ರಹಿಸಿ ರಾಜ್ಯ ಪೊಲೀಸ್ ಇಲಾಖೆಯ ಸಹಾಯಕ ಸಬ್ ಇನ್‌ಸ್ಪೆಕ್ಟರ್‌ಗಳು (ಎಎಸ್‌ಐ), ಹೆಡ್ ಕಾನ್‌ಸ್ಟೆಬಲ್‌ಗಳು (ಎಚ್‌ಸಿ) ಹಾಗೂ ಕಾನ್‌ಸ್ಟೆಬಲ್‌ಗಳು (ಪಿಸಿ) ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಸೋಮವಾರ ಮನವಿ ಸಲ್ಲಿಸಿದ್ದಾರೆ.

ಹಲವು ಜಿಲ್ಲೆಗಳ ಎಎಸ್‌ಐ, ಎಚ್‌ಸಿ ಮತ್ತು ಪಿಸಿಗಳ ಹೆಸರಿನಲ್ಲಿ ಜಂಟಿ ಮನವಿಯೊಂದನ್ನು ಮುಖ್ಯಮಂತ್ರಿಯವರಿಗೆ ರವಾನಿಸಿದ್ದು, 12 ಬೇಡಿಕೆಗಳನ್ನು ಅವರ ಮುಂದಿಡಲಾಗಿದೆ. ಈ ಎಲ್ಲ ಬೇಡಿಕೆಗಳನ್ನೂ ಪ್ರಸಕ್ತ ಆರ್ಥಿಕ ವರ್ಷದಲ್ಲೇ ಈಡೇರಿಸುವಂತೆ ಮನವಿ ಮಾಡಲಾಗಿದೆ.

ರಾಘವೇಂದ್ರ ಔರಾದ್ಕರ್ ಸಮಿತಿ ಶಿಫಾರಸಿನಂತೆ ಪೊಲೀಸ್ ಸಿಬ್ಬಂದಿಯ ಮೂಲ ವೇತನದಲ್ಲಿ ಶೇಕಡ 30ರಿಂದ 35ರಷ್ಟು ಹೆಚ್ಚಳ ಮಾಡಬೇಕು. ಎಲ್ಲರಿಗೂ ತಿಂಗಳಿಗೆ ₹ 3,600 ವಿಶೇಷ ಭತ್ಯೆ ಮಂಜೂರು ಮಾಡಬೇಕು. ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ಸಕ್ರಿಯರಾಗಿರುವ ಎಲ್ಲ ಎಎಸ್‌ಐ, ಎಚ್‌ಸಿ ಮತ್ತು ಪಿಸಿಗಳಿಗೆ 2020ರ ಮಾರ್ಚ್‌ನಿಂದ ತಿಂಗಳಿಗೆ ₹ 5,000 ಕಷ್ಟ ಪರಿಹಾರ ಭತ್ಯೆ ಮಂಜೂರು ಮಾಡಬೇಕು. 2020ರ ಜನವರಿಯಿಂದ ತಡೆ ಹಿಡಿದಿರುವ ತುಟ್ಟಿಭತ್ಯೆಯನ್ನು ಹಿಂಬಾಕಿ ಸಹಿತವಾಗಿ ಪಾವತಿ ಮಾಡಬೇಕು. ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ ನೀಡುತ್ತಿರುವ ಪಡಿತರ ಭತ್ಯೆಯನ್ನು ಹೆಚ್ಚಿಸಬೇಕು ಎಂಬ ಬೇಡಿಕೆಗಳು ಮನವಿ ಪತ್ರದಲ್ಲಿವೆ.

ಪೊಲೀಸ್ ಕಾನ್‌ಸ್ಟೆಬಲ್‌ಗಳಿಂದ ಸಬ್ ಇನ್‌ಸ್ಪೆಕ್ಟರ್‌ವರೆಗಿನ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ನೀಡುತ್ತಿರುವ 'ಫೇಶಿಯಲ್ ಕಿಟ್' ಭತ್ಯೆಯನ್ನು ಪರಿಷ್ಕರಿಸಬೇಕು. ಸಾರಿಗೆ ಭತ್ಯೆಯನ್ನು ತಿಂಗಳಿಗೆ ₹ 2,000ಕ್ಕೆ ಹೆಚ್ಚಿಸಬೇಕು. ವಾರದ ರಜೆ ಭತ್ಯೆಯನ್ನು ₹ 200ರಿಂದ ₹ 1,000ಕ್ಕೆ ಏರಿಕೆ ಮಾಡಬೇಕು. ಕಾನ್‌ಸ್ಟೆಬಲ್‌ಗಳಿಗೆ ಕಡ್ಡಾಯವಾಗಿ ವಾರದ ರಜೆ ಪಡೆಯಲು ಅವಕಾಶ ನೀಡಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ.

ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಸರ್ಕಾರಿ ರಜಾ ದಿನಗಳ ಬದಲಿಗೆ ನೀಡುವ ಭತ್ಯೆಯನ್ನು ಪರಿಷ್ಕರಣೆ ಮಾಡಬೇಕು. ಪೊಲೀಸ್ ಕಾನ್‌ಸ್ಟೆಬಲ್‌ಗಳ ಇಬ್ಬರು ಮಕ್ಕಳಿಗೆ ವರ್ಷಕ್ಕೆ ತಲಾ ₹ 25,000ದಂತೆ ಶಿಕ್ಷಣ ಭತ್ಯೆ ಮಂಜೂರು ಮಾಡಬೇಕು. ಈ ಎಲ್ಲ ಬೇಡಿಕೆಗಳನ್ನೂ ಈಡೇರಿಸಲು ಪ್ರಸಕ್ತ ವರ್ಷವೇ ₹ 1,000 ಕೋಟಿ ಅನುದಾನ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.

ತೈಲ ದರ ಏರಿಕೆ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆಟ್ರೋಲ್ ಹಾಗೂ ಡೀಸೆಲ್ ದರ ಏರಿಕೆ ಖಂಡಿಸಿ ಆಮ್ ಆದ್ಮಿ ಪಕ್ಷವು (ಎಎಪಿ) ರಾಜ್ಯದ ವಿವಿಧ ಭಾಗಗಳಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿತು.

ರಾಮನಗರ, ತುಮಕೂರು, ಚಿತ್ರದುರ್ಗ, ಬಳ್ಳಾರಿ, ವಿಜಯಪುರ, ಕಲಬುರ್ಗಿ, ಯಾದಗಿರಿ ಹಾಗೂ ಕೊಡಗು ಜಿಲ್ಲೆಯ ಪೆಟ್ರೋಲ್ ಬಂಕ್‌ಗಳ ಎದುರು ಜಮಾಯಿಸಿದ್ದ ಪಕ್ಷದ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಬೆಂಗಳೂರಿನ ಸರ್ವಜ್ಞ ನಗರ, ಬೊಮ್ಮನಹಳ್ಳಿ, ಜಯನಗರ, ಸಿ.ವಿ. ರಾಮನ್ ನಗರ, ಮಹದೇವಪುರ, ಗಾಂಧಿನಗರ, ಚಿಕ್ಕಪೇಟೆ, ಜಯನಗರ, ಬಿಟಿಎಂ ಲೇಔಟ್, ಯಶವಂತಪುರ, ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರಗಳಲ್ಲೂ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಪೆಟ್ರೋಲ್ ಬಂಕ್‌ಗಳ ಮುಂದೆ ಸೇರಿದ್ದ ಕಾರ್ಯಕರ್ತರು ಕೇಂದ್ರದ ನಿರ್ಧಾರ ಖಂಡಿಸುವ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು.

ಪಕ್ಷದ ರಾಜ್ಯ ಉಸ್ತುವಾರಿ ರೋಮಿ ಭಾಟಿ, ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿರೆಡ್ಡಿ, ಮೋಹನ್ ದಾಸರಿ, ಶಾಂತಲಾ ದಾಮ್ಲೆ , ಜಗದೀಶ್ ವಿ.ಸದಂ, ನಂಜಪ್ಪ ಕಾಳೇಗೌಡ, ಬಿ.ಟಿ. ನಾಗಣ್ಣ ಹಾಗೂ ಫಣಿರಾಜ್ ಇದ್ದರು.

'ಶಬ್ದ ಮಾಪನಗಳ ವಿವರ ಕೊಡಿ'

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಬಿಎಂಪಿ ವ್ಯಾಪ್ತಿ ಮತ್ತು ಇಡೀ ರಾಜ್ಯಕ್ಕೆ ಅಗತ್ಯ ಇರುವ ಶಬ್ದ ಮಾಪನ ಸಾಧನಗಳ ವಿವರ ಒಳಗೊಂಡ ಅಫಿಡವಿಟ್ ಸಲ್ಲಿಸುವಂತೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ(ಡಿಜಿಪಿ) ಹೈಕೋರ್ಟ್ ನಿರ್ದೇಶನ ನೀಡಿದೆ.

ಶಬ್ದ ಮಾಲಿನ್ಯ ನಿಯಂತ್ರಣ ನಿಯಮಗಳ ಅನುಷ್ಠಾನ ಕುರಿತ ಅರ್ಜಿಗಳ ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿದೆ.

ನಿಯಮ ಅನುಷ್ಠಾನ ಸಂಬಂಧ ಸಮಗ್ರ ಮಧ್ಯಂತರ ನಿರ್ದೇಶನ ನೀಡುವ ಮೊದಲು ರಾಜ್ಯಕ್ಕೆ ಅಗತ್ಯ ಇರುವ ಶಬ್ದ ಮಾಪನ ಸಾಧನಗಳ ಅಗತ್ಯವಿದೆ ಎಂಬ ವಿವರ ಬೇಕಾಗುತ್ತದೆ. ಹೀಗಾಗಿ ವರದಿ ಸಲ್ಲಿಸುವಂತೆ ಈ ಹಿಂದಿನ ವಿಚಾರಣೆ ವೇಳೆ ಪೀಠ ಕೇಳಿತ್ತು. ವರದಿ ಸಲ್ಲಿಸಿದ್ದ ಡಿಜಿಪಿ ಪ್ರವೀಣ್ ಸೂದ್ ಅವರು, 'ರಾಜ್ಯದಲ್ಲಿ 143 ಡಿವೈಎಸ್‌ಪಿ ಮತ್ತು ಎಸಿಪಿಗಳಿದ್ದು, ತಲಾ ಒಂದರಂತೆ ಅಗತ್ಯಕ್ಕೆ ತಕ್ಕಷ್ಟು ಮಾಪನಗಳಿವೆ' ಎಂದು ತಿಳಿಸಿದ್ದರು.

'ಡಿವೈಎಸ್‌ಪಿ ಮತ್ತು ಎಸಿಪಿ ವ್ಯಾಪ್ತಿಯಲ್ಲಿ ಹಲವು ಪೊಲೀಸ್ ಠಾಣೆಗಳು ಇರುತ್ತವೆ. ಅಗತ್ಯಕ್ಕೆ ತಕ್ಕಷ್ಟು ಮಾಪನಗಳು ಇವೆ ಎಂಬ ಡಿಜಿಪಿ ನಿಲುವು ಹಾಸ್ಯಾಸ್ಪದ' ಎಂದು ಪೀಠ ಅಭಿಪ್ರಾಯಪಟ್ಟಿತು.

'ಶಬ್ದ ಮಾಪನ ಸಾಧನ ಲಭ್ಯವಿಲ್ಲದ ಕಾರಣ ನಿಯಮಗಳ ಅನುಷ್ಠಾನ ಸಾಧ್ಯವಾಗಿಲ್ಲ ಎಂಬ ಗಂಭೀರ ಅಂಶವನ್ನು ಡಿಜಿಪಿ ಗಮನಿಸಬೇಕು. ಬಿಬಿಎಂಪಿ ವ್ಯಾಪ್ತಿಯನ್ನು ಸೇರಿ ನಿರ್ದಿಷ್ಟವಾಗಿ ಎಷ್ಟು ಮಾಪನಗಳ ಅಗತ್ಯವಿದೆ ಎಂಬುದನ್ನು ತಿಳಿಸಬೇಕು' ಎಂದು ನಿರ್ದೇಶನ ನೀಡಿತು.

ಆದೇಶದ ಪ್ರತಿಯನ್ನು ಕೂಡಲೇ ಎಡಿಜಿಪಿಗೆ ರವಾನಿಸುವಂತೆ ಅಡ್ವೊಕೇಟ್ ಜನರಲ್ ಕಚೇರಿಗೆ ನಿರ್ದೇಶನ ನೀಡಿದ ಪಿಠ, ವಿಚಾರಣೆಯನ್ನು ಜುಲೈ 1ಕ್ಕೆ ಮುಂದೂಡಿತು.

ಎಸ್‌ಎಸ್‌ಸಿ ರಚಿಸದ ಸರ್ಕಾರ: ಹೈಕೋರ್ಟ್ ನೋಟಿಸ್

ಬೆಂಗಳೂರು: ರಾಜ್ಯದಲ್ಲಿ ಪೊಲೀಸ್ ಆಡಳಿತ ನಿಯಂತ್ರಿಸುವ ನಿಟ್ಟಿನಲ್ಲಿ ರಾಜ್ಯ ಭದ್ರತಾ ಆಯೋಗ (ಎಸ್‌ಎಸ್‌ಸಿ) ಸ್ಥಾಪಿಸಲು ವಿಫಲವಾದ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ನೀಡಿದೆ.


ವಕೀಲ ಎಸ್.ಉಮಾಪತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ (ಡಿಜಿಪಿ) ನೋಟಿಸ್ ನೀಡಲು ಆದೇಶಿಸಿತು.

ರಾಜ್ಯ ಪೊಲೀಸ್ ಕಾಯ್ದೆ 1963ರ ಸೆಕ್ಷನ್ 20ಎ ಪ್ರಕಾರ ಭದ್ರತಾ ಆಯೋಗ ರಚಿಸುವುದು ಕಡ್ಡಾಯ. ಅದು ರಾಜಕೀಯ ಹಸ್ತಕ್ಷೇಪದಿಂದ ಮುಕ್ತವಾಗಿ ದಕ್ಷತೆಯಿಂದ ಕಾರ್ಯ ನಿರ್ವಹಿಸಬೇಕು ಎಂದು ಅರ್ಜಿದಾರರು ಹೇಳಿದರು.

'ಪ್ರಕಾಶ್ ಸಿಂಗ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಪೊಲೀಸ್ ಕಾಯ್ದೆಗೆ ತಿದ್ದುಪಡಿಯನ್ನು ಸರ್ಕಾರ ತಂದಿದೆ. ಆದರೆ, ಎಸ್‌ಎಸ್‌ಸಿ ರಚನೆಯನ್ನೇ ಮಾಡಿಲ್ಲ' ಎಂದು ಅರ್ಜಿದಾರರು ದೂರಿದರು.

ಈ ಸಂಬಂಧ ಒಂದು ತಿಂಗಳಲ್ಲಿ ಅಫಿಡವಿಟ್ ಸಲ್ಲಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಿದ ಪೀಠ, ವಿಚಾರಣೆಯನ್ನು ಜು.29ಕ್ಕೆ ಮುಂದೂಡಿತು.

ಪರಿಷತ್ ಕಾರ್ಯಕಲಾಪ ಕಾಗದ ರಹಿತ: ಹೊರಟ್ಟಿ



ಹೊರಟ್ಟಿ

ಬೆಂಗಳೂರು: ವಿಧಾನಪರಿಷತ್ತಿನ ಕಾರ್ಯಚಟುವಟಿಕೆ ಮತ್ತು ಸದನದ ಕಾರ್ಯಕಲಾಪವನ್ನು ಅತಿ ಶೀಘ್ರವೇ ಕಾಗದ ರಹಿತ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದ್ದಾರೆ.

114 ವರ್ಷಗಳ ಇತಿಹಾಸ ಹೊಂದಿರುವ ವಿಧಾನಪರಿಷತ್ತಿನ ಆಮೂಲಾಗ್ರ ಬದಲಾವಣೆ ಮಾಡಲಾಗುವುದು ಎಂದು ಅವರು ಸಂಸದೀಯ ಕಾರ್ಯವಿಧಾನಗಳ ಕುರಿತು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ಮಂಗಳವಾರ ಹಮ್ಮಿಕೊಂಡಿದ್ದ ವಿಧಾನಮಂಡಲಗಳ ಸಭಾಪತಿ ಮತ್ತು ಸಭಾಧ್ಯಕ್ಷರ ವರ್ಚುವಲ್ ಸಂವಾದದಲ್ಲಿ ಹೇಳಿದರು.

ರಾಜ್ಯ ವಿಧಾನಪರಿಷತ್ತನ್ನು ಮಾದರಿ ವಿಧಾನಪರಿಷತ್ತನ್ನಾಗಿ ಮಾಡುವ ಸಂಕಲ್ಪದೊಂದಿಗೆ ಹಲವು ವಿನೂತನ ಕ್ರಮ ಕೈಗೊಳ್ಳಲಾಗುತ್ತಿದೆ. ಇ–ವಿಧಾನ ಕಾರ್ಯಕ್ರಮದಡಿ ವಿಧಾನ ಪರಿಷತ್ತನ್ನು ಕಾಗದ ರಹಿತವಾಗಿ ಮಾಡುವ ನಿಟ್ಟಿನಲ್ಲಿ ಈಗಾಗಲೇ ಕ್ರಮ ಜರುಗಿಸಲಾಗುತ್ತಿದೆ. ಸದನದ ಕಾರ್ಯಕಲಾಪ ಮತ್ತು ಪ್ರಶ್ನೋತ್ತರಗಳನ್ನು ಡಿಜಿಟಲೀಕರಣ ಮಾಡಲಾಗುತ್ತಿದೆ ಎಂದು ಹೇಳಿದರು.

ಕಳೆದ ಬಜೆಟ್ ಅಧಿವೇಶನದ ಸಂದರ್ಭದಲ್ಲಿ ವಿಧಾನಪರಿಷತ್ ಕಾರ್ಯ ಕಲಾಪಗಳನ್ನು ರಾಜ್ಯಸಭೆಯ ಮಾದರಿಯಲ್ಲಿ ಮಾಡಲಾಗುತ್ತಿದೆ. ನಿಗದಿತ ವೇಳೆ ಮತ್ತು ಅವಧಿಯಲ್ಲಿಯೇ ಪ್ರಶ್ನೋತ್ತರ, ಶೂನ್ಯ ವೇಳೆ ಸೇರಿದಂತೆ ವಿವಿಧ ಕಾರ್ಯಕಲಾಪಗಳನ್ನು ರಾಜ್ಯಸಭೆಯ ಮಾದರಿಯಲ್ಲಿ ನಡೆಸಲಾಗುತ್ತಿದೆ ಎಂದು ಹೊರಟ್ಟಿ ವಿವರಿಸಿದರು.

ಕೋವಿಡ್ ಬಗ್ಗೆ ಜನಜಾಗೃತಿ ಮೂಡಿಸುವಲ್ಲೂ ವಿಧಾನಪರಿಷತ್ ಸದಸ್ಯರ ಪಾತ್ರ ಅನುಕರಣೀಯವಾಗಿದೆ ಎಂದು ತಿಳಿಸಿದರು.

ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ಮಾತನಾಡಿದರು. ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಸೇರಿ ದೇಶದ ವಿವಿಧ ರಾಜ್ಯಗಳ ಸಭಾಧ್ಯಕ್ಷರು ಮತ್ತು ಸಭಾಪತಿಗಳು ಭಾಗವಹಿಸಿ ಮಾತನಾಡಿದರು.

ಡಿ.ಕೆ. ಶಿವಕುಮಾರ್– ಸಿದ್ದರಾಮಯ್ಯ ನಡುವೆ ಶೀತಲ ಸಮರ

ಒಂದನೇ ಪುಟದಿಂದ

ಈ ಬೆಳವಣಿಗೆಯಿಂದ ಎಚ್ಚೆತ್ತಿರುವ ಸಿದ್ದರಾಮಯ್ಯ ಅವರೂ ಮುಂದಿನ ವಾರದೆಹಲಿಗೆ ಬಂದು ಪದಾಧಿಕಾರಿಗಳ ದಿಢೀರ್ ಬದಲಾವಣೆಯ ಪ್ರಸ್ತಾವವನ್ನು ಕೈಬಿಡುವಂತೆ ಕೋರುವ ಸಾಧ್ಯತೆ ಇದೆ ಎನ್ನಲಾಗಿದೆ.

'ಜಿಲ್ಲಾ ಮತ್ತು ಬ್ಲಾಕ್ ಮಟ್ಟದ ನೇತೃತ್ವವು ಈಗ ಇರುವವರ ಬಳಿಯೇ ಇರಬೇಕು. ಒಂದೊಮ್ಮೆ ಬದಲಾವಣೆ ಅನಿವಾರ್ಯವಾದಲ್ಲಿ ನಮಗೂ ಆದ್ಯತೆ ನೀಡಬೇಕು' ಎಂದು ಸಿದ್ದರಾಮಯ್ಯ ಬೆಂಬಲಿಗರು ಹಟ ಹಿಡಿದಿದ್ದಾರೆ. ಈ ಸಂಬಂಧ ಈಗಾಗಲೇ ಪಟ್ಟಿಯೊಂದನ್ನು ಸಿದ್ಧಪಡಿಸಲಾಗಿದೆ ಎಂದೂ ತಿಳಿದುಬಂದಿದೆ.


ದಿವಂಗತ ನಟ ಸಂಚಾರಿ ವಿಜಯ್ ಅಣ್ಣ ವಿರೂಪಾಕ್ಷ ಬಸವರಾಜಯ್ಯ ಹೇಳಿಕೆ

‘ಪಂಚನಹಳ್ಳಿ ಜನ ಮನೆಮಕ್ಕಳಂತೆ ಸಾಕಿದ್ದರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿವಂಗತ ನಟ ಸಂಚಾರಿ ವಿಜಯ್ ಅವರ ಕುಟುಂಬದ ಹಿನ್ನೆಲೆ, ಹುಟ್ಟೂರು ಪಂಚನಹಳ್ಳಿಯಲ್ಲಿ ಕುಟುಂಬ ಅನುಭವಿಸಿದ ಅಸ್ಪೃಶ್ಯತೆ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಪೋಸ್ಟ್‌ಗಳಿಗೆ ವಿಜಯ್ ಅವರ ಅಣ್ಣ ವಿರೂಪಾಕ್ಷ ಬಸವರಾಜಯ್ಯ ಸ್ಪಷ್ಟನೆ ನೀಡಿದ್ದಾರೆ.

‘ತಮ್ಮನ ಸಾವಿನ ಆಘಾತದಿಂದ ಇನ್ನೂ ಹೊರಬರಲು ಸಾಧ್ಯವಾಗುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕೆಲವು ಜಾಲತಾಣಗಳಲ್ಲಿ ಕೆಲ ವಿಚಾರಗಳು ಓಡಾಡುತ್ತಿವೆ. ಕುಟುಂಬದ ಮುಖ್ಯಸ್ಥನಾಗಿ ಗೊಂದಲಗಳಿಗೆ ತೆರೆ ಎಳೆಯಲು ಮಾತನಾಡುತ್ತಿದ್ದೇನೆ. ನನ್ನ ತಂದೆಯ ಮೂಲ ಊರು ತರೀಕೆರೆ. ನಾನು ಕಡೂರು ತಾಲೂಕು ಸಿದ್ಧರಾಮನಹಳ್ಳಿಯಲ್ಲಿ ನಾನು ಜನಿಸಿದೆ. ಪಕ್ಕದ ರಂಗಾಪುರ ಗ್ರಾಮದಲ್ಲಿ ನನ್ನ ತಮ್ಮ ವಿಜಯ್ ಜನಿಸಿದ. ಪಂಚನಹಳ್ಳಿಯಲ್ಲೇ ನಾವು ಬೆಳೆದೆವು, ಹೀಗಾಗಿ ಪಂಚನಹಳ್ಳಿಯೇ ನಮ್ಮ ಊರು ಎನ್ನುವ



ಸಂಚಾರಿ ವಿಜಯ್

ಭಾವನೆ ನಮಗೂ ಇನ್ನೂ ಇದೆ. ಇದು ಸತ್ಯವೇ. ಅಲ್ಲಿಯೇ ಬೆಳೆದು, ವಿದ್ಯಾಭ್ಯಾಸ ಮಾಡಿದೆವು. ತಾಯಿಯು ನರ್ಸ್ ಆಗಿ ಆ ಊರಿನಲ್ಲಿ ಮಾಡಿರುವ ಸೇವೆ ಎಲ್ಲರಿಗೂ ಗೊತ್ತಿದೆ’ ಎಂದು ಹೇಳಿದ್ದಾರೆ.

‘ಅಮ್ಮ ಜಾನಪದ, ನೃತ್ಯ, ಆರ್ಕೆಸ್ಟ್ರಾ ಕಲಾವಿದೆಯಾಗಿದ್ದರು. ತಂದೆ ಚಿತ್ರಕಲಾವಿದರಾಗಿ ಕೆಲಸ ಮಾಡಿದವರು. ಪಂಚನಹಳ್ಳಿಯಲ್ಲಿ ಯಾರು ಯಾವುದೇ ಜಾತಿ, ಭೇದ ಮಾಡಿಲ್ಲ. ತಂದೆ, ತಾಯಿಯನ್ನು ಚಿಕ್ಕವಯಸ್ಸಿನಲ್ಲಿ ಕಳೆದುಕೊಂಡಾಗ ತಮ್ಮ ಮನೆ ಮಕ್ಕಳಂತೆ ಅವರು ನೋಡಿಕೊಂಡಿದ್ದಾರೆ. ನನ್ನ ತಮ್ಮನಿಗೆ ರಾಷ್ಟ್ರೀಯ ಪ್ರಶಸ್ತಿ ಬಂದಾಗ, ಊರಿನಲ್ಲಿ ಹಬ್ಬದ ರೀತಿ ಆಚರಣೆ ಮಾಡಿ, ಊರೆಲ್ಲ ಊಟ ಹಾಕಿಸಿ, ಮೆರವಣಿಗೆ ಮಾಡಿ ಪ್ರೀತಿ ತೋರಿಸಿ ಹರಿಸಿದ್ದಾರೆ. ಆ ಸಂದರ್ಭದಲ್ಲಿ ಯಾವುದೇ ಬರವಣಿಗೆ ಸಾಮಾಜಿಕ ಜಾಲತಾಣಗಳಲ್ಲಿ ಬರೆದಿರಲಿಲ್ಲ. ಅವನ ಮರಣಾನಂತರ ಏಕೆ ಈ ರೀತಿ ಬರಹಗಳು ಬರುತ್ತಿವೆ ಎಂದು ಗೊತ್ತಿಲ್ಲ. ಆ ರೀತಿಯ ಯಾವುದೇ ಬರವಣಿಗೆ ಬೇಡ’ ಎಂದು ಮನವಿ ಮಾಡಿದ್ದಾರೆ.

‘ಪಂಚನಹಳ್ಳಿ ಹಾಗೂ ಸುತ್ತಮುತ್ತಲಲ್ಲಿ ಬಹುತೇಕ ಮನೆಗಳಲ್ಲಿ ಹೆರಿಗೆ ಮಾಡಿಸಿದವರೇ ನಮ್ಮ ತಾಯಿ. ಹೀಗಿರುವಾಗ ಎಲ್ಲಿಯ ಜಾತಿಭೇದ. ವಿಜಯ್‌ನನ್ನು ಮನೆಮಗನಾಗಿ ಸಾಕಿರುವಾಗ ಯಾಕೆ ಜಾತಿಭೇದ? ಅಂತ್ಯಕ್ರಿಯೆ ಸಂದರ್ಭದಲ್ಲಿ ಆ ಊರಿನ ಜನ ತೋರಿಸಿದ ಪ್ರೀತಿಯನ್ನು ಎಲ್ಲರೂ ನೋಡಿದ್ದೀರಿ. ವಿಜಯ್ ಬದುಕಿರುವಾಗ ಈಗ ನೀಡುತ್ತಿರುವ ಪ್ರಚಾರ ನೀಡಿದ್ದರೆ ಆತ ಇನ್ನಷ್ಟು ಮೇಲೇರಿ ಸಮಾಜಮುಖಿ ಕೆಲಸ ಮಾಡಲು ಸಾಧ್ಯವಾಗುತ್ತಿತ್ತು. ಸಾಮಾಜಿಕ ಜಾಲತಾಣಗಳಲ್ಲಿ ಬಂದ, ಬರುತ್ತಿರುವ ಯಾವುದೇ ಬೇಡದ ವಿಚಾರಗಳಿಗೆ ಪಂಚನಹಳ್ಳಿ ಗ್ರಾಮಸ್ಥರು ಕಿವಿಕೊಡಬೇಡಿ. ನಾನಾಗಲಿ ಅಥವಾ ನನ್ನ ತಮ್ಮನಾಗಲಿ ಈ ರೀತಿ ವಿಷಯ ಹೇಳಿಲ್ಲ. ಎಲ್ಲರೂ ವಿಜಯ್ ಅವನನ್ನು ಸಮನಾಗಿ ಕಂಡಿದ್ದಾರೆ. ಜನರೂ ಇಂತಹ ವಿಚಾರಗಳನ್ನು ಬೇರೆಯವರಿಗೆ ಕಳುಹಿಸಬೇಡಿ. ಯಾರಿಗಾದರೂ ನೋವಾಗಿದ್ದರೆ ಕ್ಷಮಿಸಿ’ ಎಂದಿದ್ದಾರೆ.

‘ವಿಜಯ್ ಬಾಡಿಗೆ ಕಟ್ಟಲೂ ಕಷ್ಟಪಡುತ್ತಿದ್ದರು ಎನ್ನುವ ಪೋಸ್ಟ್ ಕೂಡಾ ಸಾಮಾಜಿಕ ಜಾಲತಾಣದಲ್ಲಿ ಬಂದಿತ್ತು. ವಾರದಲ್ಲಿ ಮೂರ್ನಾಲ್ಕು ಜನ ನಿರ್ದೇಶಕರು ಬಂದು ಆಫರ್ ಕೊಡುತ್ತಿದ್ದರು ಎಂದು ನನ್ನ ಬಳಿ ಹೇಳುತ್ತಿದ್ದ. ಒಳ್ಳೆಯ ಪಾತ್ರ ಬೇಕಿತ್ತು ಎಂದಷ್ಟೇ ಆತ ಹೇಳುತ್ತಿದ್ದ. ದುಡಿಮೆ ಮಾಡಿದ್ದರೆ ಸಮಾಜಮುಖಿ ಕೆಲಸಗಳಿಗೆ ಅದನ್ನು ಬಳಸುತ್ತಿದ್ದ. ಆರ್ಥಿಕ ಸಂಕಷ್ಟದ ಪ್ರಮೇಯ ‘ಇರಲಿಲ್ಲ’ ಎಂದು ಹೇಳಿದ್ದಾರೆ.

ಮೋಹನ್ ಆಳ್ವ, ಕಾಪಸೆಗೆ ‘ಕಸಾಪ ದತ್ತಿ ಪ್ರಶಸ್ತಿ’

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ‘ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ’ಗೆ ಆಳ್ವಾಸ್ ಫೌಂಡೇಶನ್ ಶಿಕ್ಷಣ ಸಂಸ್ಥೆಯ ಸಂಸ್ಥಾಪನಾ ಅಧ್ಯಕ್ಷ ಡಾ. ಮೋಹನ್ ಆಳ್ವ ಅವರನ್ನು ಆಯ್ಕೆ ಮಾಡಲಾಗಿದೆ.



ಡಾ.ಮೋಹನ್ ಆಳ್ವ



ಡಾ. ಕಾಪಸೆ

‘ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿ ವಿದ್ವತ್ ದತ್ತಿ ಪ್ರಶಸ್ತಿ’ಗೆ ಹಿರಿಯ ವಿದ್ವಾಂಸ ಡಾ.ಜಿ.ಎಸ್. ಕಾಪಸೆ ಭಾಜನರಾಗಿದ್ದಾರೆ. ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ನೇತೃತ್ವದಲ್ಲಿ ಮಂಗಳವಾರ ಈ ಆಯ್ಕೆಗಳು ನಡೆದಿವೆ.

ಈ ಪ್ರಶಸ್ತಿಗಳು ಕ್ರಮವಾಗಿ ₹ 51 ಸಾವಿರ ಹಾಗೂ ₹ 10 ಸಾವಿರ ನಗದು ಬಹುಮಾನವನ್ನು ಒಳಗೊಂಡಿವೆ. ಜು.1ರಂದು ‘ನಾಲ್ವಡಿ ಶ್ರೀಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ’ ಪ್ರದಾನ ಸಮಾರಂಭ ಹಾಗೂ ಜು.7ರಂದು ‘ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ ವಿದ್ವತ್ ದತ್ತಿ ಪ್ರಶಸ್ತಿ’ ಪ್ರದಾನ ಸಮಾರಂಭವನ್ನು ಪರಿಷತ್ತಿನ ಶ್ರೀಕೃಷ್ಣರಾಜ ಪರಿಷನ್ಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಪರಿಷತ್ತಿನ ಗೌರವ ಕಾರ್ಯದರ್ಶಿ ಕೆ. ರಾಜಕುಮಾರ್ ತಿಳಿಸಿದ್ದಾರೆ.

ಹೊರಗುತ್ತಿಗೆ ನೌಕರರ ಸೇವೆ ಮುಂದುವರಿಸಿದ ಬಿಡಿಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಹೊರಗುತ್ತಿಗೆ ಕಾರ್ಮಿಕರ ಸೇವೆಯನ್ನು ಮುಂದುವರಿಸಲು ನಿರ್ಧರಿಸಿದೆ.

ಹೊರಗುತ್ತಿಗೆ ಆಧಾರದಲ್ಲಿ ದತ್ತಾಂಶ ನಮೂದಿಸುವ ಸಿಬ್ಬಂದಿಯಾಗಿ (ಡಿಇಒ) ಕಾರ್ಯನಿರ್ವಹಿಸುತ್ತಿದ್ದ ಕೆಲವರ ಸೇವೆಯನ್ನು ಮುಂದುವರಿಸದಿರಲು ಪ್ರಾಧಿಕಾರವು ನಿರ್ಧರಿಸಿತ್ತು. ಈ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿದ್ದ ಸ್ಟ್ರಾಟೆಜಿಕ್ ಸರ್ವೀಸಸ್ ಕಂಪನಿಯು, ‘ಜೂನ್ 25ರಿಂದ ಬಿಡಿಎಗೆ ನಿಮ್ಮ ಸೇವೆಯ ಅಗತ್ಯ ಇರುವುದಿಲ್ಲ’ ಎಂದು ಈ ಸಿಬ್ಬಂದಿಗೆ ಇ-ಮೇಲ್ ಕೂಡ ಕಳುಹಿಸಿತ್ತು. ಹತ್ತು- ಹದಿನೈದು ವರ್ಷಗಳಿಂದ ಬಿಡಿಎಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅನೇಕ ಸಿಬ್ಬಂದಿ ಏಕಾಏಕಿ ಕೆಲ ಕಳೆದುಕೊಳ್ಳಬೇಕಾದ ಸ್ಥಿತಿ ತಲುಪಿದ್ದರು. ಕೆಲವರು ಈ ಬಗ್ಗೆ ‘ಪ್ರಜಾವಾಣಿ’ ಬಳಿ ಅಳಲು ತೋಡಿಕೊಂಡಿದ್ದರು.

ಕೋವಿಡ್ ಸಂದರ್ಭದಲ್ಲಿ ಯಾವುದೇ ಸಿಬ್ಬಂದಿಯನ್ನು ಕೆಲಸದಿಂದ ಕಿತ್ತುಹಾಕಬಾರದು ಎಂದು ಕಾರ್ಮಿಕ ಇಲಾಖೆ ಅಧಿಸೂಚನೆ ಹೊರಡಿಸಿದ್ದರೂ ಬಿಡಿಎ ಈ ನಿರ್ಧಾರ ಕೈಗೊಂಡಿದ್ದರ ಬಗ್ಗೆ ‘ಪ್ರಜಾವಾಣಿ’ ಜೂನ್ 17ರ ಸಂಚಿಕೆಯಲ್ಲಿ ವರದಿ ಪ್ರಕಟಿಸಿತ್ತು. ಇದರ ಬೆನ್ನಲ್ಲೇ ಬಿಡಿಎ ಹೊರಗುತ್ತಿಗೆ ಸಿಬ್ಬಂದಿಯನ್ನು ಕೆಲಸದಿಂದ ತೆಗೆಯುವ ಪ್ರಸ್ತಾವವನ್ನು ಕೈಬಿಟ್ಟಿದೆ.

‘ಬಿಡಿಎ ಕೇಂದ್ರ ಕಚೇರಿಯಲ್ಲಿ 13 ವರ್ಷಗಳಿಂದ ದತ್ತಾಂಶ ನಮೂದಿಸುವ ಸಿಬ್ಬಂದಿಯಾಗಿ (ಡಿಇಒ) ಕಾರ್ಯನಿರ್ವಹಿಸುತ್ತಿದ್ದೆ. ಜೂನ್ 25ರಿಂದ ಕರ್ತವ್ಯಕ್ಕೆ ಹಾಜರಾಗಬೇಕಿಲ್ಲ ಎಂದು ಸ್ಟ್ರಾಟೆಜಿಕ್ ಸರ್ವೀಸಸ್ ಕಂಪನಿಯವರು ಇ- ಮೇಲ್ ಕಳುಹಿಸಿದ್ದರು. ‘ಪ್ರಜಾವಾಣಿ’ಯಲ್ಲಿ ವರದಿ ಪ್ರಕಟವಾದ ಬಳಿಕ ನಮ್ಮನ್ನು ಕೆಲಸದಿಂದ ತೆಗೆಯುವ ಪ್ರಸ್ತಾವ ಕೈಬಿಟ್ಟಿದ್ದಾರೆ’ ಎಂದು ಡಿಇಒ ಒಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ವಿವಿಧ ಸಮಿತಿಗಳ ಸಭೆಗೆ ಅನುಮತಿ

ಬೆಂಗಳೂರು: ಇದೇ 28 ರಿಂದ ವಿಧಾನ ಸಭೆಯ ಎಲ್ಲ ಸಮಿತಿಗಳ ಸಭೆಗಳನ್ನು ಆರಂಭಿಸಲು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅನುಮತಿ ನೀಡಿದ್ದಾರೆ.

ಆದರೆ, ಮುಂದಿನ ಆದೇಶದವರೆಗೆ ಯಾವುದೇ ಅಧ್ಯಯನ ಪ್ರವಾಸ ಕೈಗೊಳ್ಳಬಾರದು ಎಂದು ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಜಮಖಂಡಿಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಪಂಚಮಸಾಲಿ ಸಮಾಜದ ವಿವಿಧ ಮಠಾಧೀಶರು ಪಾಲ್ಗೊಂಡಿದ್ದರು

ಪಂಚಮಸಾಲಿ ಸಮಾಜ ಮೂರನೇ ಪೀಠಕ್ಕೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಜಮಖಂಡಿ: ಪಂಚಮಸಾಲಿ ಸಮಾಜದ ಹರಿಹರ ಹಾಗೂ ಕೂಡಲಸಂಗಮ ಪೀಠಗಳ ಹೊರತಾಗಿ ಮೂರನೇ ಪೀಠದ ಸ್ಥಾಪನೆಗೆ ಸಮಾಜದ 30ಕ್ಕೂ ಹೆಚ್ಚು ಸ್ವಾಮೀಜಿಗಳು ನಗರದಲ್ಲಿ ಮಂಗಳವಾರ ಸಭೆ ನಡೆಸಿದರು.

ಸಮಾಜದ ಒಳಿತಿಗಾಗಿ ರಾಜಕೀಯ ಹೊರತಾಗಿ ಧಾರ್ಮಿಕ ನೆಲೆಗಟ್ಟಿನಲ್ಲಿ ಕಾರ್ಯತತ್ಪರವಾಗುವ ನಿಟ್ಟಿನಲ್ಲಿ ಪಂಚಮಸಾಲಿ ಸಮಾಜಕ್ಕೆ ಮೂರನೇ ಪೀಠದ ಅವಶ್ಯಕತೆ ಇದೆ. ಸಮಾಜದ ಮಠಾಧೀಶರು ಸೇರಿ ಸಾಮೂಹಿಕ ಪ್ರಯತ್ನದ ಮೂಲಕ ಮೂರನೇ ಪೀಠ ಆರಂಭಿಸಲು ಸಭೆ ನಿರ್ಧರಿಸಿತು ಎಂದು ಹೇಳಲಾಗಿದೆ.

ಜಮಖಂಡಿಯ ಭಕ್ತರ ಮನೆಯೊಂದರಲ್ಲಿ ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಸಮಾಜದ ಸ್ವಾಮೀಜಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಈ ಹಿಂದೆ ಅಥಣಿ ತಾಲ್ಲೂಕಿನ ಕಕಮರಿ ಮಠದಲ್ಲಿ ಸಭೆ ಮಾಡಿ ಚರ್ಚೆ ಮಾಡಲಾಗಿತ್ತು. ಈಗ ನಿರ್ಧಾರ ತೆಗೆದುಕೊಳ್ಳಲಾಗಿದೆ. ಯಾವುದೇ ಭೇದ- ಭಾವವನ್ನು ಇಲ್ಲಿ ಮಾಡುವುದಿಲ್ಲ. ಎಲ್ಲರಿಗೂ ಸಮಾನ ಆದ್ಯತೆ ನೀಡಲಾಗುತ್ತಿದೆ ಎಂದು ಸಭೆಯಲ್ಲಿ ಪಾಲ್ಗೊಂಡಿದ್ದ ಸ್ವಾಮೀಜಿಯೊಬ್ಬರು ತಿಳಿಸಿದರು.

ಈಗಿರುವ ಎರಡು ಪೀಠಗಳಿಂದ ಸಮಾಜದ ಅಭಿವೃದ್ಧಿ ಆಗುತ್ತಿಲ್ಲ. ರಾಜಕೀಯವೇ ಅಲ್ಲಿ ಪ್ರಾಮುಖ್ಯತೆ ಪಡೆದಿದೆ. ಸ್ವಾಮೀಜಿಗಳು ರಾಜಕೀಯದಿಂದ ದೂರವಿದ್ದು ಸಮಾಜ ಮುನ್ನಡೆಸಬೇಕು. ಆದರೆ ಅಲ್ಲಿ ಸ್ವಾರ್ಥವೇ ತುಂಬಿದೆ. ಸಮಾಜದ ಒಳಿತಿಗಾಗಿ ಶ್ರಮಿಸಬೇಕು. ನಮ್ಮ ಸಮಾಜದ ಕೆಲ ರಾಜಕೀಯ ಮುಖಂಡರನ್ನು ಮಾತ್ರ ಕೆಲವು ಪೀಠಗಳು ಮೇಲೆತ್ತುತ್ತಿವೆ. ಆದ್ದರಿಂದ ಎಲ್ಲರನ್ನು ಸೇರಿಸಿಕೊಂಡು ಮುನ್ನಡೆಯಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ನೆಲೋಗಿಯ ಶಿವಾನಂದ ಮಠದ ಸಿದ್ಧಲಿಂಗ ಸ್ವಾಮೀಜಿ, ಬಬಲೇಶ್ವರದ ಮಹಾದೇವ ಸ್ವಾಮೀಜಿ, ಕಕಮರಿ ರಾಯಲಿಂಗೇಶ್ವರ ಸ್ವಾಮೀಜಿ, ಮನಗೂಳಿ ಸಂಗನಬಸವ ಸ್ವಾಮೀಜಿ, ಖಾಜಿ ಬೀಳಗಿಯ ಚಿನ್ಮಯಾನಂದ ಸ್ವಾಮೀಜಿ, ಕುಂಚನೂರ ಕಮರಿಮಠದ ಸ್ವಾಮೀಜಿ, ಆಲಗೂರ ಧರಿದೇವರ ಸ್ವಾಮೀಜಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.



ಜಯನಗರದ ಕಿತ್ತೂರು ರಾಣಿ ಚೆನ್ನಮ್ಮ ಆಟದ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಹಾಗೂ ಶಾಸಕಿ ಸೌಮ್ಯಾ ರೆಡ್ಡಿ ಅವರು ಭೈರಸಂದ್ರ ವಾರ್ಡ್‌ನ ನಿವಾಸಿಗಳಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದರು. ಸ್ಥಳೀಯ ಮುಖಂಡ ಎನ್‌.ನಾಗರಾಜ್ ಇದ್ದಾರೆ.

ರಾಜಕಾಲುವೆ ಬಳಿ ಮೂತ್ರ ವಿಸರ್ಜಿಸಲು ಹೋದಾಗ ಹರಿದ ವಿದ್ಯುತ್

ಇಬ್ಬರು ಕಾರ್ಮಿಕರ ದುರ್ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾಸಿಪಾಳ್ಯ ಠಾಣೆ ವ್ಯಾಪ್ತಿಯ ನಾಲಾ ರಸ್ತೆಯ ರಾಜಕಾಲುವೆಗೆ ಅಳವಡಿಸಿದ್ದ ತಂತಿ ಬೇಲಿಯಲ್ಲಿ ವಿದ್ಯುತ್ ಹರಿದು ಇಬ್ಬರು ಕಾರ್ಮಿಕರು ದುರ್ಮರಣಕ್ಕೀಡಾಗಿದ್ದಾರೆ.

'ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಬಯಲುಮಚ್ಚಡ ಗ್ರಾಮದ ಕರಿಯಪ್ಪ (35) ಹಾಗೂ ನೀರಮಾನ್ವಿ ಗ್ರಾಮದ ನಾಗರಾಜು (20) ಮೃತರು. ಮಂಗಳವಾರ ಬೆಳಿಗ್ಗೆ ಈ ಅವಘಡ ಸಂಭವಿಸಿದೆ. ಹೈಟೆನ್ಶನ್ ತಂತಿ ಇರುವ ಜಾಗದಲ್ಲಿ ಮುಂಜಾಗ್ರತಾ ಕ್ರಮ ಕೈಗೊಳ್ಳದಿರುವುದೇ ಘಟನೆಗೆ ಕಾರಣ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ ಪಾಟೀಲ ಹೇಳಿದರು.

'ಕಾರ್ಮಿಕ ಕರಿಯಪ್ಪ, ಪತ್ನಿ ಹಾಗೂ ಮಕ್ಕಳ ಜೊತೆ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ವಾಸವಿದ್ದರು. ಅವಿವಾಹಿತರಾದ ನಾಗರಾಜು, ಸ್ನೇಹಿತರ ಜೊತೆ ಕೊಠಡಿ ಮಾಡಿಕೊಂಡು ನೆಲೆಸಿದ್ದರು. ಕೆಲ ವರ್ಷಗಳ ಹಿಂದೆ ಇಬ್ಬರೂ ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಬಿಬಿಎಂಪಿ ವತಿಯಿಂದ ನಡೆಯುತ್ತಿದ್ದ ರಾಜಕಾಲುವೆ ಸ್ವಚ್ಛತಾ ಕೆಲಸದಲ್ಲಿ ಕಾರ್ಮಿಕರಾಗಿ ಸೇರಿಕೊಂಡಿದ್ದರು.'

'ಮೃತ ಕಾರ್ಮಿಕರು ಸ್ನೇಹಿತರ ಜೊತೆಯಲ್ಲೇ ಕೆಲಸದ ಸ್ಥಳಕ್ಕೆ ಒಟ್ಟಾಗಿ ಬರುತ್ತಿದ್ದರು. ಮೇಲ್ವಿಚಾರಕರು ಕಾರ್ಮಿಕರಿಗೆ ಕೆಲಸ ಹಂಚಿಕೆ ಮಾಡುತ್ತಿದ್ದರು. ಕೆಲಸ ಮುಗಿದ ಬಳಿಕ ಸ್ನೇಹಿತ ರೆಲ್ಲರೂ ಸೇರಿ ಮನೆಯತ್ತ ಹೋಗುತ್ತಿದ್ದರು' ಎಂದೂ ತಿಳಿಸಿದರು.

ಮೂತ್ರ ವಿಸರ್ಜನೆ ವೇಳೆ ಅವಘಡ: 'ಟಿ. ದಾಸರಹಳ್ಳಿ ಬಳಿಯ ಮಲ್ಲಸಂದ್ರದ ರಾಜಕಾಲುವೆ ಸ್ವಚ್ಛತೆ ಕೆಲಸ ಮುಗಿಸಿದ್ದ ಕರಿಯಪ್ಪ ಹಾಗೂ ನಾಗರಾಜು, ಮನೆಯತ್ತ ಹೊರಟಿದ್ದರು. ನಾಲಾ ರಸ್ತೆಯ ರಾಜಕಾಲುವೆಯಲ್ಲಿ ಕೆಲಸ ಮಾಡುತ್ತಿದ್ದ ಸ್ನೇಹಿತರನ್ನೂ ತಮ್ಮೊಂದಿಗೆ ಕರೆದೊಯ್ಯಲು ಸ್ಥಳಕ್ಕೆ ಹೋಗಿದ್ದರು' ಎಂದು ಡಿಸಿಪಿ ತಿಳಿಸಿದರು.

'ಸ್ನೇಹಿತರನ್ನು ಭೇಟಿಯಾಗಿ, ಮನೆಗೆ ಹೋಗೋಣವೆಂದು ಹೇಳಿದ್ದರು. ಸ್ನೇಹಿತರು ಹೊರಡಲು ಸಿದ್ಧತೆ ಮಾಡಿ-ಕೊಳ್ಳುತ್ತಿದ್ದರು. ಅದೇ ಸಂದರ್ಭದಲ್ಲಿ ಕರಿಯಪ್ಪ, ರಾಜಕಾಲುವೆ ತಂತಿ ಬೇಲಿ ಬಳಿ ಮೂತ್ರ ವಿಸರ್ಜನೆ ಮಾಡಲು ಹೋಗಿದ್ದರು. ಅವಾಗಲೇ ತಂತಿ ಬೇಲಿ ಮುಟ್ಟಿದ್ದರು. ತಂತಿ ಬೇಲಿಯಲ್ಲಿ ಹರಿಯುತ್ತಿದ್ದ ವಿದ್ಯುತ್ ತಾಗಿ ಕರಿಯಪ್ಪ ಸ್ಥಳದಲ್ಲೇ ಕುಸಿದು ಬಿದ್ದಿದ್ದರು. ರಕ್ಷಣೆಗೆ ಹೋದ ನಾಗರಾಜು ಅವರಿಗೂ ವಿದ್ಯುತ್ ತಗುಲಿತು. ಇಬ್ಬರೂ ಸ್ಥಳದಲ್ಲೇ ಮೃತಪಟ್ಟರು. ಸ್ಥಳದಲ್ಲಿದ್ದ ಸ್ನೇಹಿತರು, ವಿದ್ಯುತ್ ತಾಗಿರುವುದನ್ನು ಗಮನಿಸಿ ದೂರ ಸರಿದು ಪ್ರಾಣ ಉಳಿಸಿಕೊಂಡಿದ್ದಾರೆ' ಎಂದೂ ಹೇಳಿದರು.

'ಬೆಸ್ಕಾಂ ಅಧಿಕಾರಿಗಳ ಬೇಜವಾಬ್ದಾರಿ'

'ರಾಜಕಾಲುವೆ ಸುತ್ತಮುತ್ತ ಜನ ವಾಸವಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ರಾಜಕಾಲುವೆ ಸುತ್ತ ಕೆಲವೆಡೆ ಗೋಡೆ ನಿರ್ಮಿಸಲಾಗಿದೆ. ಹಲವೆಡೆ ತಂತಿ ಬೇಲಿ ಅಳವಡಿಸಲಾಗಿದೆ. ಇದೇ ಬೇಲಿಗೆ ವಿದ್ಯುತ್ ಹೈಟೆನ್ಶನ್ ತಂತಿ ತಾಗಿ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ಬೆಸ್ಕಾಂ ಅಧಿಕಾರಿಗಳ ಬೇಜವಾಬ್ದಾರಿ ಎದ್ದು ಕಾಣುತ್ತಿದೆ. ಹೀಗಾಗಿ, ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ನೋಟಿಸ್ ನೀಡಿ ವಿಚಾರಣೆ ನಡೆಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದರು.

'ತಂತಿ ಬೇಲಿ ಇರುವ ಜಾಗದಲ್ಲಿ ಹಲವರು ಓಡಾಡುತ್ತಾರೆ. ಕೆಲವರು ಮೂತ್ರ ವಿಸರ್ಜನೆ ಮಾಡುತ್ತಾರೆ. ಇಂಥ ಸ್ಥಳದ ಸಮೀಪದಲ್ಲೇ ಹೈ ಟೆನ್ಶನ್ ತಂತಿ ಇದೆ. ಇದರ ಸ್ಥಳಾಂತರಕ್ಕೆ ನಿವಾಸಿಗಳು ಹಲವು ಬಾರಿ ಒತ್ತಾಯಿಸಿದರೂ ಪ್ರಯೋಜನವಾಗಿಲ್ಲ. ಈ ಬಗ್ಗೆ ನಿವಾಸಿಗಳು ದೂರಿದ್ದಾರೆ' ಎಂದೂ ಹೇಳಿದರು.

'ಫೇಸ್‌ಬುಕ್'ನಲ್ಲಿ ಅಭಿಪ್ರಾಯ ಹಂಚಿಕೊಂಡ ಶಿಕ್ಷಣ ಸಚಿವ

ಶುಲ್ಕ ಗೊಂದಲ: ಚರ್ಚೆಗೆ ಗ್ರಾಸವಾದ ಸುರೇಶ್ ಕುಮಾರ್ ಅನಿಸಿಕೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಲಾ ಶುಲ್ಕ ಗೊಂದಲ ಬಗೆಹರಿಸಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಸಮಿತಿ ರಚಿಸುವಂತೆ ಹೈಕೋರ್ಟ್‌ಗೆ ಮನವಿ ಮಾಡಲಾಗಿದೆ. ಶಿಕ್ಷಣ ತಜ್ಞರು, ಪೋಷಕರ ಪ್ರತಿನಿಧಿಗಳು, ಖಾಸಗಿ ಶಾಲೆಗಳ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಯ ಶಿಫಾರಸು ಬಹುಶಃ ಎಲ್ಲರಿಗೂ ಸಮಂಜಸ ಆಗಬಹುದು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

'ಖಾಸಗಿ ಶಾಲೆಗಳು ಮತ್ತು ಪೋಷಕರ ನಡುವಿನ ಶುಲ್ಕ ಸಂಘರ್ಷ ಪರಿಹರಿಸಿ ಸಾಮರಸ್ಯ ತರುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ' ಎಂದು ಸುದೀರ್ಘವಾಗಿ ಬರೆದುಕೊಂಡು ಅವರು ವ್ಯಕ್ತಪಡಿಸಿರುವ ಅಭಿಪ್ರಾಯ, ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಕಾರಣವಾಗಿದೆ.

'ಬೆಂಗಳೂರಿನ ಶಾಲೆಯೊಂದು ಪೋಷಕರಿಗೆ ಸಂದೇಶ ಕಳುಹಿಸಿ, ಈ ವರ್ಷದ ಶುಲ್ಕದಲ್ಲಿ ಶೇ 20ರಷ್ಟು ರಿಯಾಯಿತಿ ನೀಡಿರುವುದಾಗಿ ತಿಳಿಸಿತು. ಆದರೆ, ಪೋಷಕರು ಶಾಲೆಗೆ ಮರು ಸಂದೇಶ ಕಳಿಸಿ,'ನಾವು ಪೂರ್ಣ ಶುಲ್ಕ ಕಟ್ಟುತ್ತೇವೆ. ನಮ್ಮ ಶಾಲೆಯ ಶಿಕ್ಷಕರಿಗೆ ತೊಂದರೆ ಆಗಬಾರದು' ಎಂದಿದ್ದಾರೆ. ಅದಕ್ಕೆ ಆ ಶಾಲೆಯ ವ್ಯವಸ್ಥಾಪಕ ಮಂಡಳಿ, ಯಾರಿಗೆ ಅಗತ್ಯವಿದೆಯೋ ಆ ಪೋಷಕರು ಶೇ 20ರಷ್ಟು ರಿಯಾಯಿತಿ ಪಡೆದುಕೊಳ್ಳಬಹುದು ಎಂದು ತಿಳಿಸಿದೆ. ಕೆಲವು ಶಾಲೆಗಳು ಶುಲ್ಕದಲ್ಲಿ ಶೇ 20ರಿಂದ 25ರಷ್ಟು ರಿಯಾಯಿತಿಯನ್ನು ಆರ್ಥಿಕವಾಗಿ ಅಶಕ್ತರಾದ ಪೋಷಕರಿಗೆ ನೀಡುವುದಾಗಿ ಹೇಳಿವೆ. ಈ ನಿರ್ಧಾರಗಳು ಇಂದಿನ ಪರಿಸ್ಥಿತಿಗೆ ಪರಿಹಾರ ಸೂಚಿಸಬಹುದಾದ ಮಾರ್ಗಗಳು' ಎಂದೂ ಸುರೇಶ್ ಕುಮಾರ್ ಬರೆದು-ಕೊಂಡಿದ್ದಾರೆ.

'ಪೋಷಕರು ಮತ್ತು ಖಾಸಗಿ ಶಿಕ್ಷಕರ ಹಿತವನ್ನು ಕಾಪಾಡುವ ಸೂತ್ರದ ಅಗತ್ಯ ನಮ್ಮ ಮುಂದಿದೆ. ಈಗ ಆ ಪರಿಹಾರದ ಬಗ್ಗೆ ಸಮಾಜ ಯೋಚಿಸಬೇಕಿದೆ. ಆರ್ಥಿಕವಾಗಿ ಸಬಲರಾಗಿದ್ದ ಪೋಷಕರೂ ಶುಲ್ಕ ಪಾವತಿ ಮಾಡಲು ಮುಂದಾಗಲಿಲ್ಲ. ಇಬ್ಬರೂ ಸರ್ಕಾರಿ ಕೆಲಸದಲ್ಲಿದ್ದು ಪ್ರತಿ ತಿಂಗಳು ತಪ್ಪದೇ ಸಂಬಳ ಪಡೆದ ಪೋಷಕರಿಗೆ ತಮ್ಮ ಮಕ್ಕಳ ಶಿಕ್ಷಕರಿಗೆ ವೇತನ ದೊರೆಯಲು ತಾವು ಶುಲ್ಕ ಕಟ್ಟಬೇಕೆಂಬ ಕರ್ತವ್ಯ ನೆನಪಿಗೆ ಬರಲಿಲ್ಲ. ಇದು ನಿಜಕ್ಕೂ ಒಳ್ಳೆಯ ಸಂಗತಿಯಲ್ಲ' ಎಂದಿದ್ದಾರೆ.

ಸಚಿವರ ಪತ್ರಕ್ಕೆ ಪ್ರತಿಕ್ರಿಯಿಸಿರುವ ಕೆಲವರು, 'ಸೂಕ್ತ ನಿರ್ಧಾರ ಕೈಗೊಂಡು ಕಠಿಣವಾಗಿ ಆಡಳಿತ ನಡೆಸಿ' ಎಂದರೆ, ಅನೇಕರು ಖಾರವಾಗಿ, ಇನ್ನೂ ಕೆಲವರು ವ್ಯಂಗ್ಯವಾಗಿ ತಿರುಗೇಟು ನೀಡಿದ್ದಾರೆ. 'ಖಾಸಗಿ ಶಾಲೆಗಳ ಪರ ತಮಟೆ ಬಾರಿಸುವುದನ್ನು ಬಿಟ್ಟು, ಮೂಗುದಾರ ಹಾಕಿ' ಎಂದು ಕೆಲವರು ಹೇಳಿದ್ದಾರೆ. 'ಖಾಸಗಿ ಶಾಲೆಗಳ ಮೇಲೆ ಹಿಡಿತ ಇಲ್ಲದೆ ಇದ್ದ ಮೇಲೆ ಶಿಕ್ಷಣ ಇಲಾಖೆ ಯಾಕೆ ಬೇಕು ಸ್ವಾಮಿ' ಎಂದು ಒಬ್ಬರು ಪ್ರಶ್ನಿಸಿದರೆ, 'ನಿಮ್ಮ ವಿವರಣೆಯಿಂದ ಸರ್ಕಾರ ಏನ್ ಮಾಡ್ತಿದೆ ಎನ್ನುವುದನ್ನು ಬಿಟ್ಟು ಇನ್ನೆಲ್ಲ ಅರ್ಥ ಆಯಿತು' ಎಂದು ಮತ್ತೊಬ್ಬರು ವ್ಯಂಗ್ಯವಾಡಿದ್ದಾರೆ. 'ಸರ್ಕಾರಿ ಶಾಲೆಗಳನ್ನು ಮರೆತಿದ್ದೀರಾ? ಈ ಶಾಲೆಗಳ ಗುಣಮಟ್ಟ ಹೆಚ್ಚಿಸಿ. ಖಾಸಗಿ ಶಾಲೆಗಳನ್ನು ಸರ್ಕಾರವೇ ನಡೆಸಲಿ' ಎಂದೂ ಕೆಲವರು ಸಲಹೆ ನೀಡಿದ್ದಾರೆ.

ನಾಗಮಂಗಲ: ಆಮ್ಲಜನಕ ಘಟಕಕ್ಕೆ ಚಾಲನೆ



ನಿರ್ಮಲಾನಂದನಾಥ ಸ್ವಾಮೀಜಿ

ನಾಗಮಂಗಲ: ತಾಲ್ಲೂಕಿನ ಬಿ.ಜಿ ನಗರದ ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಏಮ್ಸ್) ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಆಮ್ಲಜನಕ ಉತ್ಪಾದನಾ ಘಟಕಕ್ಕೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಧರ್ಮೇಂದ್ರ ಪ್ರಧಾನ್ ಮಂಗಳವಾರ ಆನ್‌ಲೈನ್ ಮೂಲಕ ಚಾಲನೆ ನೀಡಿದರು.

ಕೋವಿಡ್ 1ನೇ ಅಲೆ ತೀವ್ರಸ್ವರೂಪದಲ್ಲಿದ್ದಾಗ ಆದಿ ಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅತ್ಯಾಧುನಿಕ ಆಮ್ಲಜನಕ ಉತ್ಪಾದನಾ ಘಟಕ ನಿರ್ಮಾಣಕ್ಕೆ ಮುಂದಾಗಿದ್ದರು.

ಅದಕ್ಕಾಗಿ ಕುದುರೆಮುಖದ ಕಬ್ಬಿಣದ ಅದಿರು ಕಂಪನಿಯೊಂದರ ಮೂಲಕ ಯೂರೋಪ್‌ನಿಂದ ಅಗತ್ಯ ಉಪಕರಣಗಳನ್ನು ತರಿಸಲಾಗಿತ್ತು. ತಿಂಗಳೊಳಗೆ ಘಟಕದ ಕಾಮಗಾರಿ ಪೂರ್ಣಗೊಂಡಿದ್ದು, ಲೋಕಾರ್ಪಣೆ-ಗೊಳಿಸಲಾಯಿತು.

ಸುದ್ದಿ 2 ನಿಮಿಷ

ಪ್ರಾಣಿಗಳ ಕಲ್ಯಾಣಕ್ಕೆ ಸಹಾಯವಾಣಿ ಸಚಿವ ಪ್ರಭು ಚವ್ಹಾಣ್

ಬೆಂಗಳೂರು: 'ರಾಜ್ಯದಲ್ಲಿರುವ ಎಲ್ಲ ಪ್ರಾಣಿಗಳ ಕಲ್ಯಾಣ ಉದ್ದೇಶದಿಂದ 24X7 ಕಾರ್ಯನಿರ್ವಹಿಸಲಿರುವ 'ಪ್ರಾಣಿ ಕಲ್ಯಾಣ ಸಹಾಯವಾಣಿ' ಯನ್ನು (ವಾರ್ ರೂಮ್) ಆರಂಭಿಸಲಾಗುತ್ತಿದ್ದು, ಈ ಯೋಜನೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಬುಧವಾರ ಚಾಲನೆ ನೀಡಲಿದ್ದಾರೆ' ಎಂದು ಪಶುಸಂಗೋಪನೆ ಸಚಿವ ಪ್ರಭು ಚವ್ಹಾಣ್ ತಿಳಿಸಿದರು.



'ಈ ವಾರ್ ರೂಮ್ ಮೂಲಕ ರೈತರು, ಜಾನುವಾರು ಸಾಕಣೆದಾರರು ಅಗತ್ಯ ಮಾಹಿತಿಗಳನ್ನು ಪಡೆಯಬಹುದು. ಸಹಾಯವಾಣಿಗೆ ಕರೆ ಮಾಡಿದ ಕೆಲವೇ ಗಂಟೆಗಳಲ್ಲಿ ಇಲಾಖೆ ಅಗತ್ಯ ಕ್ರಮ ತೆಗೆದುಕೊಳ್ಳಲಿದೆ. ಸ್ವಂತ ಉದ್ಯೋಗಕ್ಕೆ ಬೇಕಾದ ಮಾಹಿತಿ, ಆರೋಗ್ಯ, ಲಸಿಕೆ ಸೇರಿದಂತೆ ಎಲ್ಲ ವಿಷಯಗಳ ವಿವರಣೆಯನ್ನೂ ಪಡೆಯಬಹುದು' ಎಂದರು.

ಆರ್‌ಟಿಇ: 4,755 ಸೀಟು ಹಂಚಿಕೆ

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ (2021-22) ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) ಅಡಿಯಲ್ಲಿ ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಲ್ಲಿ ಎಲ್‌ಕೆಜಿ ಮತ್ತು ಒಂದನೇ ತರಗತಿಯ ಉಚಿತ ಪ್ರವೇಶಕ್ಕೆ ಅರ್ಹ 11,531 ಅರ್ಜಿಗಳನ್ನು ಮೊದಲ ಸುತ್ತಿನ ಲಾಟರಿಗೆ ಪರಿಗಣಿಸಲಾಗಿದ್ದು, 4,755 ಮಕ್ಕಳಿಗೆ ಸೀಟು ಹಂಚಿಕೆ ಮಾಡಲಾಗಿದೆ.

ಆನ್‌ಲೈನ್ ಮೂಲಕ ಮೊದಲನೇ ಸುತ್ತಿನ ಲಾಟರಿ ಆಯ್ಕೆ ಪ್ರಕ್ರಿಯೆ ಮಂಗಳವಾರ ನಡೆಯಿತು. ಆಯ್ಕೆಯಾದ ಮಕ್ಕಳ ಪೋಷಕರು ನೋಂದಾಯಿತ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಮೂಲಕ ಸೀಟು ಹಂಚಿಕೆ ಮಾಹಿತಿ ರವಾನೆ ಆಗಲಿದೆ. ಪೋಷಕರು ಇದೇ 25ರಿಂದ ಜುಲೈ 9ರ ಒಳಗೆ ಸೀಟು ಹಂಚಿಕೆಯಾದ ಶಾಲೆಗಳಿಗೆ ತೆರಳಿ ತಮ್ಮ ಮಕ್ಕಳ ದಾಖಲಾತಿ ಮಾಡಿಕೊಳ್ಳಬೇಕು. ಹಂಚಿಕೆ ವಿವರ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿಯೂ (www.schooleducation.kar.nic.in) ಲಭ್ಯವಿದೆ.

'ವಿದ್ಯಾರ್ಥಿಗಳ ದಾಖಲೆಗಳನ್ನು ಪರಿಶೀಲಿಸಿ ಸೀಟು ಹಂಚಿಕೆ ಮಾಡಲಾಗಿದೆ. ಖಾಸಗಿ ಶಾಲೆಯವರು ಮತ್ತೊಮ್ಮೆ ದಾಖಲೆ ಪರಿಶೀಲಿಸುವ ನೆಪದಲ್ಲಿ ಪೋಷಕರನ್ನು ಅಲೆದಾಡಿಸಬಾರದು' ಎಂದು ಆರ್‌ಟಿಇ ವಿದ್ಯಾರ್ಥಿಗಳು, ಪೋಷಕರ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಬಿ.ಎನ್. ಯೋಗಾನಂದ ತಿಳಿಸಿದರು.

ಜುಲೈ–ಆಗಸ್ಟ್‌ನಲ್ಲಿ ಜೆಇಇ ಮೇನ್ಸ್, ಸೆಪ್ಟೆಂಬರ್‌ಗೆ ನೀಟ್?

ನವದೆಹಲಿ(ಪಿಟಿಐ): ಎಂಜಿನಿಯರಿಂಗ್ ಪ್ರವೇಶಕ್ಕಾಗಿ ಬಾಕಿ ಇರುವ ಜೆಇಇ ಮೇನ್ಸ್ ಪ್ರವೇಶ ಪರೀಕ್ಷೆಗಳನ್ನು ಜುಲೈ ಮತ್ತು ಆಗಸ್ಟ್‌ನಲ್ಲಿ ನಡೆಸಲು ಹಾಗೂ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ನಡೆಸುವ ನೀಟ್ ಪರೀಕ್ಷೆಯನ್ನು ಸೆಪ್ಟೆಂಬರ್‌ಗೆ ಮುಂದೂಡುವ ಬಗ್ಗೆ ಕೇಂದ್ರ ಶಿಕ್ಷಣ ಸಚಿವಾಲಯ ಚಿಂತನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಆದರೆ, ಈ ನಿಟ್ಟಿನಲ್ಲಿ ಇನ್ನೂ ಅಂತಿಮ ನಿರ್ಧಾರವನ್ನು ಕೈಗೊಂಡಿಲ್ಲ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೋವಿಡ್–19 ಪರಿಸ್ಥಿತಿ-ಯನ್ನು ಸಚಿವಾಲಯವು ಪರಿಶೀಲಿಸುವ ಪ್ರಕ್ರಿಯೆಯಲ್ಲಿದೆ ಎನ್ನಲಾಗಿದೆ.

ಪ್ರಸಕ್ತ ಸಾಲಿನಿಂದ ಜೆಇಇ ಮೇನ್ಸ್ ಅನ್ನು ವರ್ಷಕ್ಕೆ ನಾಲ್ಕು ಬಾರಿ ನಡೆಸಲು ತೀರ್ಮಾನಿಸಲಾಗಿದೆ.

ಸಚಿವರು, ಶಾಸಕರ ಕಚೇರಿ ಎದುರು ಜನಾಗ್ರಹ, ಜನಪರ ಸಂಘಟನೆಗಳ ಪ್ರತಿಭಟನೆ

ಸಮಗ್ರ ಪ್ಯಾಕೇಜ್‌ಗೆ ಆಗ್ರಹ

ಪ್ರಜಾವಾಣಿ ವಾರ್ತೆ



ಜನಾಗ್ರಹ ಆಂದೋಲನದ ವತಿಯಿಂದ ಸಚಿವ ವಿ. ಸೋಮಣ್ಣ ಅವರ ವಿಜಯನಗರದ ಕಚೇರಿ ಹತ್ತಿರ ಸೋಮವಾರ ಪ್ರತಿಭಟನೆ ನಡೆಸಲಾಯಿತು– ಪ್ರಜಾವಾಣಿ ಚಿತ್ರ

ಬೆಂಗಳೂರು: ಲಾಕ್‌ಡೌನ್‌ನಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ಬಡವರು ಹಾಗೂ ಕೂಲಿ ಕಾರ್ಮಿಕರಿಗೆ ಸಮಗ್ರ ಪ್ಯಾಕೇಜ್ ನೀಡುವಂತೆ ಒತ್ತಾಯಿಸಿ ಜನಾಗ್ರಹ ಆಂದೋಲನವು ಮಂಗಳವಾರ ರಾಜ್ಯವ್ಯಾಪಿ ಮುಷ್ಕರ ನಡೆಸಿತು.

‘ಎಲ್ಲ ಬಡವರಿಗೆ ಸಮಗ್ರ ಪರಿಹಾರ ಕೊಡಲೇಬೇಕು’, ‘ಎಲ್ಲರಿಗೂ ಲಸಿಕೆಯನ್ನು ಉಚಿತವಾಗಿ ನೀಡಬೇಕು’, ‘ರೈತರಿಗೆ ಸಬ್ಸಿಡಿ ದರದಲ್ಲಿ ಬಿತ್ತನೆ ಬೀಜ ವಿತರಿಸಬೇಕು’ ‘ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಗಳ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ನೀಡಬೇಕು’ ಎಂಬ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಸಾಗಿದ ಪ್ರತಿಭಟನಾಕಾರರು ಮನವಿ ಪತ್ರ ಸಲ್ಲಿಸಿದರು.

ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಶಾಸಕರು ಹಾಗೂ ಉಸ್ತುವಾರಿ ಸಚಿವರ ಕಚೇರಿಗಳ ಎದುರು ಖಾಲಿ ಚೀಲಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು. ಶೀಘ್ರವೇ ಮುಖ್ಯಮಂತ್ರಿಗಳ ಜೊತೆ ಸಭೆ ನಿಗದಿ ಮಾಡಿಸಬೇಕೆಂದು ಆಗ್ರಹಿಸಿದರು.

ಬೆಂಗಳೂರಿನ ವಿಜಯನಗರದಲ್ಲಿರುವ ವಸತಿ ಸಚಿವ ವಿ.ಸೋಮಣ್ಣ ಅವರ ಕಚೇರಿಯತ್ತ ಮೆರವಣಿಗೆಯಲ್ಲಿ ಸಾಗಿದ್ದ ಪ್ರತಿಭಟನಕಾರರನ್ನು ಪೊಲೀಸರು ತಡೆದರು.

‘ಜನಾಗ್ರಹ ಹಾಗೂ ಜನಪರ ಸಂಘಟನೆಗಳು ಒಟ್ಟಾಗಿ ಸರ್ಕಾರದ ಮೇಲೆ ಒತ್ತಡ ಹೇರಿದ್ದರಿಂದ ಮುಖ್ಯಮಂತ್ರಿಯವರು ಪರಿಹಾರ ಪ್ಯಾಕೇಜ್ ಘೋಷಿಸಿದ್ದರು. ಇವು ಯಾವುದಕ್ಕೂ ಸಾಲುವುದಿಲ್ಲ. ಹಲವು ಜಿಲ್ಲೆಗಳಲ್ಲಿ ಲಾಕ್‌ಡೌನ್ ಮುಂದುವರಿದಿದೆ. ಅಲ್ಲಿನ ಜನ ಕೆಲಸವಿಲ್ಲದೆ ಕಂಗೆಟ್ಟಿದ್ದಾರೆ. ಅವರಿಗೆ ಸೂಕ್ತ ನೆರವು ಒದಗಿಸಬೇಕು. ಕೋವಿಡ್ ಮೂರನೇ ಅಲೆಯನ್ನು ಗಮನದಲ್ಲಿಟ್ಟುಕೊಂಡು ಈಗಿನಿಂದಲೇ ವೈದ್ಯಕೀಯ ಸೌಲಭ್ಯಗಳನ್ನು ಬಲಪಡಿಸಬೇಕು’ ಎಂದು ಹೋರಾಟಗಾರ ನೂರ್ ಶ್ರೀಧರ್ ತಿಳಿಸಿದರು.

ಲೇಖಕಿ ಬಿ.ಟಿ.ಲಲಿತಾ ನಾಯ್ಕ್, ‘ಸರ್ಕಾರವು ಅರೆಬರೆ ಪ್ಯಾಕೇಜ್ ಪ್ರಕಟಿಸುವ ಮೂಲಕ ಜನರ ಕಣ್ಣೊರೆಸುವ ತಂತ್ರ ಅನುಸರಿಸುತ್ತಿದೆ. ಇಂತಹ ನಿಲುವುಗಳಿಂದ ಯಾರಿಗೂ ಪ್ರಯೋಜನವಿಲ್ಲ. ಹೀಗಾಗಿ ಕೂಡಲೇ ಪರಿಪೂರ್ಣವಾದ ಪ್ಯಾಕೇಜ್ ಘೋಷಿಸಿ ಜನರ ಸಂಕಷ್ಟ ದೂರ ಮಾಡಬೇಕು. ನಮ್ಮ ಐದು ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕು’ ಎಂದು ಆಗ್ರಹಿಸಿದರು.

ಭೂಮಿ ಮತ್ತು ವಸತಿ ಹಕ್ಕು ವಂಚಿತ ಹೋರಾಟ ಸಮಿತಿಯ ಸಿರಿಮನೆ ನಾಗರಾಜ್, ‘ಲಾಕ್‌ಡೌನ್‌ನಿಂದಾಗಿ ಜನರ ಜೀವನ ನಿರ್ವಹಣೆ ಕಷ್ಟವಾಗಿದೆ. ಸರ್ಕಾರ ₹2 ಸಾವಿರ ನೆರವು ನೀಡಿದ್ದು, ಅದು ಯಾವುದಕ್ಕೂ ಸಾಲುವುದಿಲ್ಲ. ಕೋವಿಡ್ ಸಂಪೂರ್ಣವಾಗಿ ಕಡಿಮೆಯಾಗುವವರೆಗೂ ಪ್ರತಿ ಬಡ ಕುಟುಂಬಕ್ಕೆ ಸಮಗ್ರ ಪಡಿತರ ಒದಗಿಸಲು ಕ್ರಮ ಕೈಗೊಳ್ಳಬೇಕು’ ಎಂದು ಹೇಳಿದರು.

ಜನಾಗ್ರಹ ಆಂದೋಲನದ ಯೂಸುಫ್ ಖನ್ನಿ, ಕರ್ನಾಟಕ ಜನಾಂದೋಲನದ ಮರಿಯಪ್ಪ, ಮಹಿಳಾ ಮುನ್ನಡೆಯ ಗೌರಿ ಹಾಗೂ ಕರ್ನಾಟಕ ವಿದ್ಯಾರ್ಥಿ ಸಂಘಟನೆಯ ಮುಖಂಡರು ಇದ್ದರು.

‘ಮುಖ ಮುಚ್ಕೊಳಿ, ಲಸಿಕೆ ಚುಚ್ಕೊಳಿ’



ಜಾಗೃತಿ ಹಾಡಿನಲ್ಲಿ ನಟ ಸಾಯಿ ಕುಮಾರ್

ಬೆಂಗಳೂರು: ‘ಮುಖ ಮುಚ್ಕೊಂಡು ಬಾ, ಮುಖ ಮುಚ್ಕೊಂಡು ಹೋಗಲೇ. ಅವನಜ್ಜಿ ಆ ಕೊರೊನಾ ಹೋಗಿಲ್ಲ. ನಮಗೆ ಬುದ್ಧಿನೂ ಬಂದಿಲ್ಲ...’

– ಇದು ಕೋವಿಡ್ ಬಗ್ಗೆ ಜಾಗೃತಿ ಮೂಡಿಸಲು ಕರ್ನಾಟಕ ಪಲ್ಮೋನೋಲಜಿಸ್ಟ್ ಅಸೋಸಿಯೇಷನ್ ರೂಪಿಸಿದ ರ್‍ಯಾಪ್ ಹಾಡಿನ ಸಾಲುಗಳು. ಈ ಹಾಡು ಸಾಮಾಜಿಕ ಜಾಲತಾಣಗಳಲ್ಲಿ ಚಾಲ್ತಿಯಲ್ಲಿದೆ.

1.40 ನಿಮಿಷದ ಈ ಹಾಡಿನಲ್ಲಿ ಗಾಯಕರು, ಚಲನಚಿತ್ರ ಕಲಾವಿದರು, ಕ್ರಿಕೆಟ್ ತಾರೆಯರು, ವೈದ್ಯರು ಕಾಣಿಸಿಕೊಂಡಿದ್ದಾರೆ. ಹಂತ ಹಂತವಾಗಿ ಲಾಕ್‌ಡೌನ್ ತೆರವುಗೊಳ್ಳುತ್ತಿರುವ ಕಾರಣ ಈ ವೇಳೆ ಎಚ್ಚರ ತಪ್ಪದಂತೆ ಕಿರು ವಿಡಿಯೋ ಮೂಲಕ ಅವರು ಸಂದೇಶ ಸಾರಿದ್ದು, ಮುಖಗವಸು ಧರಿಸುವಿಕೆ, ಅಂತರ ಕಾಯ್ದುಕೊಳ್ಳುವಿಕೆ, ಸೋಂಕು ನಿವಾರಕ ದ್ರಾವಣದಿಂದ ಕೈಗಳ ಸ್ವಚ್ಛತೆ ಸೇರಿದಂತೆ ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವಂತೆ ಸೂಚಿಸಿದ್ದಾರೆ. ಅದೇ ರೀತಿ, ಈ ವೇಳೆ ಮೈಮರೆತರೆ ಮತ್ತೆ ಅಪಾಯವನ್ನು ಎದುರುಸಬೇಕಾದಿತು ಎಂದು ಎಚ್ಚರಿಕೆ ನೀಡಿದ್ದಾರೆ.

ರಾಜೇಶ್ ರಾಮಸ್ವಾಮಿ ಅವರ ಸಾಹಿತ್ಯ, ದೀಪಕ್ ಅಲೆಕ್ಸಾಂಡರ್ ಅವರ ಸಂಗೀತ ಈ ಹಾಡಿಗೆ ಇದೆ. ರ್‍ಯಾಪರ್ ಅಲೋಕ್, ನಟ ಸಾಯಿ ಕುಮಾರ್, ನಟಿಯರಾದ ಆಶ್ವಿಥಿ ಶೆಟ್ಟಿ ಹಾಗೂ ಅದ್ವಿತಿ ಶೆಟ್ಟಿ, ಕ್ರಿಕೆಟ್ ಆಟಗಾರ ಕೃಷ್ಣಪ್ಪ ಗೌತಮ್, ಆರ್.ಜೆ ಶ್ರದ್ಧಾ, ಗಾಯಕಿ ಸುಹಾನಾ ಸೈಯದ್, ವೈದ್ಯರಾದ ಡಾ.ಕೆ.ಎಸ್. ಸತೀಶ್, ಡಾ. ವಿವೇಕ್ ಪಡೇಗಲ್, ಡಾ. ಸುಮಾ ಪಿ. ಕುಮಾರ್ ಸೇರಿದಂತೆ ಹಲವರು ಈ ವಿಡಿಯೋದಲ್ಲಿ ಕಾಣಿಸಿಕೊಂಡಿದ್ದಾರೆ.

‘ಲಾಕ್‌ಡೌನ್ ತೆರವಾದ ಬಳಿಕ ಜೈಲಿನಿಂದ ಬಿಡುಗಡೆಯಾದ ಹುಚ್ಚರ ತರ ಬೀದಿಯಲ್ಲಿ ಓಡುತ್ತೇವೆ. ಎಂ.ಜಿ. ರಸ್ತೆಯಲ್ಲಿ ವ್ಹೀಲಿಂಗ್ ಶುರುವಾಗುತ್ತದೆ. ನಂದಿಹಿಲ್ಸ್, ಗೋಕರ್ಣ, ಗೋವಾ ಅಂತ ಸುತ್ತಾಟ ನಡೆಸಿ, ಪಾರ್ಟಿ ಮಾಡುತ್ತೇವೆ. ಇದರಿಂದ ಮತ್ತೆ ಸಮಸ್ಯೆಯನ್ನು ತಂದೊಡ್ಡಿಕೊಳ್ಳುತ್ತೇವೆ. ಹಾಗಾಗಿ, ಲಾಕ್‌ಡೌನ್ ತೆರವಾದರೂ ಇನ್ನಷ್ಟು ದಿನ ಕೋವಿಡ್ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸೋಣ. ಲಸಿಕೆ ಪಡೆದುಕೊಳ್ಳೋಣ’ ಎಂಬ ಸಂದೇಶ ವಿಡಿಯೊದ ಆಶಯವಾಗಿದೆ.

ವಿಡಿಯೋ ಲಿಂಕ್: https://youtu.be/tukkPqQH6Jo

ಬಿಡಿಎ: ಆಸ್ತಿ ತೆರಿಗೆ ಪಾವತಿಗೆ ಇನ್ನೂ ತೆರೆದಿಲ್ಲ ಕಿಂಡಿ

ಒಂದನೇ ಪುಟದಿಂದ

ಈ ಬಗ್ಗೆ ಪ್ರತಿಕ್ರಿಯಿಸಿದ ಬಿಡಿಎ ಆರ್ಥಿಕ ಸದಸ್ಯ ಎಸ್.ಎಂ.ರಾಮಪ್ರಸಾದ್, ‘ಆಸ್ತಿ ತೆರಿಗೆಗಳನ್ನು ಪರಿಷ್ಕರಿಸಲಾಗಿದೆ. ಹಾಗಾಗಿ ಆಸ್ತಿತೆರಿಗೆ ಪಾವತಿ ತಂತ್ರಾಂಶದಲ್ಲೂ ಪರಿಷ್ಕೃತ ತೆರಿಗೆ ದರವನ್ನು ಅಳವಡಿಸಲಾಗುತ್ತಿದೆ. ಜೊತೆಗೆ ಈ ತಂತ್ರಾಂಶವನ್ನೂ ಮೇಲ್ದರ್ಜೆಗೇರಿಸಬೇಕಾಗಿದೆ. ಹಾಗಾಗಿ ಆಸ್ತಿ ತೆರಿಗೆ ಪಾವತಿಗೆ ಅವಕಾಶ ಕಲ್ಪಿಸುವಲ್ಲಿ ಸ್ವಲ್ಪ ವಿಳಂಬವಾಗಿದೆ’ ಎಂದು ಮಾಹಿತಿ ನೀಡಿದರು.

‘ಆಸ್ತಿ ತೆರಿಗೆಯನ್ನು ತಡವಾಗಿ ಪಾವತಿಸಿದವರಿಗೆ ನಾವು ದಂಡ ಹಾಕುವುದಿಲ್ಲ. ಹಾಗಾಗಿ ತೆರಿಗೆಯನ್ನು ಆರ್ಥಿಕ ವರ್ಷದ ಯಾವ ತಿಂಗಳಿನಲ್ಲಿ ಕಟ್ಟಿದರೂ ಅದರ ಮೊತ್ತ ವ್ಯತ್ಯಾಸವಾಗುವುದಿಲ್ಲ. ಹಾಗಾಗಿ ನಿವೇಶನದಾರರು ಆತಂಕಪಡುವ ಅಗತ್ಯ ಇಲ್ಲ’ ಎಂದು ಸ್ಪಷ್ಟಪಡಿಸಿದರು.

ತಂತ್ರಾಂಶ ಸುಧಾರಣೆಯ ಹೊಣೆ ಹೊತ್ತ ಉಪಕಾರ್ಯದರ್ಶಿ–1 ಎನ್. ಎಸ್.ಮಧು, ‘ತಂತ್ರಾಂಶ ಸುಧಾರಣೆ ಪ್ರಕ್ರಿಯೆ ಸ್ವಲ್ಪ ವಿಳಂಬವಾಗಿದೆ. ಇನ್ನೊಂದು ವಾರದಲ್ಲಿ ಸಮಸ್ಯೆ ಬಗೆಹರಿಯಲಿದ್ದು, ನಿವೇಶನದಾರರು ಆನ್‌ಲೈನ್ ಮೂಲಕವೇ ಆಸ್ತಿ ತೆರಿಗೆ ಪಾವತಿಸಬಹುದು’ ಎಂದರು.

‘ಸೌಕರ್ಯ ಕೊಡದೆ ತೆರಿಗೆ ವಿಧಿಸುವುದು ಸರಿಯೇ?’

‘ಪ್ರಾಧಿಕಾರವು ನಿವೇಶನದಾರರಿಗೆ ಆಸ್ತಿ ತೆರಿಗೆಯನ್ನು ವಿಧಿಸುವುದು ಮೂಲಸೌಕರ್ಯಗಳ ನಿರ್ವಹಣೆಗಾಗಿ. ಆದರೆ, ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯಗಳನ್ನು ಪ್ರಾಧಿಕಾರವು ಇನ್ನೂ ಕಲ್ಪಿಸಿಲ್ಲ. ಸೌಕರ್ಯಗಳೇ ಇಲ್ಲದ ಖಾಲಿ ನಿವೇಶನಗಳಿಗೆ ತೆರಿಗೆ ಕಟ್ಟಿಸಿಕೊಳ್ಳುವುದು ಯಾವ ನ್ಯಾಯ’ ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆಯ ಮುಕ್ತ ವೇದಿಕೆಯ ಸೂರ್ಯಕಿರಣ್ ಪ್ರಶ್ನಿಸಿದರು.

‘ಬಡಾವಣೆಗೆ ಎಲ್ಲ ರೀತಿಯ ಮೂಲಸೌಕರ್ಯಗಳನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸುವವರೆಗೆ ಬಿಡಿಎ ನಮ್ಮ ಬಡಾವಣೆಯಲ್ಲಿ ವಾರ್ಷಿಕ ತೆರಿಗೆ ವಸೂಲಿ ಮಾಡುವುದನ್ನು ನಿಲ್ಲಿಸಬೇಕು. 2016 ರಿಂದ ಇಲ್ಲಿಯವರೆಗೂ ನಾವು ಪಾವತಿಸಿರುವ ತೆರಿಗೆಯನ್ನು ಬಡಾವಣೆಯ ಮೂಲಸೌಕರ್ಯ ಸಂಪೂರ್ಣ ಅಭಿವೃದ್ಧಿಯಾದ ನಂತರದ ವರ್ಷಗಳಿಗೆ ಸರಿಹೊಂದಿಸಬೇಕು’ ಎಂದು ಅವರು ಒತ್ತಾಯಿಸಿದರು.

ಕೊರೊನಾ ವೈರಸ್: ರೂಪಾಂತರಿ ಪತ್ತೆಗೆ ಜೀನೋಮ್ ಸೀಕ್ವೆನ್ಸಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ವೈರಸ್‌ನ ಬೇರೆ ಬೇರೆ ರೂಪಾಂತರಿ ತಳಿಗಳು ಪತ್ತೆಯಾಗುತ್ತಿರುವುದು ಬಿಬಿಎಂಪಿಯ ಚಿಂತೆಗೆ ಕಾರಣವಾಗಿದೆ.

ಇದುವರೆಗೆ ಕೊರೊನಾ ವೈರಸ್‌ನ ರೂಪಾಂತರಿ ಪತ್ತೆಗೆ ಆರೋಗ್ಯ ಇಲಾಖೆ ಮಾತ್ರ ಗಂಟಲದ ದ್ರವದ ಮಾದರಿಗಳ ಜೀನೋಮ್ ಸೀಕ್ವೆನ್ಸಿಂಗ್ (ಡಿಎನ್‌ಎ ಜೋಡಣೆಯ ಕ್ರಮ) ಪತ್ತೆ ಪರೀಕ್ಷೆ ನಡೆಸುತ್ತಿತ್ತು. ಬಿಬಿಎಂಪಿಯೂ ಬುಧವಾರದಿಂದ ಜೀನೋಮ್ ಸೀಕ್ವೆನ್ಸಿಂಗ್ ಪರೀಕ್ಷೆ ನಡೆಸಲಿದೆ.

‘ಕೊರೋನಾ ವೈರಾಣುವಿನ ಡೆಲ್ಟಾ ಹಾಗೂ ಡೆಲ್ಟಾ ಪ್ಲಸ್ ರೂಪಾಂತರಿ ತಳಿಗಳು ಪತ್ತೆಯಾಗುತ್ತಿರುವುದರಿಂದ ಬಿಬಿಎಂಪಿಯೂ ಜೀನೋಮ್ ಸೀಕ್ವೆನ್ಸಿಂಗ್ ಪರೀಕ್ಷೆಗಳನ್ನು ನಡೆಸಲಿದೆ. ಸೋಂಕು ದೃಢಪಡುವ ಗಂಟಲ ದ್ರವಗಳ ಮಾದರಿಗಳಲ್ಲಿ ಶೇ 5ರಷ್ಟನ್ನು ಈ ಪ್ರಕ್ರಿಯೆಗೆ ಒಳಪಡಿಸಲಿದ್ದೇವೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸುದ್ದಿಗಾರರಿಗೆ ಮಂಗಳವಾರ ತಿಳಿಸಿದರು.

‘ಇದುವರೆಗೆ ಆರೋಗ್ಯ ಇಲಾಖೆ ನಗರದ ಎರಡು ಪ್ರಯೋಗಾಲಯಗಳಲ್ಲಿ ಜೀನೋಮ್ ಸೀಕ್ವೆನ್ಸಿಂಗ್ ನಡೆಸುತ್ತಿತ್ತು. ಬುಧವಾರದಿಂದ ಬಿಬಿಎಂಪಿಯೂ ಒಂದು ಪ್ರಯೋಗಾಲಯದಲ್ಲಿ ಜೀನೋಮ್ ಸೀಕ್ವೆನ್ಸಿಂಗ್ ಪರೀಕ್ಷೆ ನಡೆಸಲಿದೆ’ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ಹಿರಿಯ ಅಧಿಕಾರಿ ಮಾಹಿತಿ ನೀಡಿದರು.

‘ಡೆಲ್ಟಾ ಪ್ಲಸ್ ರೂಪಾಂತರಿಯಲ್ಲಿ ಏನೇನು ಬದಲಾವಣೆಗಳಾಗಿವೆ ಎಂಬ ಬಗ್ಗೆ ತಜ್ಞರ ಸಮಿತಿ ಅಧ್ಯಯನ ನಡೆಸುತ್ತಿದೆ. ಸಮಿತಿಯ ಶಿಫಾರಸಿನ ಆಧಾರದಲ್ಲಿ ಅದರ ಹರಡುವಿಕೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಿದ್ದೇವೆ’ ಎಂದು ಮುಖ್ಯ ಆಯುಕ್ತರು ತಿಳಿಸಿದರು.

‘ಬೇರೆ ರಾಜ್ಯಗಳಿಂದ ನಗರಕ್ಕೆ ಬರುವವರನ್ನು ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸುತ್ತಿದ್ದೇವೆ. ಕೋವಿಡ್ ಮೊದಲ ಅಲೆಗೆ ಹೋಲಿಸಿದರೆ, ಎರಡನೇ ಅಲೆಯ ಸಂದರ್ಭದಲ್ಲಿ ರಾಜ್ಯಗಳ ನಡುವಿನ ಸಂಚಾರಕ್ಕೆ ನಿರ್ಬಂಧ ಕಡಿಮೆ ಮಾಡಲಾಗಿತ್ತು. ಆದರೂ ಸಮಸ್ಯಾತ್ಮಕ ಸನ್ನಿವೇಶಗಳು ಎದುರಾದರೆ ನಿವಾರಣೆಗೆ ಅಗತ್ಯ ಕ್ರಮ ಕೈಗೊಳ್ಳಲಿದ್ದೇವೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ನಗರದ ಬಹುತೇಕ ವಾರ್ಡ್‌ಗಳಲ್ಲಿ ಕೋವಿಡ್ ಸೋಂಕು ಪತ್ತೆ ದರ ಶೇ 8ಕ್ಕಿಂತ ಕಡಿಮೆ ಇದೆ. ಈಗ ನಗರದಲ್ಲಿ ನಿತ್ಯ 800ರಿಂದ 900ರಷ್ಟು ಕೋವಿಡ್ ಪ್ರಕರಣಗಳು ಮಾತ್ರ ಪತ್ತೆಯಾಗುತ್ತಿವೆ. ಕೆಲ ವಾರ್ಡ್‌ನಲ್ಲಿ ಒಂದು ದಿನ ಹೆಚ್ಚು ಪ್ರಕರಣಗಳು ಪತ್ತೆಯಾದರೆ, ಇನ್ನೊಂದು ದಿನ ಬೇರೆ ವಾರ್ಡ್‌ನಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಿರುತ್ತದೆ. ಒಂದೇ ವಾರ್ಡ್‌ನಲ್ಲಿ ಸತತ ನಾಲ್ಕೈದು ಪ್ರಕರಣ ಪತ್ತೆಯಾದರೆ ಸೋಂಕು ನಿಯಂತ್ರಿಸಲು ಕಠಿಣ ಕ್ರಮ ಕೈಗೊಳ್ಳುತ್ತಿದ್ದೇವೆ’ ಎಂದರು.

ಕಪ್ಪು ಶಿಲೀಂಧ್ರ: 58 ವರ್ಷದ ರೋಗಿಗೆ ಚಿಕಿತ್ಸೆ ಯಶಸ್ವಿ

ಬೆಂಗಳೂರು: ಕಪ್ಪು ಶಿಲೀಂಧ್ರ ಸೋಂಕಿಗೆ ಒಳಗಾಗಿದ್ದ ಕೋವಿಡ್ ಪೀಡಿತ 58 ವರ್ಷದ ಮಹಿಳೆಯೊಬ್ಬರಿಗೆ ನಗರದ ರಾಜರಾಜೇಶ್ವರಿ ವೈದ್ಯಕೀಯ ಕಾಲೇಜಿನ ವೈದ್ಯರು ಯಶಸ್ವಿಯಾಗಿ ಚಿಕಿತ್ಸೆ ನೀಡಿದ್ದಾರೆ.

ತೀವ್ರ ಉಸಿರಾಟದ ಸಮಸ್ಯೆ (ಸಾರಿ) ಕಾಣಿಸಿಕೊಂಡ ಕಾರಣ ಮಹಿಳೆಯು ಆಸ್ಪತ್ರೆಗೆ ಜೂ.3ರಂದು ದಾಖಲಾಗಿದ್ದರು. ಕೋವಿಡ್ ಪರೀಕ್ಷೆ ನಡೆಸಿದಾಗ ಸೋಂಕಿತರಾಗಿರುವುದು ದೃಢಪಟ್ಟಿತ್ತು.

ಚಿಕಿತ್ಸೆಯ ಅವಧಿಯಲ್ಲಿ ತಲೆಯ ಎಡಭಾಗದಲ್ಲಿ ನೋವು, ಕಣ್ಣಿನ ನೋವು, ಕೆನ್ನೆಯ ಎಡ ಭಾಗದಲ್ಲಿ ಮರಗಟ್ಟುವಿಕೆ ಹಾಗೂ ತುಟಿಯ ಭಾಗದಲ್ಲಿ ನೋವು ಸೇರಿದಂತೆ ವಿವಿಧ ಸಮಸ್ಯೆಗಳು ಮಹಿಳೆಗೆ ಕಾಣಿಸಿಕೊಂಡಿದ್ದವು. ಹೀಗಾಗಿ, ಮೂಗಿನ ಎಂಡೋಸ್ಕೋಪಿ ನಡೆಸುವ ಜತೆಗೆ ಸೂಕ್ಷ್ಮ ಜೀವವಿಜ್ಞಾನ ಮತ್ತು ವಿಕಿರಣಶಾಸ್ತ್ರದ ತನಿಖೆಯ ಆಧಾರ ಮೇಲೆ ಕಪ್ಪು ಶಿಲೀಂಧ್ರ ಸೋಂಕು ತಗುಲಿರುವುದನ್ನು ನಿರ್ಧರಿಸಲಾಯಿತು ಎಂದು ಆಸ್ಪತ್ರೆ ತಿಳಿಸಿದೆ.

ವಿವಿಧ ವೈದ್ಯಕೀಯ ತಜ್ಞರ ತಂಡವು ರೋಗಿಗೆ ವೈದ್ಯಕೀಯ ಸೇವೆ ಒದಗಿಸಿತು. ಜೂ.18ರಂದು ಮಹಿಳೆ ಚೇತರಿಸಿಕೊಂಡು, ಮನೆಗೆ ತೆರಳಿದರು ಎಂದು ಪ್ರಕಟಣೆ ಹೇಳಿದೆ.

‘ಮಕ್ಕಳಲ್ಲಿ ಸೋಂಕು ಪತ್ತೆ: ಅನುಪಾತ ಹೆಚ್ಚಳವಿಲ್ಲ’

‘ನಗರದಲ್ಲಿ ಮಕ್ಕಳಲ್ಲಿ ಸೋಂಕು ಪತ್ತೆ ದರದಲ್ಲಿ ಅಷ್ಟೇನು ಏರಿಳಿತವಿಲ್ಲ. ಅದು ಒಂದೇ ಅನುಪಾತದಲ್ಲಿದೆ. ಮುಂಬರುವ ದಿನಗಳಲ್ಲಿ 18 ವರ್ಷ ಮೇಲ್ಪಟ್ಟವರಿಗೆಲ್ಲ ಕೋವಿಡ್ ಲಸಿಕೆ ಕೊಡಲಿದ್ದೇವೆ. ಆದರೆ, ಮಕ್ಕಳಿಗೆ ಲಸಿಕೆ ನೀಡುತ್ತಿಲ್ಲ. ವಯಸ್ಕರೆಲ್ಲರೂ ಲಸಿಕೆ ಪಡೆದರೆ, ಮಕ್ಕಳಿಗೆ ಸೋಂಕು ತಗಲುವ ಸಾಧ್ಯತೆಗಳು ಕಡಿಮೆ ಆಗಲಿವೆ’ ಎಂದು ಗೌರವ್ ಗುಪ್ತ ತಿಳಿಸಿದರು.

ಲಸಿಕಾ ಅಭಿಯಾನ: ರಾಜ್ಯದಲ್ಲೇ ಚಿಂತಾಮಣಿಗೆ ಮೊದಲ ಸ್ಥಾನ

ಚಿಂತಾಮಣಿ: ರಾಜ್ಯದಲ್ಲಿ ಸೋಮವಾರ ನಡೆದ ಕೋವಿಡ್-19 ಲಸಿಕಾ ಅಭಿಯಾನದಲ್ಲಿ 10,867 ಮಂದಿಗೆ ಲಸಿಕೆ ನೀಡುವ ಮೂಲಕ ಚಿಂತಾಮಣಿ ತಾಲ್ಲೂಕು ರಾಜ್ಯದಲ್ಲೇ ಪ್ರಥಮ ಸ್ಥಾನ ಗಳಿಸಿದೆ.

ಚಿಂತಾಮಣಿ ಪಟ್ಟಣದಲ್ಲಿ 1,476 ಹಾಗೂ ಗ್ರಾಮೀಣ ಪ್ರದೇಶದಲ್ಲಿ 9,391 ಜನರು ಸೇರಿ ಒಟ್ಟು 10,867 ಜನರಿಗೆ ಒಂದೇ ದಿನ ಲಸಿಕೆ ಹಾಕುವ ಮೂಲಕ ರಾಜ್ಯದಲ್ಲಿ ಹೆಚ್ಚಿನ ಜನರಿಗೆ ಲಸಿಕೆ ನೀಡಿದ ತಾಲ್ಲೂಕು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ತಹಶೀಲ್ದಾರ್ ಡಿ.ಹನುಮಂತರಾಯಪ್ಪ ಸುದ್ದಿಗಾರರಿಗೆ ತಿಳಿಸಿದರು.

ನಗರದ ಕೋವಿಡ್ ಅಂಕಿ–ಅಂಶ

12,07,096 ▲	ಒಟ್ಟು ಪ್ರಕರಣಗಳು
69,344 ▼	ಸಕ್ರಿಯ ಪ್ರಕರಣಗಳು
11,22,252 ▲	ಗುಣಮುಖರಾದವರು
15,499 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	803 ▼
ಗುಣಮುಖ	1,745 ▼
ಸಾವು	26 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಜಮೀರ್ ಕ್ಷಮೆಯಾಚಿಸಲಿ: ಶರವಣ ಆಗ್ರಹ

ಪ್ರಜಾವಾಣಿ ವಾರ್ತೆ


ಶರವಣ

ಬೆಂಗಳೂರು: ಕಾಂಗ್ರೆಸ್ ಶಾಸಕ ಜಮೀರ್ ಅಹಮ್ಮದ್ ಖಾನ್ ಅವರು ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಅಪಪ್ರಚಾರ ನಿಲ್ಲಿಸಿ, ಬಹಿರಂಗ ಕ್ಷಮೆಯಾಚಿಸಬೇಕು ಎಂದು ಜೆಡಿಎಸ್ ಮುಖಂಡ ಟಿ.ಎ. ಶರವಣ ಒತ್ತಾಯಿಸಿದರು.

ಮಂಗಳವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಚುನಾವಣೆಯಲ್ಲಿ ಸೋತು ಮನೆಯಲ್ಲಿ ಕುಳಿತಿದ್ದ ಜಮೀರ್ ಅಹಮ್ಮದ್ ಅವರನ್ನು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರು ದರಿದ್ರ ನಾರಾಯಣ ರ್‍ಯಾಲಿ ಮೂಲಕ ಗೆಲ್ಲಿಸಿ ತಂದಿದ್ದರು. ಈಗ ಜೆಡಿಎಸ್ ನಾಯಕರ ವಿರುದ್ಧವೇ ಕೀಳಾಗಿ ಮಾತನಾಡುತ್ತಿದ್ದಾರೆ’ ಎಂದು ದೂರಿದರು.

‘ಜೆಡಿಎಸ್‌ನಲ್ಲಿ ಇದ್ದಾಗ ಕುಮಾರಣ್ಣ ಎನ್ನುತ್ತಿದ್ದರು. ಈಗ ಕಾಂಗ್ರೆಸ್‌ನಲ್ಲಿ ಸಿದ್ದರಾಮಣ್ಣ ಎನ್ನುತ್ತಿದ್ದಾರೆ. ಓಲೈಕೆಗಾಗಿ ಇಂತಹ ಮಾತನಾಡುತ್ತಾರೆ. ಮುಂದೆ ಯಾರನ್ನು ಓಲೈಸಲು ಏನು ಹೇಳುತ್ತಾರೊ ಗೊತ್ತಿಲ್ಲ. ಈಗ ಕುಮಾರಸ್ವಾಮಿ ಅವರನ್ನು ಟೀಕಿಸುವುದನ್ನು ನಿಲ್ಲಿಸಬೇಕು’ ಎಂದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

1.55 ಲಕ್ಷ ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಪಿಸಿ


ಅಶ್ವತ್ಥನಾರಾಯಣ

ಬೆಂಗಳೂರು: ಉನ್ನತ ಶಿಕ್ಷಣ ಕಲಿಕೆಯಲ್ಲಿ ‘ಕಲಿಕಾ ನಿರ್ವಹಣಾ ವ್ಯವಸ್ಥೆ’ಗೆ (ಎಲ್‌ಎಂಎಸ್) ಪೂರಕವಾಗುವಂತೆ 1.55 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್ಲೆಟ್ ಪಿಸಿಗಳನ್ನು ವಿತರಿಸುವ ಯೋಜನೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬುಧವಾರ ಚಾಲನೆ ನೀಡಲಿದ್ದಾರೆ.

‘ನಗರ ಮತ್ತು ಗ್ರಾಮೀಣ ವಿದ್ಯಾರ್ಥಿಗಳ ಕಲಿಕೆಯಲ್ಲಿ ತಾರತಮ್ಯ ಹಾಗೂ ಡಿಜಿಟಲ್ ಅಂತರ ಅಳಿಸಿ ಹಾಕುವ ಉದ್ದೇಶದಿಂದ ಟ್ಯಾಬ್ಲೆಟ್ ಪಿಸಿಗಳನ್ನು ವಿತರಿಸಲಾಗುತ್ತಿದೆ. ಜೊತೆಗೆ, ಸರ್ಕಾರಿ ಕಾಲೇಜುಗಳಲ್ಲಿ 2,500 ಸ್ಮಾರ್ಟ್ ಕ್ಲಾಸ್ ರೂಂಗಳಿಗೂ ಚಾಲನೆ ನೀಡಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

‘ಈ ಯೋಜನೆಗೆ ಉನ್ನತ ಶಿಕ್ಷಣ ಇಲಾಖೆಯ ಜತೆಗೆ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳೂ ಕೈಜೋಡಿಸಿವೆ. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಬುಧವಾರ ಬೆಳಗ್ಗೆ 11 ಗಂಟೆಗೆ ಸಾಂಕೇತಿಕವಾಗಿ ಟ್ಯಾಬ್ಲೆಟ್ ಪಿಸಿಗಳನ್ನು ಮುಖ್ಯಮಂತ್ರಿ ವಿತರಿಸುವರು’ ಎಂದರು.

‘ರಾಜ್ಯದ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜು, 87 ಸರ್ಕಾರಿ ಪಾಲಿಟೆಕ್ನಿಕ್ ಮತ್ತು 14 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕಲಿಯುತಿರುವ ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಪಿಸಿಗಳನ್ನು ನೀಡಲಾಗುವುದು. ಈ ಯೋಜನೆಗೆ ₹ 163 ಕೋಟಿ ವೆಚ್ಚ ತಗಲಿದೆ’ ಎಂದರು.

‘ಕೋವಿಡ್ ಸಂಕಷ್ಟದಲ್ಲಿರುವ ವಿದ್ಯಾರ್ಥಿಗಳು ಎಲ್ಲೇ ಇದ್ದರೂ ಈ ಟ್ಯಾಬ್ಲೆಟ್ ಪಿಸಿಗಳ ಮೂಲಕ ಎಲ್‌ಎಂಎಸ್ ವ್ಯವಸ್ಥೆಯಲ್ಲಿ ಕಲಿಕೆ ಮುಂದುವರಿಸಬಹುದು. ಈ ಟ್ಯಾಬ್ಲೆಟ್‌ಗಳು ಕಲಿಕೆಗೆ ಬೇಕಾದ ಎಲ್ಲ ಫೀಚರುಗಳನ್ನು ಒಳಗೊಂಡಿವೆ’ ಎಂದರು.

ನನ್ನ ವಿರುದ್ಧ ಸ್ವಪಕ್ಷೀಯರದ್ದೇ ಷಡ್ಯಂತ್ರ: ಶಾಸಕ ಸತೀಶ್ ರೆಡ್ಡಿ

ಬೆಂಗಳೂರು: ‘ಕೋವಿಡ್ ಎರಡನೇ ಅಲೆ ಸಂದರ್ಭದಲ್ಲಿ ಹಾಸಿಗೆ ಬ್ಲಾಕಿಂಗ್ ಹಗರಣ ಬಯಲಿಗೆಳೆದ ಬಳಿಕ ನನ್ನ ವಿರುದ್ಧ ನಮ್ಮ ಪಕ್ಷದ ಕೆಲವರು ಷಡ್ಯಂತ್ರ ರೂಪಿಸಿದ್ದಾರೆ. ಈ ಸಂಬಂಧ ವರಿಷ್ಠರಿಗೆ ದೂರು ನೀಡಲು ನಿರ್ಧರಿಸಿದ್ದೇನೆ’ ಎಂದು ಬಿಜೆಪಿ ಶಾಸಕ ಸತೀಶ್ ರೆಡ್ಡಿ ಹೇಳಿದ್ದಾರೆ.

‘ಈಗಾಗಲೇ ಈ ಸಂಬಂಧ ಪಕ್ಷದ ಅಧ್ಯಕ್ಷರು ಮತ್ತು ಕೆಲವು ಹಿರಿಯರಿಗೆ ದೂರು ನೀಡಿದ್ದೇನೆ. ಹಾಸಿಗೆ ಬ್ಲಾಕಿಂಗ್ ವಿಚಾರದಲ್ಲಿ ಆಗಿರುವ ಎಲ್ಲ ವಿಷಯಗಳನ್ನು ಅವರ ಗಮನಕ್ಕೆ ತಂದಿದ್ದೇನೆ’ ಎಂದು ಅವರು ಸುದ್ದಿಗಾರರಿಗೆ ಮಂಗಳವಾರ ತಿಳಿಸಿದರು.

ಯಾರ ಹೆಸರನ್ನೂ ನೇರವಾಗಿ ಪ್ರಸ್ತಾಪಿಸದ ಅವರು, ‘ಮುಂಬರುವ ದಿನಗಳಲ್ಲಿ ಈ ಕುರಿತು ಸುದ್ದಿಗೋಷ್ಠಿ ಕರೆದು ಎಲ್ಲ ಮಾಹಿತಿಗಳನ್ನು ನೀಡುತ್ತೇನೆ’ ಎಂದರು.

‘ನಾವು ಸುಮಾರು 4,500 ಹಾಸಿಗೆ ಬ್ಲಾಕಿಂಗ್ ಹಗರಣವನ್ನು ಬಯಲಿಗೆಳೆದೆವು. ಆದರೆ, ದಂಧೆ ಬಯಲಿಗೆಳೆದ ನಮ್ಮ ಮೇಲೆ ಆರೋಪ ಬರುವಂತೆ ಮಾಡಲಾಯಿತು. ಇದರ ಹಿಂದೆ ನಮ್ಮ ಪಕ್ಷದವರೂ ಸೇರಿ ಹಲವರ ಷಡ್ಯಂತ್ರವಿದೆ. ಬೊಮ್ಮನಹಳ್ಳಿ ಬಾಬು ಈ ದಂಧೆ ಮಾಡಿದ್ದು ಎಂದು ಹೇಳಲಾಗಿದೆ. ಈತನಿಗೂ ನನಗೂ ಸಂಪರ್ಕವೇ ಇಲ್ಲ. ಆತ ಯಾರಿಗೆ ಆಪ್ತ? ಕನಿಷ್ಠ ಆರು ತಿಂಗಳಾದರೂ ಜತೆಗಿದ್ದರೆ ಆಪ್ತ ಎನ್ನಬಹುದು. ಸುಖಾಸುಮ್ಮನೆ ಆತನ ಹೆಸರನ್ನು ನನ್ನ ಜತೆಗೆ ಗಂಟು ಹಾಕಲಾಗಿದೆ’ ಎಂದರು.

ಕೋವಿಡ್ ಎರಡನೇ ಅಲೆಯ ಸಂದರ್ಭ ನಗರದ ಆಸ್ಪತ್ರೆಗಳಲ್ಲಿ ಹಾಸಿಗೆಗಳಿಗೆ ಹಾಹಾಕಾರ ಎದ್ದಾಗ ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಸತೀಶ್ ರೆಡ್ಡಿ, ರವಿಸುಬ್ರಹ್ಮಣ್ಯ ಮತ್ತು ಉದಯ್ ಗರುಡಾಚಾರ್ ಸೇರಿ ಹಾಸಿಗೆ ಬ್ಲಾಕಿಂಗ್ ಹಗರಣ ಬಯಲಿಗೆಳೆದಿದ್ದರು.

ಬಳಿಕ ಸತೀಶ್ ರೆಡ್ಡಿ ಆಪ್ತರೇ ಹಾಸಿಗೆ ಬ್ಲಾಕಿಂಗ್ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪ ಕೇಳಿ ಬಂದಿತ್ತು. ಇದೀಗ ಸ್ವಪಕ್ಷೀಯರೇ ತಮ್ಮ ವಿರುದ್ಧ ಷಡ್ಯಂತ್ರ ಮಾಡಿದ್ದಾರೆ ಎಂದು ಅವರು ದೂರಿದ್ದಾರೆ.


ವಸತಿ ಸಚಿವ ವಿ.ಸೋಮಣ್ಣ ಬಡವರಿಗೆ ದಿನಸಿ ಕಿಟ್ ವಿತರಿಸಿದರು. ಬಿಜೆಪಿ ಯುವ ಮುಖಂಡ ಅರುಣ್ ಸೋಮಣ್ಣ, ಸ್ಥಳೀಯ ಮುಖಂಡರಾದ ವಿಶ್ವನಾಥ ಗೌಡ, ದಾಸೇಗೌಡ, ವಾಗೀಶ್, ಮೋಹನ್ ಕುಮಾರ್, ಉಮಾಶಂಕರ್ ಇದ್ದರು.

‘ಶೀಘ್ರದಲ್ಲೇ 52 ಸಾವಿರ ಮನೆಗಳು’

ಬೆಂಗಳೂರು: ‘ಕರ್ನಾಟಕ ಗೃಹ ಮಂಡಳಿ ವತಿಯಿಂದ ನಗರದ ಸುತ್ತಮುತ್ತಲಿನ ಪ್ರದೇಶದಲ್ಲಿ 52 ಸಾವಿರ ಮನೆಗಳ ನಿರ್ಮಾಣ ಕಾರ್ಯ ಐದು ತಿಂಗಳಲ್ಲಿ ಪೂರ್ಣಗೊಳ್ಳಲಿದೆ’ ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ಗೋವಿಂದರಾಜನಗರ ಕ್ಷೇತ್ರದ ಕಾವೇರಿಪುರ ವಾರ್ಡಿನಲ್ಲಿ ಬಡವರು ಹಾಗೂ ಕಾರ್ಮಿಕರಿಗೆ ದಿನಸಿ ಕಿಟ್‌ಗಳನ್ನು ವಿತರಿಸಿ ಅವರು ಮಾತನಾಡಿದರು.

‘ಸರ್ಕಾರ ಹಾಗೂ ಇನ್ನಿತರ ಸಂಸ್ಥೆಗಳಿಂದ 500 ಎಕರೆ ಭೂಮಿ ಪಡೆದು, ಬಡವರಿಗಾಗಿ ಪ್ರಧಾನಮಂತ್ರಿಗಳ ಆಶಯದಂತೆ ಮನೆಗಳನ್ನು ನಿರ್ಮಿಸಲಾಗುತ್ತಿದೆ. ಗೋವಿಂದರಾಜ ನಗರ ಕ್ಷೇತ್ರದಲ್ಲಿರುವ ಬಡವರಿಗೆ ಉತ್ತಮ ಗುಣಮಟ್ಟದ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದ್ದು, ಇನ್ನೂ 20 ದಿನಗಳವರೆಗೆ ಕ್ಷೇತ್ರದಲ್ಲಿ ದಿನಸಿ ವಿತರಣೆ ನಡೆಯಲಿದೆ’ ಎಂದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	17.96 ಕೋಟಿ ▲	3.00 ಕೋಟಿ ▲
ಸಕ್ರಿಯ ಪ್ರಕರಣ	1.14 ಕೋಟಿ ▼	6.38 ಲಕ್ಷ ▼
ಗುಣಮುಖ	16.43 ಕೋಟಿ ▲	2.89 ಕೋಟಿ
ಸಾವು	38.91 ಲಕ್ಷ ▲	3.90 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	2.79 ಲಕ್ಷ ▼	50,784 ▲
ಗುಣಮುಖ	3.95 ಲಕ್ಷ ▲	68,529 ▼
ಸಾವು	6,049 ▼	1,359 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಕೊಲಂಬಿಯಾ	23,239 ▼
ಬ್ರೆಜಿಲ್	41,878 ▼
ರಷ್ಯಾ	17,378 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	50.34 ▼
ಬ್ರೆಜಿಲ್	11.78 ▲
ರಷ್ಯಾ	3.26 ▼

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.18 ಲಕ್ಷ
ದೆಹಲಿ	24,933 ▲
ತಮಿಳುನಾಡು	31,580

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	59.87 ▲
ಕೇರಳ	28.29 ▲
ತಮಿಳುನಾಡು	24.29

ಪ್ರಜಾವಾಣಿ ಗ್ರಾಫಿಕ್ಸ್

25 ಲಕ್ಷ ಗ್ರಾಮೀಣ ಮನೆಗಳಿಗೆ ನಲ್ಲಿ ಸಂಪರ್ಕ: ಬಿಎಸ್‌ವೈ

ಬೆಂಗಳೂರು: ಈ ವರ್ಷ ‘ಜಲಜೀವನ್ ಮಿಷನ್’ ಯೋಜನೆಯಡಿ ಗ್ರಾಮೀಣ ಪ್ರದೇಶದ 25 ಲಕ್ಷ ಮನೆಗಳಿಗೆ ನಲ್ಲಿಗಳ ಮೂಲಕ ಕುಡಿಯುವ ನೀರು ಒದಗಿಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೂಚನೆ ನೀಡಿದ್ದಾರೆ.

ಮುಖ್ಯಮಂತ್ರಿಯವರ ಗೃಹ ಕಚೇರಿ ‘ಕೃಷ್ಣಾ’ದಲ್ಲಿ ‘ಜಲಜೀವನ್ ಮಿಷನ್’ ಯೋಜನೆ ಪ್ರಗತಿ ಪರಿಶೀಲನೆ ನಡೆಸಿದ ಅವರು, ರಾಜ್ಯದಲ್ಲಿ 91.91 ಲಕ್ಷ ಗ್ರಾಮೀಣ ಕುಟುಂಬಗಳಿದ್ದು, ಈಗಾಗಲೇ 28 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ನಲ್ಲಿ ಸಂಪರ್ಕ ಒದಗಿಸಲಾಗಿದೆ. 2021–22 ನೇ ಸಾಲಿನಲ್ಲಿ 25.17 ಲಕ್ಷ ಮನೆಗಳಿಗೆ ನಲ್ಲಿ ಸಂಪರ್ಕ ಒದಗಿಸುವ ಗುರಿಯನ್ನು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಹೇಳಿದರು.

ರಾಜ್ಯದಲ್ಲಿ ಈವರೆಗೆ 435 ಬಹು ಗ್ರಾಮ ಯೋಜನೆಗಳು ಪೂರ್ಣಗೊಂಡಿವೆ. 69 ಯೋಜನೆಗಳು ಪ್ರಗತಿಯಲ್ಲಿದ್ದು, 30 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. 2021–22 ನೇ ಸಾಲಿಗೆ 161 ಯೋಜನೆಗಳ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಸಭೆಯಲ್ಲಿ ಅಧಿಕಾರಿಗಳು ಮಾಹಿತಿ ನೀಡಿದರು.

ರಾಜ್ಯದಲ್ಲಿ ನದಿ ಮೂಲದಿಂದ ನೀರು ದೊರೆಯುವ ಸ್ಥಳದಲ್ಲಿ ಆದ್ಯತೆ ಮೇರೆಗೆ ಯೋಜನೆ ಅನುಷ್ಠಾನಗೊಳಿಸಬೇಕು. ಇದು ಪ್ರಧಾನಮಂತ್ರಿಯವರ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ನಿಗದಿತ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಬೇಕು ಎಂದು ಯಡಿಯೂರಪ್ಪ ಹೇಳಿದರು.

ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಮತ್ತು ಹಿರಿಯ ಅಧಿಕಾರಿಗಳು ಇದ್ದರು.

ಸರ್ಕಾರಿ ಜಮೀನು ಪರಭಾರೆ ಪ್ರಕರಣ: ಹಿರಿಯ ನೋಂದಣಾಧಿಕಾರಿ ಎತ್ತಂಗಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಡುವಳಿ ಜಮೀನಿನ ಹೆಸರಿನಲ್ಲಿ ಸರ್ಕಾರಿ ‘ಎ’ ಮತ್ತು ‘ಬಿ’ ಖರಾಬು ಹಾಗೂ ಸಾರ್ವಜನಿಕ ರಸ್ತೆಗೆ ಕಾಯ್ದಿರಿಸಿದ್ದ ಜಮೀನುಗಳನ್ನೂ ಪರಭಾರೆ ಮಾಡಿದ್ದ ಕ್ರಯಪತ್ರವನ್ನು ನೋಂದಾಯಿಸಿಕೊಂಡಿದ್ದ ಆರೋಪದ ಮೇಲೆ ಇಂದಿರಾನಗರ ಉಪ ನೋಂದಣಿ ಕಚೇರಿಯ ಹಿರಿಯ ನೋಂದಣಾಧಿಕಾರಿ ಎಂ.ಕೆ. ಶಾಂತಮೂರ್ತಿ ಅವರನ್ನು ‘ಕಾರ್ಯಕಾರಿ ಹುದ್ದೆ’ಯಿಂದ ಬಿಡುಗಡೆಗೊಳಿಸಲಾಗಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಕೆ.ಆರ್.ಪುರ ಹೋಬಳಿಯ ಚಿನ್ನಪ್ಪನಹಳ್ಳಿ ಗ್ರಾಮದ ಸರ್ವೆ ನಂಬರ್ 20ರಲ್ಲಿನ ಸರ್ಕಾರಿ ಜಮೀನು ಪರಭಾರೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕ್ರಮ ಜರುಗಿಸಲಾಗಿದೆ. ತನಿಖಾ ವರದಿಗೆ ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ತಡೆ ಇರುವುದರಿಂದ ಅಮಾನತು ಬದಲಿಗೆ ‘ಕಾರ್ಯಕಾರಿ ಹುದ್ದೆ’ಯಿಂದ ಬಿಡುಗಡೆಗೊಳಿಸಿ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಆಯುಕ್ತ ಕೆ.ಪಿ. ಮೋಹನ್ ರಾಜ್ ಇದೇ 19ರಂದು ಆದೇಶ ಹೊರಡಿಸಿದ್ದಾರೆ.

ಚಿನ್ನಪ್ಪನಹಳ್ಳಿ ಗ್ರಾಮದ ಸ.ನಂ. 20ರಲ್ಲಿ 19 ಎಕರೆ 19 ಗುಂಟೆ ಜಮೀನು ಇತ್ತು. ಇದರಲ್ಲಿ 4 ಎಕರೆ 39 ಗುಂಟೆ ಮಾತ್ರ ಹಿಡುವಳಿ ಜಮೀನು. 13 ಗುಂಟೆಯನ್ನು ಸಾರ್ವಜನಿಕ ರಸ್ತೆಗೆ ಕಾಯ್ದಿರಿಸಲಾಗಿತ್ತು. 10 ಎಕರೆ 20 ಗುಂಟೆ ‘ಎ’ ಖರಾಬು ಮತ್ತು 3 ಎಕರೆ 27 ಗುಂಟೆ ‘ಬಿ’ ಖರಾಬು ಜಮೀನು ಇತ್ತು. ಎಲ್ಲವನ್ನೂ ಒಂದೇ ಕುಟುಂಬದ ಆಸ್ತಿ ಎಂಬಂತೆ ನೋಂದಣಿ ಮಾಡಲಾಗಿತ್ತು ಎಂಬ ಅಂಶ ತನಿಖಾ ವರದಿಯಲ್ಲಿದೆ.

ಚಿನ್ನಪ್ಪನಹಳ್ಳಿ ನಿವಾಸಿಗಳಾದ ಟಿ. ಮುರಳೀಧರ, ಟಿ. ವಿಜಯಕುಮಾರ್, ಟಿ. ಉಮಾಶಂಕರ್, ಎಸ್. ರವಿಕುಮಾರ್, ಎಸ್. ನರೇಂದ್ರ ಬಾಬು ಮತ್ತು ಎಚ್. ವೆಂಕಟರೆಡ್ಡಿ, ವಿ. ಭಾಗ್ಯಲಕ್ಷ್ಮಿ, ವಿ. ಕವಿತಾ ರೆಡ್ಡಿ ಮತ್ತು ವಿ. ಅರವಿಂದ ರೆಡ್ಡಿ ಎಂಬುವವರ ನಡುವೆ ‘ವ್ಯವಸ್ಥಾ ಪತ್ರ’ (ಪಾಲು) ನೋಂದಣಿ ಮಾಡಲಾಗಿದೆ. 2020ರ ಡಿಸೆಂಬರ್ 2ರಂದು ಈ ಪತ್ರವನ್ನು ನೋಂದಣಿ ಮಾಡಲಾಗಿತ್ತು. ಬಳಿಕ ಭಾಗ್ಮನೆ ಡೆವಲಪರ್ಸ್ ಜತೆ ಅದೇ ದಿನ ಜಂಟಿ ಅಭಿವೃದ್ಧಿ ಒಪ್ಪಂದವನ್ನೂ ನೋಂದಣಿ ಮಾಡಲಾಗಿತ್ತು ಎಂಬುದು ತನಿಖೆಯಲ್ಲಿ ಪತ್ತೆಯಾಗಿದೆ.

ಪ್ರಕರಣದ ಕುರಿತು ಜೆಡಿಎಸ್ ಶಾಸಕ ಸಾ.ರಾ. ಮಹೇಶ್ ನಿಯಮ 351ರ ಅಡಿಯಲ್ಲಿ ವಿಧಾನಸಭೆಯಲ್ಲಿ ಪ್ರಶ್ನೆ ಕೇಳಿದ್ದರು. ಬಳಿಕ ತನಿಖೆ ಆರಂಭಿಸಲಾಗಿತ್ತು. ಹಿರಿಯ ನೋಂದಣಾಧಿಕಾರಿ ಶಾಂತಮೂರ್ತಿ ಮತ್ತು ಖಾಸಗಿ ವ್ಯಕ್ತಿಗಳು ಅಕ್ರಮ ಎಸಗಿರುವುದು ಪತ್ತೆಯಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಇಂದಿರಾನಗರ ಉಪ ನೋಂದಣಿ ಕಚೇರಿಯ ಹಿರಿಯ ನೋಂದಣಿ ಅಧಿಕಾರಿ ಹುದ್ದೆಯಿಂದ ಶಾಂತಮೂರ್ತಿ ಅವರನ್ನು ತೆರವು ಮಾಡಿದ್ದು, ನೋಂದಣಿ ಮತ್ತು ಮುದ್ರಾಂಕ ಆಯುಕ್ತರ ಕಚೇರಿಗೆ ವರದಿ ಮಾಡಿಕೊಳ್ಳುವಂತೆ ಆದೇಶದಲ್ಲಿ ಸೂಚಿಸಲಾಗಿದೆ.

ನಿಧನ ವಾರ್ತೆ

ಡಾ. ಸಿ.ಎಸ್. ಎಲಿಜಬೆತ್



ಬೆಂಗಳೂರು: ನಗರದ ಜ್ಯೋತಿ ನಿವಾಸ ಕಾಲೇಜಿನ ಪ್ರಾಂಶುಪಾಲರಾಗಿದ್ದ ಡಾ. ಸಿ.ಎಸ್. ಎಲಿಜಬೆತ್ (57) ಅವರು ಅನಾರೋಗ್ಯದಿಂದಾಗಿ ನಿಧನರಾದರು.

ಚಿಕ್ಕಬಳ್ಳಾಪುರದ ಅವರು ಉಪನ್ಯಾಸಕರಾಗಿ ವೃತ್ತಿ ಆರಂಭಿಸಿದ್ದರು. 2004ರಿಂದ ಕಾಲೇಜಿನ ಉಪ ಪ್ರಾಂಶುಪಾಲರಾಗಿ ಹಾಗೂ 2010ರಿಂದ ಕಾಲೇಜಿನ ಪ್ರಾಂಶುಪಾಲರಾಗಿ ಕೆಲಸ ಮಾಡುತ್ತಿದ್ದರು.

ನಗರದಲ್ಲಿ ಇಂದು

ಬಡವರಿಗೆ ದಿನಸಿ ಕಿಟ್ ವಿತರಣೆ: ಅತಿಥಿಗಳು–ಟಿ.ವಿ.ಮಾರುತಿ, ಮೋಹನದೇವ್ ಆಳ್ವ, ಕೆ.ಪಿ.ನರಸಿಂಹ ಮೂರ್ತಿ, ಆಯೋಜನೆ, ಸ್ಥಳ–ಅಖಿಲ ಕರ್ನಾಟಕ ಮಕ್ಕಳ ಕೂಟ, ಕಲ್ಯಾಣಮ್ಮ ಮಕ್ಕಳ ಆಟದ ಮೈದಾನ, ಕೋಟೆ, ಬೆಳಿಗ್ಗೆ 10.30

ಸರ್ಕಾರಿ ಪದವಿ ಕಾಲೇಜು, ಪಾಲಿಟೆಕ್ನಿಕ್ ಹಾಗೂ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳಿಗೆ ಟ್ಯಾಬ್ ವಿತರಣೆ ಕಾರ್ಯಕ್ರಮ: ಉದ್ಘಾಟನೆ–ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಅಧ್ಯಕ್ಷತೆ–ಶಾಸಕ ರಿಜ್ವಾನ್ ಅರ್ಷದ್, ಆಯೋಜನೆ–ಕಾಲೇಜು ಶಿಕ್ಷಣ ಇಲಾಖೆ, ಸ್ಥಳ–ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 11

ವಿಚಾರ ಕಲರವ ಉಪನ್ಯಾಸ ಮಾಲಿಕೆ: ‘ಕುವೆಂಪು ದೇಶಭಕ್ತಿಯ ಸಂಕೇತ’ ಕುರಿತು ಉಪನ್ಯಾಸ–ಸಾಹಿತಿ ಎಲ್.ಎನ್. ಮುಕುಂದರಾಜ್, ಅಧ್ಯಕ್ಷತೆ–ಕೆ.ಆರ್. ವೇಣುಗೋಪಾಲ್, ಆಯೋಜನೆ–ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

ಪ್ರಜಾವಾಣಿ DH ಕೋವಿಡ್ ಪರಿಹಾರ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ (₹ಗಳಲ್ಲಿ)
1	ಸೋಹಂ ವಾಪ್ಟೋಬ್ಯಾನರ್ಜಿ, [illegible], 19ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಎಚ್‌ಎಸ್‌ಆರ್ ಸೆಕ್ಟರ್ 2, ಬೆಂಗಳೂರು	60,000
2	ಎಚ್.ಜೆ.ಯೋಗಾನಂದ, 1107, ಶ್ರೀನಿಧಿ ನಿಲಯ, 14ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಟಿ.ಕೆ.ಲೇಔಟ್, ಜಯನಗರ, ಮೈಸೂರು	50,000
3	ಮುರಳಿ ಶ್ರೀನಿವಾಸನ್, ಕೋರಮಂಗಲ, ಯುಎಸ್ಎ	30,000
4	ವೈ.ಗೌಸ್ ಖಾನ್ ಮತ್ತು ನಸೀಮಾ ಬೇಗಂ, 830, 2ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ಎಚ್‌ಎಎಲ್ 3ನೇ ಹಂತ, ಇಂದಿರಾನಗರ, ಬೆಂಗಳೂರು	25,000
5	ಸಿ.ಎಸ್.ರಾವ್, 851, 1ನೇ ಎ ಮುಖ್ಯರಸ್ತೆ, 1ನೇ ಅಡ್ಡರಸ್ತೆ, 1ನೇ ಹಂತ, 3ನೇ ಬ್ಲಾಕ್, ಬನಶಂಕರಿ, ಬೆಂಗಳೂರು	25,000
6	ಎಂ.ಕೆ.ಚಂದ್ರಿಕಾ, ನಂ. 202, [illegible] ಗಾರ್ಡನ್, 40ನೇ ಮುಖ್ಯರಸ್ತೆ, ಎನ್‌ಜಿಒ ಕಾಲೊನಿ, ನಾರ್ತ್ ಗೇಟ್ ಸಮೀಪ, ಜೆ.ಪಿ.ನಗರ, 1ನೇ ಹಂತ, ಬೆಂಗಳೂರು	10,000
7	ಪ್ರಮೋದ ಲಿಂಗರ್, ನಂ.13, (ನ್ಯೂ ನಂ 47), 17ನೇ ಅಡ್ಡರಸ್ತೆ, 4 ಮತ್ತು 6ನೇ ಮುಖ್ಯರಸ್ತೆ ನಡುವೆ, ಮಲ್ಲೇಶ್ವರ ಪಶ್ಚಿಮ, ಬೆಂಗಳೂರು	10,000
8	ಸೀತಾ ಶಂಕರ್, ಮೈಸೂರು	10,000
9	ಆರ್.ಎಸ್.ಶಾಹ, ನಂ.26, ಅನನ್ಯ, 1ನೇ ಮಹಡಿ, [illegible] ಲೇಔಟ್, 1ನೇ ಅಡ್ಡರಸ್ತೆ, ತಾವರೆಕೆರೆ, ಬಿಟಿಎಂ 1ನೇ ಹಂತ, ಬೆಂಗಳೂರು	10,000
10	ಎಸ್.ಶ್ರೀಧರ್, 3033, ಗೋಕುಲಂ ಪಾರ್ಕ್ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು	10,000
11	ಎಸ್.ಎಸ್.ಶೈಲಜಾ, w/o ಆರ್.ನಾರಾಯಣ, 415, 14ನೇ ಎ ಮುಖ್ಯರಸ್ತೆ, 1ನೇ ಹಂತ, 1ನೇ ಬ್ಲಾಕ್, ಎಚ್‌ಬಿಆರ್ ಲೇಔಟ್, ಬೆಂಗಳೂರು	10,000
12	ರಾಧಾಮಣಿ ಚಂದ್ರಶೇಖರ್, ಅಪಾರ್ಟ್‌ಮೆಂಟ್ ನಂ. 301, ಆದರ್ಶ ಕೋರ್ಟ್, ಜಯನಗರ 1ನೇ ಬ್ಲಾಕ್, 1ನೇ ಅಡ್ಡರಸ್ತೆ, ಬೆಂಗಳೂರು	10,000
13	ಮಂಜುನಾಥ ಅಂಡ್ ಶೋಭಾವತಿ, 688/1ಎ, 16ನೇ ಮುಖ್ಯರಸ್ತೆ, ಸರಸ್ವತಿಪುರ, ಮೈಸೂರು	10,000
14	ಶಿವಾನಿ ಶೆಟ್ಟಿ, ನಂ.16, 1ನೇ ಮುಖ್ಯರಸ್ತೆ, ಸೊಸೈಟಿ ಕಾಲೊನಿ, ಆಡುಗೋಡಿ, ಬೆಂಗಳೂರು	5,555
15	ವೈ.ಬಿ.ಸುಬ್ಬನ್, ಪರಶುರಾಮ್ ನಿವಾಸ್, ಗಣೇಶ್ ನಗರ, ಇಬ್ರಾಹಿಂಪುರ, ವಿಜಯಪುರ	5,100
16	ಡಾ.ದಕ್ಷಿಣಾಮೂರ್ತಿ, 003, ಅಕ್ಷಯ [illegible] ಅಪಾರ್ಟ್‌ಮೆಂಟ್, ಅರಕೆರೆ ಮೈಕೊ ಲೇಔಟ್ ಸ್ಟೇಜ್ 2, [illegible], ಬೆಂಗಳೂರು	5,001
17	ಎಸ್.ಗುರುದೇವ್, 505, 15ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ, 1ನೇ ಹಂತ, ಇಂದಿರಾನಗರ, ಬೆಂಗಳೂರು	5,001
18	ಎಚ್.ಜೆ.ವಾಮನ್, 32, ಗೋವಿಂದಪ್ಪ ರಸ್ತೆ, ಬಸವನಗುಡಿ, ಬೆಂಗಳೂರು	5,000
19	ದಿವ್ಯಾ.ಬಿ.ಎಸ್., 224, [illegible], ಬೆಂಗಳೂರು	5,000
20	ಕೆ.ವೀಣಾ, 55 (ಜಿ2), ಶಿವದತ್ತ, 1ನೇ ಮುಖ್ಯರಸ್ತೆ, ಮಲ್ಲೇಶ್ವರ, ಬೆಂಗಳೂರು	5,000
21	ಗೋವರ್ಧನ ವಾಧ್ವಾನಾಥ, ಬೆಂಗಳೂರು	5,000
22	[illegible], ನಂ. 40, 1ನೇ ಮುಖ್ಯರಸ್ತೆ, 2ನೇ ಹಂತ, 1ನೇ ಬ್ಲಾಕ್, ನಾಗರಭಾವಿ, ಬೆಂಗಳೂರು	5,000
23	ಪ್ರೊ.ಸಿ.ಎನ್.ಶ್ರೀನಾಥ್, ನಿರ್ದೇಶಕ ಧ್ವನ್ಯಾಲೋಕ, 124, ಬೋಗಾದಿ ರಸ್ತೆ, ಮೈಸೂರು	5,000
24	ಎನ್.ಗುರುರಾಜ ರಾವ್, ಫ್ಲ್ಯಾಟ್ ಬಿ-14, ಶ್ರೀಧಾನ್ಯ ಅಪಾರ್ಟ್‌ಮೆಂಟ್ಸ್, [illegible], ಮೈಸೂರು	5,000
25	ಕೆ.ಶೇಷನ್, 33201, [illegible], ಬೆಂಗಳೂರು	5,000
26	ದಾಮನ ದತ್ತಾತ್ರಿ, ನಂ.4, 6ನೇ ಅಡ್ಡರಸ್ತೆ, 16ನೇ ಮುಖ್ಯರಸ್ತೆ, ಶ್ರೀನಿವಾಸ ನಗರ, ಹೋಲಿ ಸ್ಪಾಟ್ ಸ್ಕೂಲ್, ಬೆಂಗಳೂರು	3,001
27	ಕೆ.ಎಂ.ನಾಗರಾಜ್, [illegible], ಬೆಂಗಳೂರು	3,000
28	ಡಿ.ಎಸ್.ರಾಮು, [illegible], ಬೆಂಗಳೂರು	2,001
29	ರಮೇಶ ಗೆಳೆ, [illegible], ಬಳ್ಳಾರಿ	2,001
30	ಟಿ.ಸುಬ್ಬರಾಮಯ್ಯ, ನಿವೃತ್ತ ಪ್ರೌಢಶಾಲಾ ಶಿಕ್ಷಕರು, [illegible] ನಿವಾಸ, 1ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಮುನೇಶ್ವರ ನಗರ, ಕೋಲಾರ	2,001
31	ಕೆ.ಎನ್.ಶಾಮರಾವ್, ಫ್ಲ್ಯಾಟ್ ನಂ. 305, 1ನೇ ಮಹಡಿ, [illegible] ಅಪಾರ್ಟ್‌ಮೆಂಟ್, [illegible], ಬೆಂಗಳೂರು	2,001
32	ಇ.ಎನ್.ಬಾಲರಾಜು, 5ನೇ ಮುಖ್ಯರಸ್ತೆ, ಜಯನಗರ ಪಶ್ಚಿಮ, ತುಮಕೂರು	2,000
33	ಬಿ.ಮೂರ್ತಿ ಆರ್.ಬಿ, ನಂ.41, 4ನೇ ಅಡ್ಡರಸ್ತೆ, [illegible], ಬೆಂಗಳೂರು	2,000
34	ಇ.ಬಿ.ಅನಸೂಯಾ w/o ಇ.ಎನ್.ಬಾಲರಾಜು, 5ನೇ ಮುಖ್ಯರಸ್ತೆ, ಜಯನಗರ ಪಶ್ಚಿಮ, ತುಮಕೂರು	2,000
35	ಕೆ.ಬಿ.ನರಹರಿ, 109, 4ನೇ ಮುಖ್ಯರಸ್ತೆ, [illegible], ವಿಜಯನಗರ, ಬೆಂಗಳೂರು	2,000
36	ರೋಹನ್ ಸುಧೀರ್ ಬಗೂಲೆ, ಬೈಲಹೊಂಗಲ, ಬೆಳಗಾವಿ	2,000
37	ದೇವಿದಾಸ ನಾಯ್ಕ್ ಎ.ಬಿ., [illegible], ಕಾರವಾರ	1,100
38	ದರ್ಶನ್ ಬಿ.ಶೆಟ್ಟಿ, [illegible], ತುಮಕೂರು	1,100
39	ಆನಂದ್.ವೈ.ದೊಡ್ಡಮನಿ, ಮಂಗಳೂರು	1,001
40	ಎ.ಬಿ.ತತ್ವಸುಂದರ್, ಬಿಟಿಎಂ ಲೇಔಟ್, ಬೆಂಗಳೂರು	1,001
41	ಸರೋಜಾ ಎಂ, 614/1, [illegible] ನಗರ, ಬೆಂಗಳೂರು	1,001
42	ಸತೀಶ್.ಎಂ., ಬೆಂಗಳೂರು	1,001
43	ಗೀತಾ ಎಸ್., ನಂ.1561, [illegible], ಶ್ರೀರಾಂಪುರ 2ನೇ ಹಂತ, ಮೈಸೂರು	1,001
44	ಜ್ಯೋತಿ ವಿ.ಗೋವಿಂದಪ್ಪ, ನಂ. 170, [illegible], ರಾಯಚೂರು	1,000
45	ಬಿ.ಎನ್.ಉಮಾ, 106, [illegible], ಬೆಂಗಳೂರು	1,000
46	[illegible], ಬೆಂಗಳೂರು	1,000
47	ಆನಂದ ರಾಮತೀರ್ಥ, ಗಿರೀಶ್ ನಗರ, [illegible], ಬಿಜಾಪುರ	1,000
48	ಆರ್.ನಾಗೇಂದ್ರ, 147/6, ಚೇತನ ವಿಹಾರ, ಬೆಂಗೇರಿ ಎಕ್ಸ್‌ಟೆನ್ಷನ್, ಹುಬ್ಬಳ್ಳಿ	1,000
49	ಸುಶೀಲಾ ಮೂರ್ತಿ, 92, ಫಾರ್ಚ್ಯುನಾ ಕೃಷ್ಣ, ಫ್ಲ್ಯಾಟ್ ನಂ. 002, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು	1,000
50	ವೈ.ಶಿವಪ್ರಕಾಶ್, 2119/1, 4ನೇ ಮುಖ್ಯರಸ್ತೆ, ಎಂಸಿಸಿ ಎ ಬ್ಲಾಕ್, ದಾವಣಗೆರೆ	1,000
51	ಜಿ.ಕೆ.ಸೈಫುಲ್ಲಾ, 1533, 39ನೇ ಅಡ್ಡರಸ್ತೆ, 4ನೇ ಟಿ.ಬ್ಲಾಕ್, ಜಯನಗರ, ಬೆಂಗಳೂರು	1,000
	ಇದುವರೆಗೆ ಸಂಗ್ರಹವಾದ ಒಟ್ಟು ಮೊತ್ತ : 1,17,78,899	

ಕೋವಿಡ್ ಸೋಂಕಿನಿಂದ ತಾಯಿ ಕಳೆದುಕೊಂಡ ಸ್ನೇಹಾಳ ಮುಗ್ಧ ಪ್ರಶ್ನೆ

ಅಮ್ಮ ಯಾವಾಗ ಬರ್ತಾಳೆ?

• ಡಿ.ಜಿ.ಮಲ್ಲಿಕಾರ್ಜುನ



ಶಿಡ್ಲಘಟ್ಟ (ಚಿಕ್ಕಬಳ್ಳಾಪುರ): 'ಅಮ್ಮ ವಾಪಸ್ ಬರುತ್ತಾಳಾ?' ಇದು ತಾಲ್ಲೂಕಿನ ವೀರಾಪುರ ಗ್ರಾಮದ ಒಂಬತ್ತು ವರ್ಷದ ಸ್ನೇಹಾ ತನ್ನ ಚಿಕ್ಕಮ್ಮ ನಂದಿನಿ ಅವರಿಗೆ ಪದೇ ಪದೇ ಕೇಳುವ ಪ್ರಶ್ನೆ.

ಸ್ನೇಹಾ ಒಂದೂವರೆ ವರ್ಷದವಳಿದ್ದಾಗ ತಂದೆ ಮೃತಪಟ್ಟಿದ್ದರು. ಈಗ ಕೊರೊನಾ ಸೋಂಕಿನಿಂದ ತಾಯಿಯೂ ಸಾವನ್ನಪ್ಪಿದ್ದಾರೆ. ತಬ್ಬಲಿಯಾಗಿರುವ ಸ್ನೇಹಾ ಈಗ ಅಜ್ಜಿ ಮನೆಯಲ್ಲಿ ಚಿಕ್ಕಮ್ಮನ ಆರೈಕೆಯಲ್ಲಿ ಇದ್ದಾಳೆ. ತಾಯಿಯ ಬಗ್ಗೆ ಸ್ನೇಹಾ ಕೇಳುವ ಪ್ರಶ್ನೆಗಳಿಗೆ ಹೇಗೆ ಉತ್ತರಿಸಲಿ ಎನ್ನುವ ನೋವು ನಂದಿನಿ ಅವರಿಗೆ ಇದೆ.

ಅಮ್ಮ ವಾಪಸ್ ಬರುತ್ತಾಳಾ? ನಾನು ಶಾಲೆಗೆ ಹೇಗೆ ಹೋಗುವುದು? ಊಟ ಮಾಡಿಸುವವರು ಯಾರು? ಬಟ್ಟೆ ಯಾರು ಕೊಡಿಸುವರು?–ಹೀಗೆ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಸ್ನೇಹಾ ನಿತ್ಯ ಕೇಳುತ್ತಾಳೆ. ಮಗುವನ್ನು ನೋಡಿದಾಗ ಅಕ್ಕ ನೆನಪಾಗುತ್ತಾಳೆ. ಕರುಳು ಕಿವುಚಿದಂತಾಗುತ್ತದೆ ಎಂದು ನಂದಿನಿ ಕಣ್ಣೀರಾದರು.

'ಅಕ್ಕ ರಜಿನಿಯನ್ನು ಮೇಲೂರಿಗೆ ವಿವಾಹ ಮಾಡಿಕೊಟ್ಟಿದ್ದೆವು. ಸ್ನೇಹಾ ಹುಟ್ಟಿ ಒಂದೂವರೆ ವರ್ಷವಾಗಿತ್ತು. ಭಾವ ಶಂಕರ್ ನಿಧನರಾದರು. ಆ ಕಷ್ಟದಲ್ಲಿಯೂ ನನ್ನಕ್ಕ ಗಂಡನ ಮನೆಯವರ ನೆರವಿನೊಂದಿಗೆ ಪ್ರತ್ಯೇಕವಾಗಿ ಮನೆ ಮಾಡಿಕೊಂಡು ಗಾರ್ಮೆಂಟ್ ಕೆಲಸಕ್ಕೆ ಹೋಗಿ ಮಗಳನ್ನು ಸಾಕುತ್ತಿದ್ದಳು' ಎಂದು ಕಣ್ಣು ಒರೆಸಿಕೊಂಡರು.

ಲಾಕ್‌ಡೌನ್ ಘೋಷಣೆಯಾದ ನಂತರ ಕೆಲಸ ಹೋಯಿತು. ತವರು ಮನೆ ವೀರಾಪುರಕ್ಕೆ ಬಂದಳು. ಕೆಲವು ದಿನಗಳ ಹಿಂದೆ ಹೊಟ್ಟೆಯಲ್ಲಿ ನೋವು ಕಾಣಿಸಿಕೊಂಡಿದೆ ಎಂದು ಹೊಸಕೋಟೆಯಲ್ಲಿ ಆಸ್ಪತ್ರೆಗೆ ದಾಖಲಿಸಿದೆವು. ವೈದ್ಯರು ನೀರು ತುಂಬಿಕೊಂಡಿದೆ ಎಂದರು. ಜತೆಗೆ ಕೊರೊನಾ ಸೋಂಕು ಸಹ ಇದೆ ಎಂದರು. ಇದ್ದಕ್ಕಿದ್ದಂತೆ ಉಸಿರಾಟದ ಸಮಸ್ಯೆಯಾಯಿತು. ಐಸಿಯುಗೆ ದಾಖಲಿಸಿದರು. ಆದರೆ ಅಕ್ಕ ಉಳಿಯಲಿಲ್ಲ.

'ಸ್ನೇಹಾ ಮೂರನೇ ತರಗತಿಯಲ್ಲಿ ಓದುತ್ತಿದ್ದಾಳೆ. ನನ್ನ ತಂದೆ ಮುನಿಯಪ್ಪ ಮತ್ತು ತಾಯಿ ನಾರಾಯಣಮ್ಮ ಕಷ್ಟದಲ್ಲಿ ಕೈತೊಳೆಯುತ್ತಿದ್ದಾರೆ. ಅಕ್ಕನ ಸಾವಿನ ಆಘಾತದಿಂದ ನಾವು ಯಾರೂ ಇನ್ನೂ ಹೊರಬಂದಿಲ್ಲ. ಇನ್ನು ಈ ಮಗುವಿನ ಮನಸ್ಸಿಗೆ ಆದ ಗಾಯವನ್ನು ಊಹಿಸಿಕೊಳ್ಳಲು ಆಗುತ್ತಿಲ್ಲ. ಹೊಸಕೋಟೆ ಬಳಿ ನಾನು ಗಂಡನ ಜತೆ ಮನೆ ಮಾಡಿಕೊಂಡಿದ್ದೇನೆ. ಅಲ್ಲಿಗೆ ಸ್ನೇಹಾಳನ್ನು ಕರೆದುಕೊಂಡು ಹೋಗಬೇಕು ಎಂದಿದ್ದೇನೆ' ಎನ್ನುತ್ತಾರೆ ಮಗುವಿನ ಚಿಕ್ಕಮ್ಮ ನಂದಿನಿ.

'ಕೋವಿಡ್‌ನಿಂದ ಅನಾಥರಾದ ಮಕ್ಕಳಿಗೆ ಸರ್ಕಾರದ ಸೌಲಭ್ಯಗಳನ್ನು ತಲುಪಿಸುವ ಉದ್ದೇಶದಿಂದ ಮಗುವಿನ ಮನೆಗೆ ಖುದ್ದು ಭೇಟಿ ನೀಡಿದ್ದೇವೆ. ಮಗುವಿನ ಭವಿಷ್ಯ ನಿರ್ಮಾಣಕ್ಕೆ ನೆರವಾಗುತ್ತೇವೆ' ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ ಮಂಜುನಾಥ್ ಹೇಳುತ್ತಾರೆ.

ಗೋಪಾಲಯ್ಯ ವಿರುದ್ಧ ಎಸಿಬಿ ತನಿಖೆಗೆ ಆಗ್ರಹ

ಬೆಂಗಳೂರು: ಅಬಕಾರಿ ಸಚಿವ ಕೆ.ಗೋಪಾಲಯ್ಯ ಅವರಿಗೆ ನೀಡಲು ಪ್ರತಿ ಜಿಲ್ಲೆಯಿಂದ ₹ 5 ಲಕ್ಷ ಸಂಗ್ರಹಿಸಲಾಗಿದೆ ಎಂಬ ಅಧಿಕಾರಿಗಳ ದೂರವಾಣಿ ಸಂಭಾಷಣೆ ಕುರಿತು ಭ್ರಷ್ಟಾಚಾರ ನಿಗ್ರಹ ದಳದಿಂದ (ಎಸಿಬಿ) ತನಿಖೆ ನಡೆಸಬೇಕು ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಅಧ್ಯಕ್ಷ ರವಿಕೃಷ್ಣಾ ರೆಡ್ಡಿ ಆಗ್ರಹಿಸಿದ್ದಾರೆ.

'ಸಚಿವರಿಗೆ ಲಂಚದ ಮೊತ್ತ ಸಂಗ್ರಹಕ್ಕೆ ಸಂಬಂಧಿತ ಚರ್ಚೆ ಬಹಿರಂಗವಾದ ಬೆನ್ನಲ್ಲೇ ಕೊಪ್ಪಳ ಜಿಲ್ಲೆಯಲ್ಲಿ ಅಬಕಾರಿ ಇಲಾಖೆ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಸಚಿವರ ವಿರುದ್ಧವೇ ಲಂಚದ ಆರೋಪ ಕೇಳಿಬಂದಿದೆ. ಇದು, ಗಂಭೀರ ಪ್ರಕರಣ. ಮುಖ್ಯಮಂತ್ರಿಯವರು ತಕ್ಷಣವೇ ತನಿಖೆಗೆ ಆದೇಶಿಸಬೇಕು' ಎಂದು ಒತ್ತಾಯಿಸಿದ್ದಾರೆ.



ವಾಹನ ದಟ್ಟಣೆ

ಲಾಕ್‌ಡೌನ್ ತೆರೆಯುತ್ತಿದ್ದಂತೆ ಬೆಂಗಳೂರಿನ ಟೌನ್‌ಹಾಲ್ ಎದುರು ಮಂಗಳವಾರ ಕಂಡು ಬಂದ ವಾಹನಗಳ ದಟ್ಟಣೆ

– ಪ್ರಜಾವಾಣಿ ಚಿತ್ರ/ ಬಿ.ಕೆ.ಜನಾರ್ದನ್


ಬಲಿದಾನ ದಿನ ನಿಮಿತ್ತ ಇಂದು ರಾಜ್ಯದಾದ್ಯಂತ ಚಿಂತನ–ಮಂಥನ

ತೈಲ ಬೆಲೆ ಏರಿಕೆ: ಬಿಜೆಪಿ ಸಮರ್ಥನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಚ್ಚಾ ತೈಲದ ಬೆಲೆ ಏರಿಕೆಯಿಂದ ಪೆಟ್ರೋಲ್, ಡೀಸೆಲ್ ದರ ಏರಿಕೆ ಸರ್ಕಾರಕ್ಕೆ ಅನಿವಾರ್ಯವಾಗಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಅವರು ದರ ಏರಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ದಿನೇ ದಿನೇ ಏರಿಕೆ ಆಗುತ್ತಿದ್ದು, ಮತ್ತೊಂದು ಕಡೆ ಸುಂಕ ಇಳಿಸಲು ಸಾಧ್ಯವಿಲ್ಲದ ಪರಿಸ್ಥಿತಿಯೂ ನಿರ್ಮಾಣ ಆಗಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ರವಿಕುಮಾರ್

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಕಾಂಗ್ರೆಸ್ ಆಡಳಿತದ ಅವಧಿಯಲ್ಲೂ ಆಗಿತ್ತು. ಇದು ಹೊಸ ವಿದ್ಯಮಾನವಲ್ಲ. ಕೇಂದ್ರ ಸರ್ಕಾರ ಕಳೆದ ಏಳು ವರ್ಷಗಳಲ್ಲಿ ರೈತರು, ಬಡವರ ಜೀವನ ಸುಧಾರಿಸಲು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ವಿರೋಧ ಪಕ್ಷಗಳು ಆ ಬಗ್ಗೆ ಮಾತನಾಡದೇ, ತೈಲ ಬೆಲೆ ಏರಿಕೆ ಬಗ್ಗೆ ಮಾತ್ರ ಮಾತನಾಡುತ್ತಿದ್ದಾರೆ ಎಂದು ಅವರು ಹೇಳಿದರು.

23ರಂದು ಬಲಿದಾನ ದಿನ: ಜೂನ್ 23 ಶ್ಯಾಮ ಪ್ರಕಾಶ್ ಮುಖರ್ಜಿಯವರ ಬಲಿದಾನ ದಿನವಾಗಿದ್ದು, ಅಂದು ರಾಜ್ಯದಲ್ಲಿ 300 ಕಡೆಗಳಲ್ಲಿ ಚಿಂತನ ಮಂಥನ ಕಾರ್ಯಕ್ರಮವನ್ನು ವೆಬೆಕ್ಸ್ ಮೂಲಕ ಹಮ್ಮಿಕೊಳ್ಳಲಾಗಿದೆ ಎಂದು ರವಿಕುಮಾರ್ ತಿಳಿಸಿದರು.

ಅಲ್ಲದೆ, ಜುಲೈ 6 ರವರೆಗೆ 58 ಸಾವಿರ ಬೂತ್‌ಗಳಲ್ಲಿ 11 ಲಕ್ಷ ಗಿಡಗಳನ್ನು ನೆಡುವ ಕಾರ್ಯಕ್ರಮ ಮತ್ತು ಪ್ರಧಾನಿ ಮೋದಿಯವರ ಮನ್ ಕಿ ಬಾತ್ ರೇಡಿಯೋ ಭಾಷಣವನ್ನು ಮನೆ ಮನೆಗೆ ತಲುಪಿಸುವ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗುವುದು ಎಂದು ಅವರು ಹೇಳಿದರು.

ಇದೇ 25 ರಂದು ರಾಜ್ಯ ಬಿಜೆಪಿ ಪದಾಧಿಕಾರಿಗಳ ಸಭೆ ನಡೆಯಲಿದೆ. 26 ರಂದು ರಾಜ್ಯ ಕಾರ್ಯಕಾರಿಣಿ ಸಭೆ ನಡೆಯಲಿದ್ದು, ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಅವರು ವರ್ಚುವಲ್ ಮೂಲಕ ಸಭೆಯಲ್ಲಿ ಪಾಲ್ಗೊಳ್ಳುವರು ಎಂದು ರವಿಕುಮಾರ್ ಹೇಳಿದರು.

ತುರ್ತುಪರಿಸ್ಥಿತಿ ಮತ್ತು ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಮಾತನಾಡಿದ ರಾಜ್ಯ ಬಿಜೆಪಿ ಮುಖ್ಯ ವಕ್ತಾರ ಗಣೇಶ್ ಕಾರ್ಣಿಕ್, ವಿಧಾನಸಭೆ ಅಧಿವೇಶನಕ್ಕೆ ಖಾಸಗಿ ಸುದ್ದಿವಾಹಿನಿಗಳಿಗೆ ಅವಕಾಶ ಕೊಟ್ಟಿಲ್ಲ. ಆದರೆ, ಒಳಗಿನ ಕಲಾಪದ ನೇರ ಪ್ರಸಾರದ ಕೇಬಲ್ ಸಂಪರ್ಕ ನೀಡಲಾಗಿದೆ. ಲೋಕಸಭೆ ಮತ್ತು ರಾಜ್ಯ ಸಭೆಯಲ್ಲೂ ಹಿಂದಿನಿಂದ ಇದೇ ಮಾದರಿಯನ್ನು ಅನುಸರಿಸಲಾಗುತ್ತಿದೆ ಎಂದು ಹೇಳಿದರು.

ಪ್ಯಾಕೇಜ್ ಲಾಭದ ಮಾಹಿತಿ ಸಂಗ್ರಹ; ಡಿ.ಕೆ. ಶಿವಕುಮಾರ್

ಕೋವಿಡ್ ಸಾವು: ಕಾಂಗ್ರೆಸ್ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯದಲ್ಲಿ ಕೋವಿಡ್‌ನಿಂದ ಮೃತಪಟ್ಟವರ ನಿಖರ ಸಂಖ್ಯೆಯನ್ನು ಸರ್ಕಾರ ಮುಚ್ಚಿಟ್ಟಿದೆ. ಕಾಂಗ್ರೆಸ್ ಕಾರ್ಯಕರ್ತರು ಮನೆಮನೆಗೆ ತೆರಳಿ ಸಮೀಕ್ಷೆ ನಡೆಸುವ ಮೂಲಕ ಮಾಹಿತಿ ಸಂಗ್ರಹಿಸಿ, ಅಂಕಿ–ಸಂಖ್ಯೆ ಬಹಿರಂಗಪಡಿಸಲಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಅವರನ್ನು ಮಂಗಳವಾರ ಭೇಟಿ ಮಾಡಿ ಬಂದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಕೋವಿಡ್‌ನಿಂದ ಸಾವಿಗೀಡಾದವರ ಬಗ್ಗೆ ರಾಜ್ಯ ಸರ್ಕಾರ ಒದಗಿಸಿರುವ ಅಂಕಿ–ಸಂಖ್ಯೆಯಲ್ಲೇ ವ್ಯತ್ಯಾಸವಿದೆ. ಕಾರ್ಯಕರ್ತರ ಸಮೀಕ್ಷೆಯ ಬಳಿಕವಷ್ಟೇ ಈ ಕುರಿತಾದ ಅನುಮಾನ ಬಗೆಹರಿಯಲಿದೆ ಎಂದರು.

ಲಾಕ್‌ಡೌನ್ ವೇಳೆ ಬಡಜನರಿಗೆ ನೆರವು ನೀಡಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಘೋಷಿಸಿರುವ ಪ್ಯಾಕೇಜ್‌ನಿಂದ ಯಾರಿಗೆ ಉಪಯೋಗವಾಗಿದೆ, ಯಾರಿಗೆ ಲಾಭವಾಗಿದೆ ಎಂಬ ಕುರಿತೂ ಮಾಹಿತಿ ಸಂಗ್ರಹಿಸಲಾಗುವುದು. ಪಕ್ಷದ ಕಾರ್ಯಕರ್ತರು ವಿಶೇಷವಾಗಿ ರೈತರನ್ನು ಸಂಪರ್ಕಿಸಿ ಮಾಹಿತಿ ಪಡೆಯಲಿದ್ದಾರೆ ಎಂದು ವಿವರ ನೀಡಿದರು.

ಪಕ್ಷದ ಜಿಲ್ಲಾ ಘಟಕಗಳ ಪದಾಧಿಕಾರಿಗಳ ಬದಲಾವಣೆ ಕುರಿತು ಚರ್ಚಿಸಲಾಗಿದೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿ ಯಾರು ಆಗಲಿದ್ದಾರೆ ಎಂಬ ಹೇಳಿಕೆ ನೀಡುತ್ತಿರುವ ಶಾಸಕರನ್ನು ಹತೋಟಿಯಲ್ಲಿ ಇಡುವುದು ವರಿಷ್ಠರಿಗೆ ಗೊತ್ತಿದೆ. ಮುಖ್ಯಮಂತ್ರಿ ಯಾರು ಆಗಬೇಕು ಎಂಬುದನ್ನು ಶಾಸಕಾಂಗ ಪಕ್ಷದ ಮುಖಂಡರೇ ನಿರ್ಧರಿಸಲಿದ್ದಾರೆ ಎಂದು ಅವರು ತಿಳಿಸಿದರು.


ರಾಹುಲ್ ಭೇಟಿ ಮಾಡಿದ ಡಿಕೆಶಿ: ಇದಕ್ಕೂ ಮುನ್ನ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿದ ಡಿ.ಕೆ. ಶಿವಕುಮಾರ್, ರಾಜ್ಯ ರಾಜಕೀಯ ಬೆಳವಣಿಗೆಗಳ ಕುರಿತು ಚರ್ಚಿಸಿದ್ದಾಗಿ ಹೇಳಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿ ಯಾರಾಗಬೇಕು ಎಂಬ ಕುರಿತು ಪಕ್ಷದ ಶಾಸಕರು ಹೇಳಿಕೆ ನೀಡುತ್ತಿರುವ ಬಗ್ಗೆ ರಾಹುಲ್ ಜೊತೆ ಚರ್ಚಿಸಲಾಗಿದೆಯಾ ಎಂಬ ಪ್ರಶ್ನೆಗೆ ಅವರು ಪ್ರತಿಕ್ರಿಯೆ ನೀಡಲಿಲ್ಲ.

ನಿಧನ ವಾರ್ತೆ

ಗೊರವಯ್ಯ ಮಾಲತೇಶಪ್ಪ

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಸುಕ್ಷೇತ್ರ ಮೈಲಾರದಲ್ಲಿ ಈ ಹಿಂದೆ ಮೈಲಾರಲಿಂಗೇಶ್ವರ ಸ್ವಾಮಿ ಕಾರಣಿಕ ನುಡಿ ಸೇವೆ ಸಲ್ಲಿಸುತ್ತಿದ್ದ ಗೊರವಯ್ಯ ಮಾಲತೇಶಪ್ಪ (61) ಮಂಗಳವಾರ ನಿಧನರಾದರು. ಅಂತ್ಯಕ್ರಿಯೆ ಮೈಲಾರದಲ್ಲಿ ನೆರವೇರಿತು.



ಅವರಿಗೆ ಪತ್ನಿ ಇದ್ದಾರೆ. ಇಬ್ಬರು ಮಕ್ಕಳು ಹಿಂದೆಯೇ ನಿಧನರಾಗಿದ್ದರು. ಕಾರಣಿಕ ನುಡಿಯನ್ನು ಭಕ್ತರು ನಾಡಿನ ಭವಿಷ್ಯವಾಣಿ ಎಂದೇ ನಂಬಿದ್ದಾರೆ. ಮಾಲತೇಶಪ್ಪ ಅವರು ಸುಕ್ಷೇತ್ರದಲ್ಲಿ 23 ಬಾರಿ ಕಾರಣಿಕ ನುಡಿದಿದ್ದರು. ಭಕ್ತರ ನಂಬಿಕೆ ಬಲಗೊಳ್ಳುವಂತಹ ಉಕ್ತಿಗಳನ್ನು ನುಡಿದು ಸುಕ್ಷೇತ್ರದ ಧಾರ್ಮಿಕ ಪರಂಪರೆಯನ್ನು ಎತ್ತಿ ಹಿಡಿದಿದ್ದರು.

ದಾವಣಗೆರೆ: 'ಮಿಸ್ಸಿ' ಸೋಂಕು ಪತ್ತೆ

ದಾವಣಗೆರೆ: ಕಪ್ಪು ಶಿಲೀಂಧ್ರ ರೀತಿಯಲ್ಲಿಯೇ ಮಕ್ಕಳಿಗೆ ಬರುವ 'ಮಿಸ್ಸಿ' ಸೋಂಕು ಜಿಲ್ಲೆಯಲ್ಲಿ ಪತ್ತೆಯಾಗಿದೆ. ಸೋಂಕು ಲಕ್ಷಣವಿರುವ ಮಗುವಿಗೆ ಎಸ್.ಎಸ್. ಹೈಟೆಕ್ ಆಸ್ಪತ್ರೆಯ ಮಕ್ಕಳ ತಜ್ಞ ಡಾ.ಕಾಳಪ್ಪನವರ್ ಚಿಕಿತ್ಸೆ ನೀಡುತ್ತಿದ್ದಾರೆ. ಮಿಸ್ಸಿ ಸೋಂಕಿನ ಲಕ್ಷಣ ಇದ್ದರೂ ಇನ್ನೂ ದೃಢವಾಗಿಲ್ಲ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರು ಸಚಿವೆ ಶಶಿಕಲಾ ಜೊಲ್ಲೆ ಅವರಿಗೆ ಮಾಹಿತಿ ನೀಡಿದ್ದಾರೆ.

ಚಲನಚಿತ್ರ, ಕಿರುತೆರೆ ರಂಗದವರಿಗೆ ಆರ್ಥಿಕ ನೆರವು

ಅರ್ಜಿ ಸಲ್ಲಿಸಲು 'ಸೇವಾ ಸಿಂಧು'

ಬೆಂಗಳೂರು: ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿದ್ದ ಚಲನಚಿತ್ರ, ಕಿರುತೆರೆ ಕಲಾವಿದರು ಮತ್ತು ತಂತ್ರಜ್ಞರು ಹಾಗೂ ಚಲನಚಿತ್ರ ಮಂದಿರಗಳ ಕಾರ್ಮಿಕರಿಗೆ ಸರ್ಕಾರ ಘೋಷಿಸಿದ್ದ ₹ 3 ಸಾವಿರ ಮೊತ್ತದ ವಿಶೇಷ ಆರ್ಥಿಕ ನೆರವಿಗಾಗಿ ಸಿಂಧು ಪೋರ್ಟಲ್ ಮೂಲಕ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅರ್ಜಿ ಆಹ್ವಾನಿಸಿದೆ.

ಆರ್ಥಿಕ ನೆರವನ್ನು ಆಧಾರ್ ಕಾರ್ಡ್ ಸಂಖ್ಯೆ ಆಧರಿಸಿ ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗುವುದು. ಸೇವಾ ಸಿಂಧು ವೆಬ್ ಪೋರ್ಟಲ್ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸಬೇಕು. ಅರ್ಜಿ ನಮೂನೆ ಮತ್ತು ಇನ್ನಿತರ ಷರತ್ತುಗಳಿಗಾಗಿ www.sevasindhu.karnataka.gov.in ಗೆ ಭೇಟಿ ನೀಡಿ ಪಡೆದುಕೊಳ್ಳಬಹುದು ಎಂದು ಇಲಾಖೆಯ ಆಯುಕ್ತ ಡಾ.ಪಿ.ಎಸ್. ಹರ್ಷ ಅವರು ತಿಳಿಸಿದ್ದಾರೆ.

ಒಬ್ಬರು ಒಂದು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಸಂಬಂಧಿತ ಸಂಘಗಳಲ್ಲಿ ಸದಸ್ಯತ್ವ ಹೊಂದಿರಬೇಕು ಮತ್ತು ಅಲ್ಲಿಂದ ಪಡೆದ ಶಿಫಾರಸು ಪತ್ರವನ್ನು ಸೇವಾ ಸಿಂಧು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಚಲನಚಿತ್ರ ಮಂದಿರಗಳ ಕಾರ್ಮಿಕರು ಭವಿಷ್ಯ ನಿಧಿ (ಪ್ರಾವಿಡೆಂಟ್ ಫಂಡ್) ಸಂಖ್ಯೆಯೊಂದಿಗೆ ಚಿತ್ರಮಂದಿರದ ಮಾಲೀಕರ ಪತ್ರದೊಂದಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಆನ್‌ಲೈನ್ ಅರ್ಜಿ 2021ರ ಜುಲೈ 9ರ ವರೆಗೆ ಲಭ್ಯವಿದೆ ಎಂದು ಮಾಹಿತಿ ನೀಡಿದ್ದಾರೆ.

ಈ ಕುರಿತ ಹೆಚ್ಚಿನ ಮಾಹಿತಿ ಮತ್ತು ಆನ್‌ಲೈನ್ ಅರ್ಜಿ ಭರ್ತಿ ಮಾಡಲು ಮಾರ್ಗದರ್ಶನಕ್ಕಾಗಿ ಮೊಬೈಲ್ ಸಂಖ್ಯೆ 8904645529 ಸಂಪರ್ಕಿಸಬಹುದು ಅಥವಾ dpmfilm1@gmail.com ಗೆ ಇಮೇಲ್ ಮೂಲಕ ಪಡೆದುಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಚಲನಚಿತ್ರ ಕಾರ್ಮಿಕರಿಗೆ ಶಿವಣ್ಣ ₹ 10 ಲಕ್ಷ ನೆರವು



ಬೆಂಗಳೂರು: ಪತ್ನಿ ಗೀತಾ ಶಿವರಾಜ್ ಕುಮಾರ್ ಅವರ ಹುಟ್ಟುಹಬ್ಬದ ಪ್ರಯುಕ್ತ ಕನ್ನಡ ಚಲನಚಿತ್ರ ಕಾರ್ಮಿಕರಿಗೆ ನಟ ಶಿವರಾಜ್ ಕುಮಾರ್ ₹ 10 ಲಕ್ಷ ನೆರವು ನೀಡಿದ್ದಾರೆ. ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಕಾರ್ಮಿಕರಿಗೆ ಈ ನೆರವು ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಒಕ್ಕೂಟಕ್ಕೆ ಚೆಕ್ ಹಸ್ತಾಂತರಿಸುವಾಗ, ನಿರ್ಮಾಪಕ ಕೆ.ಪಿ. ಶ್ರೀಕಾಂತ್, ವಾಣಿಜ್ಯ ಮಂಡಳಿ ಮಾಜಿ ಅಧ್ಯಕ್ಷ ಸಾ.ರಾ.ಗೋವಿಂದು ಹಾಜರಿದ್ದರು. ಕಾರ್ಮಿಕರಿಗೆ ಅಗತ್ಯ ನೆರವು ನೀಡಲು ಹಣವನ್ನು ಬಳಸಿಕೊಳ್ಳುವಂತೆ ಶಿವರಾಜ್ ಕುಮಾರ್ ಅವರು ಒಕ್ಕೂಟಕ್ಕೆ ಸಲಹೆ ನೀಡಿದ್ದಾರೆ.

ಚನ್ನಹಳ್ಳಿ ಗ್ರಾಮದಲ್ಲಿ ಸ್ಫೋಟ ಪ್ರಕರಣ

130 ಡೆಟೋನೇಟರ್, ಜಿಲೆಟಿನ್ ಪತ್ತೆ

ಪ್ರಜಾವಾಣಿ ವಾರ್ತೆ

ಆಲೂರು (ಹಾಸನ): ತಾಲ್ಲೂಕಿನ ಚನ್ನಹಳ್ಳಿ ಗ್ರಾಮದಲ್ಲಿ ಜಿಲೆಟಿನ್ ಕಡ್ಡಿಗಳು ಸ್ಫೋಟಗೊಂಡು, ಮಕ್ಕಳು ಗಾಯಗೊಂಡ ಸ್ಥಳದಲ್ಲಿ ಪರಿಶೀಲನೆ ನಡೆಸಿದ ಪೊಲೀಸರಿಗೆ 130 ಡೆಟೋನೇಟರ್, ಜಿಲೆಟಿನ್ ಕಡ್ಡಿ ಹಾಗೂ ಉಪ್ಪು ದೊರೆತಿವೆ.

ಪೊಲೀಸರು, ಬಾಂಬ್ ನಿಷ್ಕ್ರಿಯ ದಳದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಸ್ಫೋಟಗೊಂಡ ಸ್ಥಳದ ಸಮೀಪ ಲಾರಿಯಲ್ಲಿ ಈ ವಸ್ತುಗಳು ಪತ್ತೆಯಾಗಿವೆ. ಈ ಲಾರಿಯು ಕೆಲ ವರ್ಷಗಳಿಂದ ಇದೇ ಸ್ಥಳದಲ್ಲಿ ನಿಂತಿದೆ.

ಸ್ಫೋಟಕಗಳ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ನ್ಯಾಯಾಲಯದ ಅನುಮತಿ ಪಡೆದು 130 ಡೆಟೋನೇಟರ್ಸ್, ಜಿಲೆಟಿನ್ ಕಡ್ಡಿಗಳನ್ನು ನಿಷ್ಕ್ರಿಯಗೊಳಿಸಲಾಯಿತು ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ಅಧಿಕಾರಿ ನಂದಿನಿ ತಿಳಿಸಿದರು.

ಸ್ಥಳಕ್ಕೆ ಶಾಸಕ ಎಚ್.ಕೆ.ಕುಮಾರಸ್ವಾಮಿ ಭೇಟಿ ನೀಡಿದ್ದರು. 'ಎತ್ತಿನಹೊಳೆ ಯೋಜನೆಯ ಗುತ್ತಿಗೆದಾರರ ನಿರ್ಲಕ್ಷ್ಯದಿಂದ ಅವಘಡ ಸಂಭವಿಸಿದೆ. ಇಬ್ಬರು ಮಕ್ಕಳು ಗಾಯಗೊಂಡಿದ್ದಾರೆ. ಅವರಿಗೆ ಪರಿಹಾರ ನೀಡಬೇಕು. ವಾಟೆಹೊಳೆ ಜಲಾಶಯ ಬಳಿ ಸ್ಫೋಟಕಗಳಿದ್ದ ಲಾರಿ ಪತ್ತೆ ಕುರಿತು ತನಿಖೆಯಾಗಬೇಕು' ಎಂದು ಆಗ್ರಹಿಸಿದರು.



ಬಾಂಬ್ ನಿಷ್ಕ್ರಿಯ ದಳದ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು

ಎತ್ತಿನಹೊಳೆ ಯೋಜನೆಯ ಗುತ್ತಿಗೆ ಪಡೆದಿರುವ ದಿ ಶಂಕರ್ ಕಂಪನಿ ಹಾಗೂ ಸ್ಫೋಟಕ ಬಳಕೆದಾರ ಶಿವಾನಂದ ಗೋಣಿ, ಎತ್ತಿನಹೊಳೆ ಯೋಜನೆ ಎಂಜಿನಿಯರ್‌ಗಳಾದ ಸುಧೀಂದ್ರ, ಖಾನ್, ರಾಮಣ್ಣ ವಿರುದ್ಧ ಪ್ರಕರಣ ದಾಖಲಾಗಿದೆ.

ಲಸಿಕಾ ಅಭಿಯಾನದ ತಲೆಬರಹ ತಿರುಚಿ ಟ್ರೋಲ್

'ಸಾಮಾಜಿಕ ಕಾಳಜಿಯಿಂದ ನೀಡಿದ ಹೇಳಿಕೆಯನ್ನು ತಿರುಚಿದ ಕಿಡಿಗೇಡಿಗಳ ವಿರುದ್ಧ ನಾನೂ ಕಾನೂನು ಕ್ರಮ ಕೈಗೊಳ್ಳಲಿದ್ದೇನೆ' ಎಂದ ಸಂಯುಕ್ತಾ ಹೊರನಾಡು

ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ

ಬೆಂಗಳೂರು: ಕೊರೊನಾ ಪ್ರತಿರೋಧಕ ಲಸಿಕೆ ಪಡೆಯುವಂತೆ ಜನಸಾಮಾನ್ಯರಲ್ಲಿ ಅರಿವು ಮೂಡಿಸಲು 'ಪ್ರಜಾವಾಣಿ'ಗೆ ನಟಿ ಸಂಯುಕ್ತಾ ಹೊರನಾಡು ಅವರು ನೀಡಿದ್ದ ಹೇಳಿಕೆಯ ತಲೆಬರಹವನ್ನು ಕೆಲವು ಕಿಡಿಗೇಡಿಗಳು ತಿರುಚಿ, ನಟಿಗೆ ಅವಹೇಳನ ಮಾಡಿದ್ದು, ಆ ಕಿಡಿಗೇಡಿಗಳ ವಿರುದ್ಧ ಪತ್ರಿಕೆ ವತಿಯಿಂದ ಕಾನೂನು ಕ್ರಮ ಜರುಗಿಸಲು ನಿರ್ಧರಿಸಲಾಗಿದೆ.



ತಿರುಚಿದ ತಲೆಬರಹದ ಚಿತ್ರವನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿ, ಮಾನಹಾನಿ ಆಗುವ ರೀತಿಯಲ್ಲಿ ಅದನ್ನು ಬಳಸಿಕೊಳ್ಳಲಾಗಿದೆ. ಸಾಮಾಜಿಕ ಕಳಕಳಿಗಾಗಿ ನಡೆಸಿದ ಆಂದೋಲನದ ಹೇಳಿಕೆಯನ್ನು ಅಸಂಬದ್ಧವಾಗಿ ವ್ಯಾಖ್ಯಾನಿಸಿ, ನಟಿಗೆ ಅವಹೇಳನವನ್ನೂ ಮಾಡಲಾಗಿದೆ.

'ನಾನು ಲಸಿಕೆ ಹಾಕಿಸಿಕೊಂಡೆ, ನೀವು?' ಎಂದಿದ್ದ ತಲೆಬರಹದಿಂದ 'ಲಸಿಕೆ' ಎಂಬ ಪದವನ್ನು ಅಳಿಸಿಹಾಕಿ ಟ್ರೋಲ್ ಮಾಡಲಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಈ ರೀತಿ ತಿರುಚಿದ ತಲೆಬರಹವಿರುವ ಚಿತ್ರಹಾಕಿದ ಕಿಡಿಗೇಡಿಗಳ ವಿರುದ್ಧ ಪತ್ರಿಕೆ 'ಮಾಹಿತಿ ತಂತ್ರಜ್ಞಾನ ನಿಯಮ'ಗಳ ಅಡಿಯಲ್ಲಿ ಕಾನೂನು ಕ್ರಮ ಕೈಗೊಳ್ಳಲಿದೆ. ತಪ್ಪಿತಸ್ಥರ ಪತ್ತೆಗಾಗಿ ಪೊಲೀಸರಿಗೆ ದೂರನ್ನೂ ನೀಡಲು ನಿರ್ಧರಿಸಿದೆ.

ಮಳೆ ಬಿಡುವು: ತಗ್ಗಿದ ಜಲಾಶಯಗಳ ಒಳಹರಿವು

ಶಿವಮೊಗ್ಗ: ಜಿಲ್ಲೆಯಲ್ಲಿ ಮೂರು ದಿನದಿಂದ ಮಳೆ ಕ್ಷೀಣಿಸಿದ್ದು, ಜಲಾಶಯಗಳ ಒಳಹರಿವು ಪ್ರಮಾಣವೂ ತಗ್ಗಿದೆ. ತುಂಗಾ ಜಲಾಶಯದ ಒಳಹರಿವು 15,414 ಕ್ಯುಸೆಕ್‌ಗೆ ಇಳಿಕೆಯಾಗಿದೆ.

ಜಲಾಶಯ ಈಗಾಗಲೇ ಭರ್ತಿ ಆಗಿರುವುದರಿಂದ, ಒಳ ಹರಿವಿನ ಪ್ರಮಾಣದಷ್ಟೇ ನೀರನ್ನು ಹೊಳೆಗೆ ಬಿಡಲಾಗುತ್ತಿದೆ. ಭದ್ರಾ ಜಲಾಶಯಕ್ಕೆ ಪ್ರಸ್ತುತ 9,581 ಕ್ಯುಸೆಕ್ ಒಳಹರಿವು ಇದೆ. ಹಾಗಾಗಿ, ಜಲಾಶಯದ ನೀರಿನ ಮಟ್ಟ 152.6 ಅಡಿಗೆ ಏರಿಕೆಯಾಗಿದೆ.

ಲಿಂಗನಮಕ್ಕಿ ಹಿನ್ನೀರು ಭಾಗದಲ್ಲಿ ಮಳೆ ಪ್ರಮಾಣ ಸಂಪೂರ್ಣ ತಗ್ಗಿದೆ. ಜಲಾಶಯಕ್ಕೆ 10,827 ಕ್ಯುಸೆಕ್ ಒಳಹರಿವು ಇದೆ. ಇದರಿಂದ ಡ್ಯಾಂನ ನೀರಿನ ಮಟ್ಟ 1785.70 ಅಡಿಗೆ ತಲುಪಿದೆ. ಕೊಡಗು ಜಿಲ್ಲೆಯಾದ್ಯಂತ ಮಳೆ ಅಬ್ಬರ ತಗ್ಗಿದ್ದು, ಕೆಲವೆಡೆ ಮಂಗಳವಾರ ಸಾಧಾರಣ ಮಳೆ ಸುರಿದಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	94.72	9,901	5,241
ಹಾರಂಗಿ	2,859	2,837.73	1,385	80
ಕಬಿನಿ	2284.00	2,276.11	5,000	5,000
ಹೇಮಾವತಿ	2,922	2,893.58	5,459	200
ಲಿಂಗನಮಕ್ಕಿ	1,819	1,785.70	10,827	-
ಸೂಪಾ (ಮೀ)	564	539.20	7,673	4,755
ಮಾಣಿ	594.36	573.92	626	-
ತುಂಗಭದ್ರಾ	1,633	1,602.72	36,979	260
ಮಲಪ್ರಭಾ	2079.5	2,061.10	10,611	194
ಘಟಪ್ರಭಾ	2,175	2,126.10	16,658	114
ಭದ್ರಾ	186	152.6	9581	79
ಆಲಮಟ್ಟಿ (ಮೀ)	519.6	516.36	1,55,056	451
ನಾರಾಯಣಪುರ (ಮೀ)	492.25	489.01	5250	116

* ನೆಲಮಟ್ಟದಿಂದ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಸಿ.ಡಿ ಪ್ರಕರಣ: ಸಂತ್ರಸ್ತೆ ತಂದೆ ಸಲ್ಲಿಸಿದ್ದ ಅರ್ಜಿ ವಜಾ

ಬೆಂಗಳೂರು: ನ್ಯಾಯಾಧೀಶರ ಮುಂದೆ ತಮ್ಮ ಮಗಳು ನೀಡಿರುವ ಹೇಳಿಕೆ ರದ್ದುಪಡಿಸುವಂತೆ ಕೋರಿ ಶಾಸಕ ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣದ ಸಂತ್ರಸ್ತೆಯ ತಂದೆ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

'2021ರ ಮಾರ್ಚ್ 30ರಂದು ನ್ಯಾಯಾಧೀಶರ ಮುಂದೆ ಮಗಳು (ಸಂತ್ರಸ್ತೆ) ಹೇಳಿಕೆ ದಾಖಲಿಸುವಾಗ ಕಾಂಗ್ರೆಸ್ ಕಾನೂನು ಘಟಕದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ವಕೀಲ ಸೂರ್ಯಮುಕುಂದರಾಜ್ ಹಾಜರಿದ್ದರು. ಇದು ಸಿಆರ್‌ಪಿಸಿ 164 ಸೆಕ್ಷನ್‌ಗೆ ವಿರುದ್ಧ. ಹೀಗಾಗಿ, ಹೇಳಿಕೆ ರದ್ದುಪಡಿಸಬೇಕು' ಎಂದು ಕೋರಿದ್ದರು.

'ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಲು ಯಾರೂ ಬಲವಂತ ಮಾಡಿಲ್ಲ ಎಂದು ಸಂತ್ರಸ್ತೆ ಈಗಾಗಲೇ ಹೇಳಿಕೆ ನೀಡಿದ್ದಾರೆ. ಸಂತ್ರಸ್ತೆ ಪೋಷಕರಿಂದ ದೂರ ಇದ್ದಾರೆ ಎಂದು ಎಸ್‌ಐಟಿ ವಕೀಲರು ತಿಳಿಸಿದ್ದಾರೆ. ಹೀಗಾಗಿ, ಸಂತ್ರಸ್ತೆಯ ಹೇಳಿಕೆ ಪ್ರಶ್ನಿಸುವ ಹಕ್ಕು ಅವರ ತಂದೆಗೆ ಇಲ್ಲ' ಎಂದು ಪ್ರಾಸಿಕ್ಯೂಷನ್ ವಿವರಿಸಿತು.

ಪಾರಂಪರಿಕ ರಕ್ಷಣಾ ಸಮಿತಿ ಅನುಮೋದನೆ ಪಡೆದಿಲ್ಲ: ತನಿಖಾ ವರದಿಯಲ್ಲಿ ಉಲ್ಲೇಖ

ಅನುಮತಿಯಿಲ್ಲದೇ ಈಜುಕೊಳ ನಿರ್ಮಾಣ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಜಿಲ್ಲಾಧಿಕಾರಿ ನಿವಾಸ 'ಜಲಸನ್ನಿಧಿ'ಯಲ್ಲಿ ಈಜುಕೊಳ ನಿರ್ಮಾಣ ಮಾಡಲು ಪಾರಂಪರಿಕ ಸಂರಕ್ಷಣಾ ಸಮಿತಿಯ ಅನುಮತಿಯನ್ನೇ ಪಡೆದಿಲ್ಲ ಎಂದು ಪ್ರಾದೇಶಿಕ ಆಯುಕ್ತರ ತನಿಖಾ ವರದಿ ಹೇಳಿದೆ.

ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ್ ಅವರು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸಲ್ಲಿಸಿರುವ ವರದಿಯು ಮಾಧ್ಯಮಗಳಿಗೆ ಸೋರಿಕೆಯಾಗಿದ್ದು, ಪ್ರಮುಖವಾಗಿ 6 ಅಂಶಗಳನ್ನು ತನಿಖೆ ವೇಳೆ ಕಂಡುಕೊಂಡಿರುವುದಾಗಿ ತಿಳಿಸಿದೆ.

ನಗರಾಭಿವೃದ್ಧಿ ಇಲಾಖೆಯು 2020ರ ಏ. 21ರಂದು ಹೊರಡಿಸಿದ ಅಧಿಸೂಚನೆಯಂತೆ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ, ನವೀಕರಣ ಕೆಲಸ ಮಾಡಬೇಕಾದರೆ ಪಾರಂಪರಿಕ ಸಂರಕ್ಷಣಾ ಸಮಿತಿಯ ಅನುಮೋದನೆ ಪಡೆಯಬೇಕು. ಆದರೆ, ಈಜುಕೊಳ ನಿರ್ಮಾಣಕ್ಕೆ ಅನುಮೋದನೆ ಪಡೆದಿಲ್ಲ ಎಂದಿದೆ.




ರೋಹಿಣಿ ಸಿಂಧೂರಿ


ಈಜುಕೊಳ ನಿರ್ಮಾಣಕ್ಕೆ ₹32.55 ಲಕ್ಷ ಮೊತ್ತಕ್ಕೆ ಅಂದಾಜು ಪಟ್ಟಿ ತಯಾರಿಸಿದ್ದು, ಇದಕ್ಕೆ ಲೋಕೋಪಯೋಗಿ ಇಲಾಖೆ ಒಪ್ಪಿಗೆ ಪಡೆದುಕೊಂಡಿಲ್ಲ. ಪೂರ್ವಭಾವಿ ಆಡಳಿತಾತ್ಮಕ ಮಂಜೂರಾತಿ ಪಡೆದಿಲ್ಲ. ನಿರ್ಮಾಣದ ಕುರಿತು ಕಾರ್ಯಾದೇಶ ಇರುವುದಿಲ್ಲ. ಕಾಮಗಾರಿಗೆ ಪೂರಕ ಪತ್ರಗಳೂ ಇರುವುದಿಲ್ಲ ಎಂಬ ಅಂಶ ವರದಿಯಲ್ಲಿದೆ.

'ಜಿಲ್ಲಾಧಿಕಾರಿಗಳ ಅಧಿಕೃತ ನಿವಾಸದ ಆವರಣದಲ್ಲಿ ಈಜುಕೊಳ ನಿರ್ಮಾಣ ಆಗಿರುವುದರಿಂದ, ಸಾರ್ವಜನಿರಿಗೆ ಉಪಯೋಗಿಸಲು ಸಾಧ್ಯವಿಲ್ಲ. ಎಲ್ಲ ಅಂಶಗಳನ್ನು ಗಮನಿಸಿದಾಗ, ಈ ನಿರ್ಮಾಣ ಕಾರ್ಯದ ಹಿಂದೆ ಯಾವುದೇ ಸಾರ್ವಜನಿಕ ಹಿತಾಸಕ್ತಿ ಇಲ್ಲ' ಎಂದು ಹೇಳಿದೆ.

ರೋಹಿಣಿ ಸಿಂಧೂರಿ ಅವರು ಜಿಲ್ಲಾಧಿಕಾರಿಯಾಗಿದ್ದ ಅವಧಿಯಲ್ಲಿ, 'ಜಲಸನ್ನಿಧಿ' ಆವರಣದಲ್ಲಿ ಅನುಮತಿ ಪಡೆಯದೆ ಈಜುಕೊಳ ನಿರ್ಮಿಸಿದ್ದ ಕುರಿತಂತೆ ಶಾಸಕ ಸಾ.ರಾ.ಮಹೇಶ್, ಜೆಡಿಎಸ್ ಮುಖಂಡ ಕೆ.ವಿ.ಮಲ್ಲೇಶ್ ಮತ್ತು ತುಮಕೂರಿನ ವಿಶ್ವಮಾನವ ಹಕ್ಕುಗಳ ಸಂಘಟನೆಯ ಅಧ್ಯಕ್ಷ ಸಿದ್ದಲಿಂಗೇಗೌಡ ದೂರು ನೀಡಿದ್ದರು. ಈ ದೂರಿನ ಮೇರೆಗೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯ ಸೂಚನೆಯಂತೆ ಪ್ರಾದೇಶಿಕ ಆಯುಕ್ತರು ತನಿಖೆ ನಡೆಸಿದ್ದರು. 'ತನಿಖೆಯ ವರದಿಯನ್ನು ಶನಿವಾರವೇ (ಜೂನ್ 19) ಸಲ್ಲಿಸಿದ್ದೇನೆ' ಎಂದಷ್ಟೇ ಜಿ.ಸಿ. ಪ್ರಕಾಶ್ ಪ್ರತಿಕ್ರಿಯಿಸಿದರು.







ಈಗ ಕ್ಲಬ್‌ಹೌಸ್ ಮೇನಿಯಾ. ಈಗ ಇರುವ ಎಲ್ಲ ಸಾಮಾಜಿಕ ಮಾಧ್ಯಮಗಳೂ ಒಂದೋ ಬರವಣಿಗೆಗೆ ಅಥವಾ ವಿಡಿಯೊಗೆ ಮೀಸಲಾಗಿವೆ. ಆದರೆ, ಈಗ ಸೋಷಿಯಲ್ ಆಡಿಯೊ ಎನ್ನುವುದು ಹೊಸ ಸೇರ್ಪಡೆ. ಈ ಹೊಸ ಆ್ಯಪ್‌ನ ಬಳಕೆ ಹೇಗೆ? ಇದು ಸೃಷ್ಟಿಸಿರುವ ಮೇನಿಯಾ ಎಂಥದ್ದು ಎನ್ನುವುದರ ಕುರಿತ ಬರಹ ಇದು.

ಕ್ಲಬ್‌ಹೌಸ್

ಸೋಷಿಯಲ್ ಆಡಿಯೊ ಕಡೆಗೆ...

ಬದಲಾಗುವ ಐಕಾನ್

ಸಾಮಾನ್ಯವಾಗಿ ಆ್ಯಪ್‌ಗಳು ವಿಶಿಷ್ಟ ಐಕಾನ್‌ನಿಂದ ಗುರುತಿಸಿಕೊಳ್ಳುತ್ತವೆ. ಈ ಐಕಾನ್ ವಿನ್ಯಾಸ ಕಾಲಕಾಲಕ್ಕೆ ಬದಲಾದರೂ, ಅದರ ಮೂಲ ಸ್ವರೂಪ ಹಾಗೆಯೇ ಇರುತ್ತದೆ. ಆದರೆ, ಕ್ಲಬ್‌ಹೌಸ್ ಇದಕ್ಕಿಂತ ಸ್ವಲ್ಪ ವಿಭಿನ್ನವಾಗಿದೆ. ಕ್ಲಬ್‌ಹೌಸ್‌ನ ಐಕಾನ್ ಕಾಲಕಾಲಕ್ಕೆ ಬದಲಾಗುತ್ತಿರುತ್ತದೆ. ಸಮಾಜದಲ್ಲಿ ಮಹತ್ವದ ಸಾಧನೆ ಮಾಡಿದ ವ್ಯಕ್ತಿಗಳನ್ನು ಐಕಾನ್ ಆಗಿ ಬಳಸುವ ವಿಶಿಷ್ಟ ಸಂಪ್ರದಾಯವನ್ನು ಕ್ಲಬ್‌ಹೌಸ್ ಬಳಸುತ್ತಿದೆ.

ಕೃಷ್ಣ ಭಟ್

ಕಳೆದ ಒಂದು ತಿಂಗಳಿನಿಂದ ಜನರು ಸೋಷಿಯಲ್ ಮೀಡಿಯಾಗಿಂತ ಹೆಚ್ಚಾಗಿ ಸೋಷಿಯಲ್ ಆಡಿಯೊದಲ್ಲಿ ತೊಡಗಿಸಿಕೊಂಡಿದ್ದಾರೆ. ಕೇವಲ ಒಂದು ತಿಂಗಳ ಹಳೆಯ ಕ್ಲಬ್‌ಹೌಸ್ ಎಂಬ ಆ್ಯಪ್ ಇಡೀ ಸೋಷಿಯಲ್ ಮೀಡಿಯಾ ಪ್ರಿಯರಲ್ಲಿ ಹೊಸ ಸಂಚಲನ ಮೂಡಿಸಿದೆ.

ಅಮೆರಿಕದ ಪಾಲ್ ಡೇವಿಸನ್ ಮತ್ತು ಭಾರತೀಯ ಮೂಲದ ರೋಹನ್ ಸೇಥ್ ಎಂಬ ಇಬ್ಬರು ತಂತ್ರಜ್ಞರು 2020ರಲ್ಲಿ ಆರಂಭಿಸಿದ ಕ್ಲಬ್‌ಹೌಸ್, ಮೊದಲು ಆಪಲ್ ಫೋನ್‌ಗಳಿಗೆ ಮಾತ್ರವೇ ಬಿಡುಗಡೆಯಾಗಿತ್ತು. ಆದರೆ, 2021 ಮಾರ್ಚ್ 21ರಂದು ಅಂದರೆ, ಬಿಡುಗಡೆಯಾಗಿ ಒಂದು ವರ್ಷದ ನಂತರ ಆಂಡ್ರಾಯ್ಡ್ ಫೋನ್‌ಗಳಲ್ಲೂ ಬಳಕೆಗೆ ಮುಕ್ತವಾಯಿತು. ಆಗಿನಿಂದ ಕ್ಲಬ್‌ಹೌಸ್ ಮೇನಿಯಾ ಶುರುವಾಗಿದೆ. ಇದರ ಬೆನ್ನಲ್ಲೇ ಈಗ ಇತರ ಸೋಷಿಯಲ್ ಮೀಡಿಯಾ ಮತ್ತು ಆಡಿಯೊ ಕಂಪನಿಗಳೂ ಈ ಥರದ್ದೇ ಸೇವೆಯನ್ನು ಆರಂಭಿಸುವ ಚಿಂತನೆ ನಡೆಸಿವೆ. ಸಂಗೀತ ಪ್ರಸಾರ ಮಾಡುವ ಜನಪ್ರಿಯ ಆ್ಯಪ್ ಸ್ಪಾಟಿಫೈ ತನ್ನದೇ 'ಕ್ಲಾಸ್‌ರೂಮ್' ಎಂಬ ಲೈವ್ ಪಾಡ್‌ಕಾಸ್ಟ್ ಆ್ಯಪ್ ಬಿಡುಗಡೆ ಮಾಡಿದೆ. ಟ್ವಿಟರ್ ಕೂಡ ಸ್ಪೇಸಸ್ ಅನ್ನು ಆರಂಭಿಸಿದೆ. ಫೇಸ್‌ಬುಕ್ ಕೂಡ ಇಂಥದ್ದೇ ಸೇವೆಯನ್ನು ಆರಂಭಿಸುವುದಾಗಿ ಹೇಳಲಾಗುತ್ತಿದೆ.



ಈ ಎಲ್ಲ ಆ್ಯಪ್‌ಗಳ ಮೂಲ ಉದ್ದೇಶವೊಂದೇ... ಮಾತನಾಡಲು ಅವಕಾಶ ಮಾಡಿಕೊಡುವುದು.

ಈಗ ಇರುವ ಎಲ್ಲ ಸಾಮಾಜಿಕ ಮಾಧ್ಯಮಗಳೂ ಒಂದೋ ಬರವಣಿಗೆಗೆ ಅಥವಾ ವಿಡಿಯೊಗೆ ಮೀಸಲಾಗಿವೆ. ಸದ್ಯ ಚಾಲ್ತಿಯಲ್ಲಿರುವ ಸೋಷಿಯಲ್ ಆಡಿಯೊ ಮಾಧ್ಯಮದ ಎಲ್ಲ ಆ್ಯಪ್‌ಗಳ ಮೂಲ ಧ್ಯೇಯವು ಜನರ ಮಾತನಾಡುವ ಹವ್ಯಾಸವನ್ನು ಬೆಳೆಸುವುದು; ಅದನ್ನು ಬಳಸಿಕೊಂಡು ಹೆಚ್ಚೆಚ್ಚು ಬಳಕೆದಾರರನ್ನು ಪಡೆಯುವುದಷ್ಟೇ ಆಗಿದೆ. ಉದ್ಯಮಿ ಎಲಾನ್ ಮಸ್ಕ್ ಮತ್ತು ಫೇಸ್‌ಬುಕ್ ಸಂಸ್ಥಾಪಕ ಮಾರ್ಕ್ ಝುಕರ್‌ಬರ್ಗ್ ಒಮ್ಮೆ ಕ್ಲಬ್‌ಹೌಸ್‌ನಲ್ಲಿ ಮಾತುಕತೆಗೆ ಆಗಮಿಸಿದ್ದರಿಂದ, ರಾತ್ರಿ ಬೆಳಗಾಗುವುದರೊಳಗೆ ಎಲ್ಲರಲ್ಲೂ ಕ್ಲಬ್‌ಹೌಸ್ ಮನೆಮಾತಾಯಿತು.

ಕ್ಲಬ್‌ಹೌಸ್ ಬಳಸುವುದು ಹೇಗೆ?

ಕ್ಲಬ್‌ಹೌಸ್ ಪ್ರವೇಶಿಸಲು ಸದ್ಯಕ್ಕೆ ಆಹ್ವಾನ ಬೇಕು. ಈಗಾಗಲೇ ಕ್ಲಬ್‌ಹೌಸ್‌ನಲ್ಲಿ ಖಾತೆ ಹೊಂದಿರುವವರು ಹೊಸದಾಗಿ ಕ್ಲಬ್‌ಹೌಸ್‌ಗೆ ಬರಲು ಇಚ್ಛಿಸುವವರಿಗೆ ಆಹ್ವಾನ ಕಳುಹಿಸಬೇಕು. ಅದಕ್ಕಾಗಿ ಇನ್ವೈಟ್ ಎಂಬ ಆಯ್ಕೆ ಕ್ಲಬ್‌ಹೌಸ್ ಆ್ಯಪ್‌ನಲ್ಲಿ ಇದೆ.

ಕ್ಲಬ್‌ಹೌಸ್ ಸೈನ್ ಅಪ್ ಮಾಡುವಾಗ, ನಿಮ್ಮ ಯೂಸರ್‌ನೇಮ್ ಸೆಟ್ ಮಾಡುವಂತೆ ಕೇಳುತ್ತದೆ. ಆ ಯೂಸರ್ ನೇಮ್ ನಮ್ಮನ್ನು ಕ್ಲಬ್‌ಹೌಸ್‌ನಲ್ಲಿ ಹುಡುಕುವುದಕ್ಕೆ ಸಹಾಯ ಮಾಡುವ ವಿಶಿಷ್ಟ ಹೆಸರಾದ್ದರಿಂದ, ಅದನ್ನು ಸ್ವಲ್ಪ ಕಾಳಜಿಯಿಂದ ಸೆಟ್ ಮಾಡುವುದೊಳಿತು. ನಂತರ ನಿಮ್ಮ ಆಸಕ್ತಿಗಳನ್ನು ಆಯ್ಕೆ ಮಾಡುವಂತೆ ಕೇಳುತ್ತದೆ. ನಿಮ್ಮ ಆಸಕ್ತಿಯ ವಿಷಯಗಳನ್ನು ಆಧರಿಸಿ ಡ್ಯಾಶ್‌ಬೋರ್ಡ್‌ನಲ್ಲಿ ನಿಮಗೆ ಮೆಚ್ಚುಗೆಯಾಗಬಹುದಾದ ವಿಷಯದ ರೂಮ್‌ಗಳನ್ನು ನಿಮಗೆ ತೋರಿಸುತ್ತದೆ.

ಮಾತಾಡಲು ಕೈಯೆತ್ತಿ

ಯಾವುದೇ ಒಂದು ರೂಮ್ ಮೇಲೆ ಸುಮ್ಮನೆ ಒಮ್ಮೆ ಒತ್ತಿದರೆ ಸಾಕು. ನೀವು ಕೇಳುಗರಾಗಿ ಒಳಗೆ ಹೋಗುತ್ತೀರಿ. ಚರ್ಚೆ, ಮಾತುಕತೆಯನ್ನು ಕೇಳಿ ನಿಮಗೂ ಮಾತನಾಡಬೇಕು ಎಂಬ ಹುಕಿ ಬಂದರೆ, ಕೆಳ ಬಲ ಮೂಲೆಯಲ್ಲಿರುವ ಕೈಯೆತ್ತುವ ಚಿಹ್ನೆಯನ್ನು ಒತ್ತಿದರೆ, 'ಇವರು ಮಾತನಾಡಲು ಬಯಸುತ್ತಿದ್ದಾರೆ. ಅನುಮತಿಸುತ್ತೀರಾ?' ಎಂಬ ಸೂಚನೆ ನಿರೂಪಕರಿಗೆ ಹೋಗುತ್ತದೆ. ಅವರು ನಿಮಗೆ ಅನುಮತಿಸಿದರೆ, ನೀವು ಮಾತನಾಡಲು ವೇದಿಕೆಗೆ ಹೋಗುತ್ತೀರಿ. ನೀವು ಮಾತನಾಡದೇ ಇರಲು ಬಯಸಿದಾಗಲೆಲ್ಲ ನಿಮ್ಮ ಮೈಕ್ ಮ್ಯೂಟ್ ಮಾಡಿ, ಕಿವಿ ತೆರೆದು ಕುಳಿತರೆ ಆಯಿತು.

ಮುಗುಮ್ಮಾಗಿ ಹೊರಟುಬಿಡಿ

ಇಲ್ಲಿ ಯಾವುದೇ ವ್ಯಕ್ತಿ ದುಂಡಾವರ್ತನೆ ತೋರಿದರೆ, ಆತನನ್ನು ಬ್ಲಾಕ್ ಮಾಡಬಹುದು. ರೂಮ್‌ನಲ್ಲಿನ ಮಾತು ಆಸಕ್ತಿದಾಯಕವಾಗಿಲ್ಲದಿದ್ದರೆ, 'ಲೀವ್ ಕ್ವೈಟ್ಲೀ' (ಮುಗುಮ್ಮಾಗಿ ಹೊರಟುಬಿಡಿ) ಎಂಬ ಬಟನ್ ಒತ್ತಿದರೆ, ನೀವು ರೂಮ್‌ನಿಂದ ಹೊರಹೋಗುತ್ತೀರಿ.

ಕನ್ನಡವಿಲ್ಲ

ಸದ್ಯ ಅಪ್ಲಿಕೇಶನ್‌ನಲ್ಲಿ ಹಿಂದಿ ಭಾಷೆ ಸೌಲಭ್ಯವಷ್ಟೇ ಇದೆ. ಸಂಸ್ಥೆಗೆ ಭಾರತವೂ ಒಂದು ಪ್ರಮುಖ ಮಾರುಕಟ್ಟೆಯಾಗಿರುವುದರಿಂದ ಆ್ಯಪ್‌ಅನ್ನು ಭಾರತೀಯ ಭಾಷೆಯಲ್ಲೂ ಒದಗಿಸುವ ನಿರೀಕ್ಷೆ ಇದೆ.

ರೆಕಾರ್ಡ್ ಆಗದು, ಆದಾಯ ಬರದು

ಸದ್ಯ, ಈ ರೂಮ್‌ನಲ್ಲಿ ನಡೆಯುವ ಮಾತುಕತೆಗಳನ್ನು ರೆಕಾರ್ಡ್ ಮಾಡುವ ಸೌಲಭ್ಯವಿಲ್ಲ. ರೂಮ್‌ನಲ್ಲಿ ಭಾಗವಹಿಸಿದವರ ಅನುಮತಿ ಇಲ್ಲದೇ, ರೆಕಾರ್ಡ್ ಮಾಡಬಾರದು ಎಂದೂ ಸಂಸ್ಥೆ ಹೇಳಿದೆ. ಅಲ್ಲದೆ, ಬಳಸುವವರಿಗೆ ಇಲ್ಲಿ ಆದಾಯ ಗಳಿಸುವ ವಿಧಾನವೂ ಸದ್ಯಕ್ಕೆ ಇಲ್ಲ.

ಸೆಲೆಬ್ರಿಟಿಗಳ ಆಡುಂಬೊಲ

ಕ್ಲಬ್‌ಹೌಸ್ ಈಗಿರುವ ಮಾಧ್ಯಮಕ್ಕಿಂತ ಸ್ವಲ್ಪ ಭಿನ್ನವಾಗಿದ್ದು, ಇಲ್ಲಿ ವ್ಯಕ್ತಿ ಮುಖಾಮುಖಿಯಾಗುವುದರಿಂದ ಒಂದೇ ಸಮನೆ ಆಕ್ರಮಣಕಾರಿ ಪ್ರತಿಕ್ರಿಯೆ ಬರುವ ಸಾಧ್ಯತೆ ಕಡಿಮೆ. ಹೀಗಾಗಿ, ಸೆಲೆಬ್ರಿಟಿಗಳಿಗೆ ಇದೊಂದು ಮೆಚ್ಚಿನ ತಾಣವೂ ಆಗಿದೆ. ಅಲ್ಲದೆ, ಅಭಿಮಾನಿಗಳ ಜೊತೆಗೆ ನೇರ ಮಾತನಾಡುವ ಅವಕಾಶವೂ ಇದರಲ್ಲಿ ಸಿಗುವುದರಿಂದ ವ್ಯಾಪಕ ಅಭಿಮಾನಿಗಳನ್ನು ಹೊಂದಿರುವ ಎಲ್ಲರಿಗೂ ಒಂದು ಉತ್ತಮ ವೇದಿಕೆಯಾಗಿದೆ. ❖



ನ್ಯಾನೋ ಮಾರ್ಗದಲ್ಲಿ ಕೋವಿರಕ್ಷಾ

ಕೋವಿಡ್ ಚಿಕಿತ್ಸೆ ಸಂಬಂಧಿಸಿ ಲಸಿಕೆ ಸಹಿತ ಹತ್ತಾರು ಆವಿಷ್ಕಾರಗಳು ನಡೆದಿವೆ, ನಡೆಯುತ್ತಲೇ ಇವೆ. ಈ ನಡುವೆ ಆಯುರ್ವೇದ ಮತ್ತು ನ್ಯಾನೋ ತಂತ್ರಜ್ಞಾನದ ಸಮ್ಮಿಲನದಲ್ಲಿ 'ಕೋವಿರಕ್ಷಾ' ಹೆಸರಿನ ತೈಲರೂಪದ ಪರಿಹಾರವೊಂದು ಬಂದಿದೆ.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಸಹಯೋಗದಲ್ಲಿ ನೂತನ್ ಲ್ಯಾಬ್ಸ್ ಕಂಪನಿಯ ವಿಜ್ಞಾನಿಗಳ ತಂಡ ಈ ಉತ್ಪನ್ನವನ್ನು ರೂಪಿಸಿದೆ. ಇತ್ತೀಚೆಗೆ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ.

'ಕೋವಿರಕ್ಷಾ'ದಲ್ಲಿ ಏನೇನಿದೆ?

'ಶುದ್ಧ ತೆಂಗಿನೆಣ್ಣೆಗೆ ಬೆಳ್ಳಿಯ ಕಣಗಳನ್ನು ನ್ಯಾನೋ ತಂತ್ರಜ್ಞಾನದ ಮೂಲಕ ಬೆರೆಸಲಾಗಿದೆ. ಪಚ್ಚಕರ್ಪೂರ ಸೇರಿದಂತೆ ಸ್ಥಳೀಯವಾಗಿ ಸಿಗುವ ಔಷಧೀಯ ವಸ್ತುಗಳನ್ನು ಬೆರೆಸಿ ಸಿದ್ಧಪಡಿಸಲಾಗಿದೆ. ಬೆಳ್ಳಿಯ ವೈರಸ್ ಪ್ರತಿಬಂಧಕ ಗುಣ ಇಲ್ಲಿ ಕೆಲಸ ಮಾಡುತ್ತದೆ' ಎನ್ನುತ್ತಾರೆ ನೂತನ್ ಲ್ಯಾಬ್ಸ್‌ನ ನಿರ್ದೇಶಕ, ವಿಜ್ಞಾನಿ ಎಚ್.ಎಸ್. ನೂತನ್.

ಹೇಗಿದೆ?

ಇದು ರೋಲ್ ಆನ್ ಮಾಡಬಹುದಾದ ಪುಟ್ಟ ಶೀಷೆ. 10 ಮಿಲಿ ಲೀಟರ್ ದ್ರಾವಣ ಇದೆ. ಅಂಗೈಗೆ ಅತ್ಯಲ್ಪ ಪ್ರಮಾಣದಲ್ಲಿ ಹಾಕಿ ಪೂರ್ಣ ಪ್ರಮಾಣದಲ್ಲಿ ಸವರಬೇಕು. ಮೂಗಿನ ಹೊಳ್ಳೆಗಳ ಹೊರಭಾಗ, ಹಣೆ, ಕತ್ತಿನ ಭಾಗ, ಮಾಸ್ಕ್‌ನ ಹೊರಭಾಗಕ್ಕೆ ಸ್ವಲ್ಪ ಲೇಪಿಸಿದರೆ ಸಾಕು. ಮುಂದಿನ ಮೂರು ಗಂಟೆಗಳ ಕಾಲ ಗಾಳಿಯ ಮೂಲಕ ನಿಮ್ಮ ದೇಹವನ್ನು ಸೇರಬಹುದಾದ ಯಾವುದೇ ವೈರಸ್ಸನ್ನು 'ಕೋವಿರಕ್ಷಾ' ಪ್ರತಿಬಂಧಿಸುತ್ತದೆ. ಮಾತ್ರವಲ್ಲ ಯಾವುದೇ ರೂಪಾಂತರಿತ ವೈರಸ್ ವಿರುದ್ಧವೂ ಕೆಲಸ ಮಾಡಬಲ್ಲುದು. ಒಂದು ಶೀಷೆಯ ದ್ರಾವಣವನ್ನು 200ಕ್ಕೂ ಹೆಚ್ಚು ಬಾರಿ ಬಳಸಬಹುದು' ಎನ್ನುತ್ತಾರೆ ನೂತನ್.



'ಕೋವಿರಕ್ಷಾ' ದ್ರಾವಣದ ಶೀಷೆ

ಚಿಕಿತ್ಸೆಗೂ ಬಳಕೆ: ಒಂದು ವೇಳೆ ಕೋವಿಡ್ ತಗುಲಿದ್ದಲ್ಲಿ ಚಿಕಿತ್ಸೆಗಾಗಿಯೂ ಬಳಸಬಹುದು. ಸಾಮಾನ್ಯ ವೈದ್ಯಕೀಯ ಚಿಕಿತ್ಸೆಯ ಜೊತೆಗೆ 'ಕೋವಿರಕ್ಷಾ'ವನ್ನು ಬಳಸಿದಲ್ಲಿ ಚೇತರಿಕೆ ಪ್ರಮಾಣ ತುಂಬಾ ವೇಗವಾಗಿದೆ. ಆರಂಭದಲ್ಲೇ ಬಳಸಿದರೆ ಆಮ್ಲಜನಕದ ವ್ಯತ್ಯಾಸ ಆಗುವ ಹಂತಕ್ಕೆ ಹೋಗುವ ಸಾಧ್ಯತೆಯೇ ಇಲ್ಲ. ಶ್ವಾಸಕೋಶವನ್ನು ಬಲಪಡಿಸುತ್ತದೆ. ಕೋವಿಡ್ ಹಾಗೂ ಅದರ ನಂತರದ ಎಲ್ಲ ಸಮಸ್ಯೆಗಳಿಗೂ ಇದು ರಕ್ಷಾ ಕವಚ' ಎನ್ನುತ್ತಾರೆ ಅವರು.

ಆಯುಷ್ ಅನುಮತಿ: ಕರ್ನಾಟಕ ಸರ್ಕಾರದ ಆಯುಷ್ ಇಲಾಖೆಯೂ ಕೋವಿರಕ್ಷಾ ಉತ್ಪಾದನೆ ಮತ್ತು ಬಳಕೆಗೆ ಪರವಾನಗಿ ನೀಡಿದೆ. ಕೇಂದ್ರ ಸರ್ಕಾರದ ಪರವಾನಗಿಯೂ ಶೀಘ್ರ ಬರಲಿದೆ ಎಂದಿರುವ ನೂತನ್, ಇದಕ್ಕೂ ಮುನ್ನ ಸುಮಾರು 10 ಸಾವಿರ ಜನರಿಗೆ ಮಾದರಿ ಕೊಟ್ಟು ಪರೀಕ್ಷಿಸಲಾಗಿದೆ. 200ಕ್ಕೂ ಅಧಿಕ ಮಂದಿ ಕೋವಿಡ್ ಪಾಸಿಟಿವ್ ಆದವರಿಗೆ ಕೊಟ್ಟಿದ್ದೇವೆ. ಎಲ್ಲರೂ ಗುಣಮುಖರಾದ ದಾಖಲೆ ಇದೆ. ಈ ಉತ್ಪನ್ನ ಸಿದ್ಧಗೊಳ್ಳುವಲ್ಲಿ 14 ತಿಂಗಳ ಪರಿಶ್ರಮ ಇದೆ. ದೇಶದ ಪ್ರಮುಖ ಸಂಶೋಧನಾ ಸಂಸ್ಥೆಗಳ ಪರಿಣತರ ನೆರವನ್ನು ಪಡೆದಿದ್ದೇವೆ' ಎಂದರು.

ಯಾವಾಗ ಲಭ್ಯ? ಎಷ್ಟು ಬೆಲೆ?


ಈಗಾಗಲೇ ಉತ್ಪಾದನೆ ಆರಂಭವಾಗಿದ್ದು, ಇನ್ನು ಮೂರು ತಿಂಗಳ ಒಳಗೆ ಗ್ರಾಹಕರ ಕೈಸೇರಲಿದೆ. ಇದರ ಬೆಲೆ ₹300. ಕೋವಿಡ್ ಅನ್ನು ಪರಿಣಾಮಕಾರಿಯಾಗಿ ಎದುರಿಸಲು ಕೋವಿರಕ್ಷಾ ಸಫಲವಾಗಲಿ ಎಂದು ಆಶಿಸೋಣ.

ಮಾಹಿತಿಗೆ ಮೊಬೈಲ್: 9731223630 ❖

ಸಿಇಟಿ ದಿಕ್ಸೂಚಿ


Physics - Motion in a Straight line

1. A particle shows distance-time curve as shown in the figure. The maximum instantaneous velocity of the particle is around the point



(1) P (2) S (3) R (4) Q

2. The displacement-time graph of two moving particles make angles of 30°&45° with the X-axis. The ratio of their velocities is [KCET-2011]



1) $\sqrt{3}:2$ 2) 1 : 1 3) 1 : 2 4) $1:\sqrt{3}$

3. A car moves from A to B with a speed of 30 kmph and from B to A with a speed of 20 kmph. What is the average speed of the car?

(1) 25 kmph (2) 24 kmph
(3) 50 kmph (4) 10 kmph

4. A body starts from rest and moves with constant acceleration for t s. It travels a distance x_1 in first half of time and x_2 in next half of time, then

(1) $x_2 = x_1$ (2) $x_2 = 2x_1$
(3) $x_2 = 3x_1$ (4) $x_2 = 4x_1$


5. In a lift moving up with an acceleration of $5ms^{-2}$, a ball is dropped from a height of 1.25 m. The time taken by theball to reach the floor of the lift is …….. (nearly) $(g = 10ms^{-2})$

1) 0.3 second 2) 0.2 second
3) 0.16 second 4) 0.4 second


6. A body falls freely for 10 sec. Its average velocity during this journey (take $g = 10\ ms^{-2}$)

(1) 100 ms-1 (2) 10 ms-1
(3) 50 ms-1 (4) 5 ms-1

7. The given graph shows the variation of velocity (v) with position (x) for a particle moving along a straight line



Which of the following graph shows the variation of acceleration (a) with position (x)?




8. A car moving with a velocity of 20 ms-1 is stopped in a distance of 40 m. If the same car is travelling at double the velocity, the distance travelled by it for same retardation is[KCET-2017]

(1) 640 m (2) 320 m
(3) 1280 m (4) 160 m

9. A person throws balls into air vertically upward in regular intervals of time of one second. The next ball is thrown when the velocity of the ball thrown earlier becomes zero. The height to which the balls rise is …. (Assume,) (g = 10ms-2) [KCET-2012]

(1) 5m (2) 10m
(3) 7.5 m (4) 20 m

10. The velocity – time graph for two bodies A and B are shown. Then the acceleration of A and B are in the ratio



(1) $\tan 25^\circ$ to $\tan 40^\circ$ (2) $\tan 25^\circ$ to $\tan 50^\circ$
(3) $\sin 25^\circ$ to $\sin 50^\circ$ (4) $\cos 25^\circ$ to $\cos 50^\circ$

Answers

1. Answer (3)
Slope of the graph

2. Answer: (4)
Sol.: By the definition, the slope of displacement-time graph is velocity.
i.e.,

$$v = \tan\theta$$
$$\frac{v_1}{v_2} = \frac{\tan\theta_1}{\tan\theta_2}$$
$$\frac{v_1}{v_2} = \frac{\tan 30^\circ}{\tan 45^\circ}$$
$$\frac{v_1}{v_2} = \frac{1}{\sqrt{3}}$$

3. Answer (2)
Hint:Given, speed of car from A to B = 30 km h-1 = v1Speed of car from B to A = 20 km h-1 = v2

Average speed of car = $\frac{2s}{\frac{s}{}+\frac{s}{}} = \frac{2v_1v_2}{v_1+v_2} \frac{2\times30\times20}{30+20} = \frac{1200}{50} = 24$

Average speed of car = 24 kmph

4. Answer (3)
Hint:Initial velocity = 0 and acceleration is constant.
Distance travelled in first half of time = x1
Distance travelled in next half of time = x2
Now $x_1 = \frac{1}{2}at^2$ because initial velocity is zero.

$$\Rightarrow x_2 = at^2 + \frac{1}{2}at^2 \Rightarrow x_2 = 3\times\frac{1}{2}at^2$$

Thus,x2 = 3x

5. Answer: (4)

$$Sol : h = \frac{1}{2}(g+a)t^2$$
$$\Rightarrow t = \sqrt{\frac{2h}{(g+a)}} = \sqrt{\frac{2\times1.25}{5+10}} = \sqrt{\frac{2.5}{15}} = 0.4 sec$$

6. Answer (3)

7. Answer: (1)Hint: Given line have positive intercept but negative slope.
So its equation can be written as, v = mx + v0 .....(1)
where m = $\tan\theta = \frac{v_0}{x_0}$

By differentiating with respect to time we get, $\frac{dv}{dt} = -m\frac{dx}{dt} = -mv$

Now substituting the value of 'v' from equation (1) we get

$$\frac{dy}{dx} = -m[-mx + v_0] = m^2x - mv_0$$
$$a = m^2x - mv_0$$

i.e., the graph between a and x should have positive slope but negative intercept on acceleration axis. Hence option (A) is correct.

8. Answer: (4)
Sol:

$$Sol: u^2 = 2as \Rightarrow s \propto u^2$$
$$\therefore \frac{s_2}{40\ m} = \left(\frac{2\times20}{20}\right)^2 \qquad \therefore s_2 = 160\ m$$

9. Answer: (1)
Sol:- AB $\Delta t = 1s$ and velocity is zero. This time is time of ascent. $h = \frac{1}{2}gt^2 = 5m\left(g = 10ms^{-2}\right)$

10. Answer (2)
Hint :Acceleration $a = \frac{\Delta v}{\Delta t}$
So, acceleration of body A = aA = $\tan 25^\circ$
Line B makes an angle of 50° So its slope is equal to tan 50°

$$a_B : a_B = \tan 25^\circ : \tan 50^\circ$$

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 11

141. ವಿಶ್ವಸಂಸ್ಥೆ ಸಾಮಾನ್ಯ ಸಭೆ 2021-22ರ ಅಧ್ಯಕ್ಷರಾಗಿ ಆಯ್ಕೆಯಾದ ಅಬ್ದುಲ್ಲಾ ಶಾಹಿದ್ ಯಾವ ರಾಷ್ಟ್ರದವರು?
ಎ) ಬಾಂಗ್ಲಾದೇಶ ಬಿ) ಮಾರಿಷಸ್
ಸಿ) ಮಾಲ್ಡೀವ್ಸ್ ಡಿ) ಕತಾರ್

142. 'ಪ್ರಾಣವಾಯು' ವೆಂಟಿಲೇಟರ್ ಅಭಿವೃದ್ಧಿಪಡಿಸಿದ ಸಂಸ್ಥೆ ಯಾವುದು?
ಎ) ಇಸ್ರೋ
ಬಿ) ಐಡಿಟಿ ಖಾನಾಪುರ
ಸಿ) ಡಿಆರ್‌ಡಿಒ
ಡಿ) ಐಐಟಿ ಖರಗ್‌ಪುರ

143. ಶಬ್ದವನ್ನು ಅಳೆಯುವ ಮಾಪನಕ್ಕೆ ಏನೆಂದು ಕರೆಯುತ್ತಾರೆ?
ಎ) ಸೆಲ್ಸಿಯಸ್ ಬಿ) ಫ್ಯಾರನ್‌ಹೀಟ್
ಸಿ) ಡೆಸಿಬಲ್ ಡಿ) ಇದ್ಯಾವುದೂ ಅಲ್ಲ

144. ಈ ಕೆಳಗಿನವುಗಳಲ್ಲಿ ಯಾವುದು 'ಹಸಿರು ಮನೆ' ಪರಿಣಾಮಕ್ಕೆ ಕಾರಣವಾಗುವ ಅನಿಲ ಅಲ್ಲ?
ಎ) ಕಾರ್ಬನ್ ಡೈ ಆಕ್ಸೈಡ್
ಬಿ) ಮಿಥೇನ್
ಸಿ) ನೈಟ್ರೋಜನ್ ಆಕ್ಸೈಡ್
ಡಿ) ಆಮ್ಲಜನಕ

145. ಅತಿ ಹೆಚ್ಚು ಕಾಲ ಬದುಕಬಲ್ಲ ಪ್ರಾಣಿ ಯಾವುದು?
ಎ) ಆಮೆ
ಬಿ) ಪಾಂಡಾ
ಸಿ) ಕಾಂಗರೂ
ಡಿ) ಆನೆ

146. ಹೊಂದಿಸಿ ಬರೆಯಿರಿ:

ಎ) ಅಲ್ಯೂಮಿನಿಯಂ	1) ಬಳ್ಳಾರಿ
ಬಿ) ಕಬ್ಬಿಣ	2) ಹಾಸನ
ಸಿ) ಚಿನ್ನ	3) ಬೆಳಗಾವಿ
ಡಿ) ಕ್ರೋಮಿಯಂ	4) ರಾಯಚೂರು

ಎ) ಎ-1, ಬಿ-2, ಸಿ-3, ಡಿ-4
ಬಿ) ಎ-2, ಬಿ-4, ಸಿ-1, ಡಿ-3
ಸಿ) ಎ-4, ಬಿ-3, ಸಿ-2, ಡಿ-1
ಡಿ) ಎ-3, ಬಿ-1, ಸಿ-4, ಡಿ-2

147. ಪಿಟ್ಯೂಟರಿ ಗ್ರಂಥಿ ಮಾನವ ದೇಹದ ಯಾವ ಭಾಗದಲ್ಲಿ ಇರುತ್ತದೆ?
ಎ) ತಲೆ
ಬಿ) ಗಂಟಲು
ಸಿ) ಹೊಟ್ಟೆ
ಡಿ) ಪಿತ್ತಕೋಶ

148. ಜೀವ ವಿಕಾಸ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎಂಬುದಕ್ಕೆ ಅತ್ಯಂತ ಸಮ್ಮತ ವಿವರಣೆ ನೀಡಿದ ವಿಜ್ಞಾನಿ ಯಾರು?
ಎ) ಜೇಮ್ಸ್ ವಾಟ್ಸನ್
ಬಿ) ಫ್ರಾನ್ಸಿಸ್ ಕ್ರಿಕ್
ಸಿ) ಚಾರ್ಲ್ಸ್ ಡಾರ್ವಿನ್
ಡಿ) ಅಲ್ಬರ್ಟ್ ಐನ್‌ಸ್ಟೈನ್

149. ಭಾರತೀಯ ರಿಸರ್ವ್ ಬ್ಯಾಂಕಿನ ಈಗಿನ ಗವರ್ನರ್ ಯಾರು?
ಎ) ಡಿ.ಸುಬ್ಬಾರಾವ್
ಬಿ) ರಘುರಾಮ್ ಜಿ.ರಾಜನ್
ಸಿ) ಶಕ್ತಿಕಾಂತ್ ದಾಸ್
ಡಿ) ಉರ್ಜಿತ್ ಪಟೇಲ್

150. ಭಾರತದ ಸರ್ವೋಚ್ಚ ನ್ಯಾಯಾಲಯದ ಇಂದಿನ ಮುಖ್ಯ ನ್ಯಾಯಮೂರ್ತಿ ಯಾರು?
ಎ) ದೀಪಕ್ ಮಿಶ್ರಾ
ಬಿ) ಎಸ್.ಎ. ಬೋಬಡೆ
ಸಿ) ಆನಂದ ಭೈರಾ ರೆಡ್ಡಿ
ಡಿ) ಎನ್.ವಿ. ರಮಣ

151. ಭಾರತ ಸರ್ಕಾರದ ಇಂದಿನ ಹಣಕಾಸು ಸಚಿವರು ಯಾರು?
ಎ) ಸದಾನಂದ ಗೌಡ
ಬಿ) ನಿರ್ಮಲಾ ಸೀತಾರಾಮನ್
ಸಿ) ರಾಜನಾಥ್ ಸಿಂಗ್
ಡಿ) ನಿತಿನ್ ಗಡ್ಕರಿ

152. ಶ್ರವಣಬೆಳಗೊಳದಲ್ಲಿರುವ ಬಾಹುಬಲಿ (ಗೊಮ್ಮಟೇಶ್ವರ) ಮೂರ್ತಿಯನ್ನು ಸ್ಥಾಪಿಸಿದವರು ಯಾರು?
ಎ) ಚಾವುಂಡರಾಯ
ಬಿ) ವಿಷ್ಣುವರ್ಧನ
ಸಿ) ನಾಟ್ಯರಾಣಿ ಶಾಂತಲೆ
ಡಿ) ಇಮ್ಮಡಿ ಪುಲಿಕೇಶಿ

153. ದ.ರಾ.ಬೇಂದ್ರೆಯವರ ಯಾವ ಕೃತಿಗೆ 'ಜ್ಞಾನಪೀಠ ಪ್ರಶಸ್ತಿ' ಲಭಿಸಿದೆ?
ಎ) ನಾಲ್ಕೈದು ತಂತಿ
ಬಿ) ನಾಕುತಂತಿ
ಸಿ) ಮೂರುತಂತಿ
ಡಿ) ವೀಣೆ ತಂತಿ

154. 'ಕಡಲ ತೀರದ ಭಾರ್ಗವ' ಎಂದು ಹೆಸರಾದವರು ಯಾರು?
ಎ) ಅಂಬಿಕಾತನಯದತ್ತ
ಬಿ) ಶಿವರಾಮ ಕಾರಂತ
ಸಿ) ಮಾಸ್ತಿ ವೆಂಕಟೇಶ ಅಯ್ಯಂಗಾರ್
ಡಿ) ಚೆನ್ನವೀರ ಕಣವಿ

155. ಈ ಬಾರಿಯ ವಿಶ್ವಕಪ್ ಟೆಸ್ಟ್ ಕ್ರಿಕೆಟ್ ಫೈನಲ್‌ನ ಸ್ಥಳ ಯಾವುದು?
ಎ) ಅಬುದಾಬಿ
ಬಿ) ಹರಾರೆ
ಸಿ) ಲಾರ್ಡ್ಸ್
ಡಿ) ಸೌಥಾಂಪ್ಟನ್


(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ- 10ರ ಉತ್ತರ

126. ಡಿ, 127. ಸಿ, 128. ಎ, 129. ಬಿ, 130. ಎ, 131. ಡಿ, 132. ಸಿ, 133. ಡಿ, 134. ಎ, 135. ಸಿ, 136. ಡಿ, 137. ಬಿ, 138. ಸಿ, 139. ಸಿ, 140. ಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಪ್ರತಿಯೊಬ್ಬರೂ ಪ್ರತಿಭಾವಂತರೆ. ಆದರೆ, ಮರ ಏರುವ ಸಾಮರ್ಥ್ಯವನ್ನು ಆಧರಿಸಿ ಮೀನೊಂದರ ಬಗ್ಗೆ ನೀವು ನಿರ್ಣಯಕ್ಕೆ ಬಂದರೆ, ತಾನು ಮೂರ್ಖ ಎಂಬ ನಂಬಿಕೆಯಿಂದಲೇ ಅದು ಜೀವನಪೂರ್ತಿ ಬದುಕುತ್ತದೆ.

-ಆಲ್ಬರ್ಟ್ ಐನ್‌ಸ್ಟೀನ್

ಶಾಲಾ ಮಕ್ಕಳ ನಿರಂತರ ಕಲಿಕೆ ಸರ್ಕಾರದ ಮುಂದೆ ಗುರುತರ ಸವಾಲು

ಕೊರೊನಾದ ಮೂರನೇ ಅಲೆಯು ಮಕ್ಕಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಾಧಿಸುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟಿರುವ ಡಾ. ದೇವಿಪ್ರಸಾದ್ ಶೆಟ್ಟಿ ನೇತೃತ್ವದ ತಜ್ಞರ ಸಮಿತಿಯು ಶಾಲೆಗಳನ್ನು ಹಂತ ಹಂತವಾಗಿ ಆರಂಭಿಸುವಂತೆಯೂ ಸರ್ಕಾರಕ್ಕೆ ಸಲಹೆ ನೀಡಿದೆ. ಕೊರೊನಾ ಸಾಂಕ್ರಾಮಿಕದ ದಿನಗಳಲ್ಲಿ ಆರೋಗ್ಯ ಮತ್ತು ಶಿಕ್ಷಣದ ಎರಡು ದೋಣಿಗಳ ಪಯಣವು ಮಕ್ಕಳ ಪಾಲಿಗೆ ಅನಿವಾರ್ಯ ಎನ್ನುವುದನ್ನು ತಜ್ಞರ ವರದಿ ಹೇಳುತ್ತಿರುವಂತಿದೆ. ರಾಜ್ಯದ ಶೇಕಡ 30ರಷ್ಟು ಮಕ್ಕಳು ಕೊರೊನಾ ಕಾರಣದಿಂದಾಗಿ ಕಲಿಕೆಯಿಂದ ವಂಚಿತರಾಗಿದ್ದಾರೆ ಎನ್ನುವ ಸಂಗತಿಯು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯದ (ಡಿಎಸ್‌ಇಆರ್‌ಟಿ) ಸಮೀಕ್ಷೆಯಲ್ಲಿ ಹೊರಬಿದ್ದಿರುವುದನ್ನು ಗಂಭೀರವಾಗಿ ಪರಿಗಣಿಸಿ, ಮಕ್ಕಳ ನಿರಂತರ ಕಲಿಕೆಗೆ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಸರ್ಕಾರ ಕೈಗೊಳ್ಳಬೇಕಾಗಿದೆ. ಕೋವಿಡ್ ಸಂದರ್ಭದಲ್ಲಿ ಮಕ್ಕಳ ಚಟುವಟಿಕೆಗಳು ಹಾಗೂ ಅವರು ಪಡೆದುಕೊಂಡಿರಬಹುದಾದ ಕೌಶಲಗಳನ್ನು ತಿಳಿಯುವ ಉದ್ದೇಶದಿಂದ ಡಿಎಸ್‌ಇಆರ್‌ಟಿ ನಡೆಸಿದ ಸಮೀಕ್ಷೆಯು ಆನ್‌ಲೈನ್ ಶಿಕ್ಷಣ ವ್ಯವಸ್ಥೆಯ ಮಿತಿಯನ್ನು ಸ್ಪಷ್ಟಪಡಿಸುವಂತಿದೆ. ಮೊಬೈಲ್ ಫೋನ್ ಹೊಂದುವುದು ಎಲ್ಲ ವಿದ್ಯಾರ್ಥಿಗಳಿಗೆ ಸಾಧ್ಯವಾಗದಿರುವುದು ಹಾಗೂ ದುರ್ಬಲ ನೆಟ್‌ವರ್ಕ್‌ನಿಂದಾಗಿ ಗ್ರಾಮೀಣ ಭಾಗದ ಎಲ್ಲ ಮಕ್ಕಳನ್ನೂ ತಲುಪುವುದು ಆನ್‌ಲೈನ್ ಶಿಕ್ಷಣದಿಂದ ಸಾಧ್ಯವಿಲ್ಲ. ಆ ಕೊರತೆಯನ್ನು ತುಂಬುವುದಕ್ಕಾಗಿ, ಒಂದರಿಂದ ಹತ್ತನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ 'ಚಂದನ' ವಾಹಿನಿಯ ಮೂಲಕ ಜುಲೈ 15ರಿಂದ ವಿಡಿಯೊ ಪಾಠಗಳನ್ನು ಪ್ರಸಾರ ಮಾಡಲು ಸರ್ಕಾರ ಉದ್ದೇಶಿಸಿದೆ. ಕನ್ನಡ, ಇಂಗ್ಲಿಷ್ ಮತ್ತು ಉರ್ದು ಮಾಧ್ಯಮಗಳಲ್ಲಿ ಈ ಪಾಠಗಳು ಪ್ರಸಾರಗೊಳ್ಳಲಿವೆ. ಮರಾಠಿ ಮಾಧ್ಯಮದ ಪಾಠಗಳು ಯುಟ್ಯೂಬ್‌ನಲ್ಲಿ ದೊರೆಯಲಿವೆ. ಟಿ.ವಿ. ಮೂಲಕ ಬೋಧಿಸುವ ಪ್ರಯತ್ನದೊಂದಿಗೆ ಮಕ್ಕಳನ್ನು ತಲುಪಲು ಸಾಧ್ಯವಿರುವ ಎಲ್ಲ ಮಾರ್ಗಗಳನ್ನೂ ಸರ್ಕಾರ ಬಳಸಿಕೊಳ್ಳಬೇಕು. ಈ ದಿಸೆಯಲ್ಲಿ ಶಿಕ್ಷಕರನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದರ ಜೊತೆಗೆ, ಮಕ್ಕಳ ಹಿತಾಸಕ್ತಿಗಾಗಿ ದುಡಿಯುತ್ತಿರುವ ಸ್ವಯಂಸೇವಾ ಸಂಸ್ಥೆಗಳು ಹಾಗೂ ತಜ್ಞರ ನೆರವನ್ನು ಪಡೆಯಬಹುದು.



ಒಂದರಿಂದ 10ನೇ ತರಗತಿಯವರೆಗಿನ ಶಾಲೆಗಳು ಸದ್ಯಕ್ಕೆ ಆರಂಭವಾಗುವ ಸೂಚನೆ ಇಲ್ಲ. ಆದರೆ, ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ಎಲ್ಲ ಪದವಿ ತರಗತಿಗಳ ವಿದ್ಯಾರ್ಥಿಗಳು ಮತ್ತು ಬೋಧಕ-ಬೋಧಕೇತರ ಸಿಬ್ಬಂದಿಗೆ ಲಸಿಕೆ ನೀಡಿದ ನಂತರ ಆರಂಭಿಸುವಂತೆ ತಜ್ಞರ ಸಮಿತಿಯು ಶಿಫಾರಸು ಮಾಡಿದೆ. ನಂತರದ ಹಂತದಲ್ಲಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಭೌತಿಕ ತರಗತಿಗಳನ್ನು ನಡೆಸಲು ಅವಕಾಶ ಕಲ್ಪಿಸಬಹುದು. ಕೊರೊನಾ ಕಾರಣದಿಂದಾಗಿ ಕಳೆದ ಶೈಕ್ಷಣಿಕ ವರ್ಷದಲ್ಲಿ ಮಕ್ಕಳು ಮನೆಯಲ್ಲಿಯೇ ಉಳಿಯುವಂತಾಯಿತು. ಜುಲೈ 15ರಿಂದ ಆರಂಭವಾಗಲಿರುವ ನೂತನ ಶೈಕ್ಷಣಿಕ ವರ್ಷದಲ್ಲೂ ಶಾಲೆಗಳು ಯಾವಾಗ ಆರಂಭವಾಗಲಿವೆ ಎನ್ನುವುದು ಅಸ್ಪಷ್ಟವಾಗಿದೆ. ಇಂತಹ ಸಂದಿಗ್ಧ ಸನ್ನಿವೇಶದಲ್ಲಿ ಈ ವರ್ಷವೂ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳುವ ಸವಾಲು ಸರ್ಕಾರದ ಮೇಲಿದೆ. ಕೊರೊನಾ ಸಂದರ್ಭದಲ್ಲಿ ಅನೇಕ ಮಕ್ಕಳು ಶಾಲೆಗಳಿಂದ ಹೊರಬಿದ್ದು, ಪೋಷಕರ ನೆರವಾಗಲು ಹೊಲಗಳಲ್ಲಿ ದುಡಿಯುತ್ತಿದ್ದಾರೆ. ಕೆಲವರು ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಬಾಲ್ಯವಿವಾಹದ ಘಟನೆಗಳೂ ನಡೆದಿವೆ. ಅಂಥ ಮಕ್ಕಳನ್ನು ಗುರುತಿಸುವುದು ಹಾಗೂ ಅವರನ್ನು ಶೈಕ್ಷಣಿಕ ಚೌಕಟ್ಟಿಗೆ ಮರಳಿ ಕರೆತರುವ ಗುರುತರ ಸವಾಲು ಶಿಕ್ಷಣ ಇಲಾಖೆಯ ಮುಂದಿದೆ.

ಅಸ್ತವ್ಯಸ್ತಗೊಂಡಿರುವ ಶಿಕ್ಷಣ ವ್ಯವಸ್ಥೆಯನ್ನು ಮರಳಿ ಹಳಿಗೆ ತರುವ ಸವಾಲನ್ನು ಸರ್ಕಾರ ಹಾಗೂ ಸಮಾಜ ಗಂಭೀರವಾಗಿ ಪರಿಗಣಿಸಬೇಕು

ಮಕ್ಕಳು ಕಲಿಕೆಯಲ್ಲಿ ನಿರಂತರವಾಗಿ ತೊಡಗಿಕೊಳ್ಳಲು ಸಾಧ್ಯವಾಗುವಂತೆ ಶಿಕ್ಷಕರು ಕ್ರಿಯಾಶೀಲರಾಗಬೇಕು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದ್ದಾರೆ. ಆದರೆ, ಮಕ್ಕಳಿಗೆ ಕಲಿಸುವ ಹೊಣೆಯನ್ನು ಹೊರಲು ಶಿಕ್ಷಕರ ಭುಜಗಳು ಎಷ್ಟು ವಿಶಾಲವಾಗಿವೆ ಹಾಗೂ ಅವರ ಮನಸ್ಸು ಎಷ್ಟು ಮುಕ್ತವಾಗಿದೆ ಎನ್ನುವುದನ್ನೂ ಸರ್ಕಾರ ಯೋಚಿಸಬೇಕು. ಕೋವಿಡ್ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಅನೇಕ ಶಿಕ್ಷಕರು ಇನ್ನೂ ಶಾಲೆಗಳಿಗೆ ಮರಳಿಲ್ಲ. ಕೊರೊನಾದ ಮೂರನೇ ಅಲೆ ಯಾವಾಗ ಎದುರಾಗುತ್ತದೆ ಎನ್ನುವುದೂ ಸ್ಪಷ್ಟವಿಲ್ಲವಾದುದರಿಂದ, ಶಾಲೆಗಳಿಗೆ ಮರಳಿದ ನಂತರವೂ ಶಿಕ್ಷಕರಿಗೆ ಕೋವಿಡ್ ಕರ್ತವ್ಯದ ಕರೆ ಯಾವಾಗ ಬೇಕಾದರೂ ಬರಬಹುದು. ಹಾಗಾಗಿ ಅವರ ಪೂರ್ಣ ಸಾಮರ್ಥ್ಯ ಮಕ್ಕಳ ಕಲಿಕೆಗೆ ಉಪಯೋಗವಾಗುತ್ತದೆಂದು ಸದ್ಯದ ಪರಿಸ್ಥಿತಿಯಲ್ಲಿ ನಿರೀಕ್ಷಿಸಲಾಗದು. ಶಾಲೆ ಮತ್ತು ಕೋವಿಡ್ ಕರ್ತವ್ಯದ ನಡುವೆ ಕಳೆದ ಒಂದೂವರೆ ವರ್ಷದಿಂದ ಶಿಕ್ಷಕರು ಹೈರಾಣಾಗಿದ್ದಾರೆ. ಚುನಾವಣೆ ಮತ್ತು ಕೋವಿಡ್ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಕೆಲವು ಶಿಕ್ಷಕರು ಕೊರೊನಾ ಸೋಂಕಿನಿಂದ ಜೀವ ಕಳೆದುಕೊಂಡಿದ್ದಾರೆ. ಖಾಸಗಿ ಶಾಲೆಗಳ ಶಿಕ್ಷಕರಂತೂ ಜೀವನೋಪಾಯಕ್ಕಾಗಿ ಹೋರಾಟ ನಡೆಸುವಂತಾಗಿದೆ. ಕೊರೊನಾ ಸಾಂಕ್ರಾಮಿಕದ ಕಾರಣದಿಂದಾಗಿ ವೈದ್ಯಕೀಯ ಕ್ಷೇತ್ರದ ಮೇಲೆ ಉಂಟಾದ ಅತೀವ ಒತ್ತಡದ ಬಗ್ಗೆ ಸರ್ಕಾರ ಮತ್ತು ಸಮಾಜ ಕಾಳಜಿ ವ್ಯಕ್ತಪಡಿಸುವುದು ಸರಿಯಾಗಿದೆ. ಆ ಕಾಳಜಿ ಶಿಕ್ಷಕರ ಕುರಿತೂ ವ್ಯಕ್ತವಾಗಬೇಕು. ಅವರ ಸಮಯ ಮತ್ತು ಕೌಶಲ ವಿದ್ಯಾರ್ಥಿಗಳಿಗೆ ಪೂರ್ಣ ಪ್ರಮಾಣದಲ್ಲಿ ದೊರೆಯುವಂತೆ ನೋಡಿಕೊಳ್ಳಬೇಕು. ಮಕ್ಕಳು ಕಲಿಕೆಯಿಂದ ದೂರವಾಗದಂತೆ ನೋಡಿಕೊಳ್ಳುವುದು ಅಗತ್ಯವಾದಷ್ಟೇ, ಶಿಕ್ಷಕರು ಬೋಧನೆಯಿಂದ ದೂರವಾಗದಿರುವುದೂ ಮುಖ್ಯ. ಶಿಕ್ಷಕರಲ್ಲಿ ಆತ್ಮವಿಶ್ವಾಸ ಮೂಡಿಸುವ ಮತ್ತು ಅಸ್ತವ್ಯಸ್ತಗೊಂಡಿರುವ ಶಿಕ್ಷಣ ವ್ಯವಸ್ಥೆಯನ್ನು ಮರಳಿ ಹಳಿಗೆ ತರುವ ಸವಾಲನ್ನು ಸರ್ಕಾರ ಹಾಗೂ ಸಮಾಜ ಗಂಭೀರವಾಗಿ ಪರಿಗಣಿಸಬೇಕು.

ದಿನದ ಟ್ವೀಟ್

ಎಚ್ಚರಿಸುವ ಅಂಕಿಅಂಶ



ನಾವು ಈಗ ಎಷ್ಟು ಜನರಿಗೆ ಲಸಿಕೆ ಹಾಕುತ್ತೇವೆ ಎಂಬುದರ ಬಗ್ಗೆ ಮಾತ್ರ ಗಮನ ಕೇಂದ್ರೀಕರಿಸಬೇಕಾಗಿದೆ.
ಲಸಿಕೆ ನೀಡಿಕೆ ಆರಂಭವಾದ ದಿನ: ಜನವರಿ 16
ಗುರಿ: 180 ಕೋಟಿ ಡೋಸ್
ನೀಡಿರುವುದು: 28.83 ಕೋಟಿ ಡೋಸ್
ಗುರಿ: 90 ಕೋಟಿ ಜನರು
ನೀಡಿರುವುದು: 5.11 ಕೋಟಿ ಜನರಿಗೆ
ಪ್ರತಿದಿನ ನಾವು 80 ಲಕ್ಷ ಜನರಿಗೆ ಲಸಿಕೆ ನೀಡಲು ಸಾಧ್ಯವಾದರೆ ಚೆನ್ನಾಗಿರುತ್ತದೆ.

ಮೇನಕಾ ದೋಶಿ, ಪತ್ರಕರ್ತೆ

50 ವರ್ಷಗಳ ಹಿಂದೆ

ಬುಧವಾರ, 23-6-1971

- **ನಿಷೇಧಾಜ್ಞೆ ಉಲ್ಲಂಘಿಸಿ ಪಾಕಿಸ್ತಾನಕ್ಕೆ ಎರಡು ಹಡಗು ಭರ್ತಿ ಅಮೆರಿಕ ಶಸ್ತ್ರಾಸ್ತ್ರ**

ನ್ಯೂಯಾರ್ಕ್, ಜೂನ್ 22– ಅಮೆರಿಕನ್ ಮಿಲಿಟರಿ ಉಪಕರಣಗಳನ್ನು ಹೊತ್ತ ಪಾಕಿಸ್ತಾನಿ ಹಡಗು 'ಸುಂದರಬನ' ಮೇ 8ರಿಂದ ನ್ಯೂಯಾರ್ಕ್ ಬಿಟ್ಟಿದ್ದು, ನಾಳೆ ಕರಾಚಿ ತಲುಪಲಿದೆಯೆಂದು 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ಇಂದು ವರದಿ ಮಾಡಿದೆ.

ಎಂಟು ವಿಮಾನಗಳು, ಪ್ಯಾರಾಶೂಟ್‌ಗಳು, ಸಹಸ್ರಾರು ಟನ್‌ಗಳಷ್ಟು ವಿಮಾನ ಹಾಗೂ ಟ್ರಕ್‌ಗಳ ಬಿಡಿಭಾಗಗಳನ್ನು ಹೊತ್ತ ಇನ್ನೊಂದು ಪಾಕಿಸ್ತಾನಿ ಹಡಗು 'ಪದ್ಮಾ' ಸದ್ಯದಲ್ಲೇ ನ್ಯೂಯಾರ್ಕ್ ಬಿಡಲಿದ್ದು, ಆಗಸ್ಟ್ ಮಧ್ಯದ ಹೊತ್ತಿಗೆ ಕರಾಚಿಯನ್ನು ಸೇರಲಿದೆಯೆಂದೂ ಪತ್ರಿಕೆ ಹೇಳಿದೆ.

ಮಾರ್ಚ್ 25ರಂದು ಬಾಂಗ್ಲಾ ದೇಶ ಚಳವಳಿಯನ್ನು ಹತ್ತಿಕ್ಕಲು ಮಿಲಿಟರಿ ಕಾರ್ಯಾಚರಣೆ ಆರಂಭಿಸಿದ ಕೂಡಲೆ ಪಾಕಿಸ್ತಾನಕ್ಕೆ ಮಿಲಿಟರಿ ಉಪಕರಣ ರವಾನೆ ವಿರುದ್ಧ ಸ್ಟೇಟ್ ಇಲಾಖೆ ಹಾಕಿದ್ದ ಪ್ರತಿ-ಬಂಧಕವನ್ನು ಈ ರಫ್ತುಗಳು ಉಲ್ಲಂಘಿಸಿವೆಯೆಂದು 'ನ್ಯೂಯಾರ್ಕ್ ಟೈಮ್ಸ್' ಆಪಾದಿಸಿದೆ.

- **ಏನೂ ಇಲ್ಲದ ಸಂಸ್ಥೆಗೆ ಸಂಶೋಧನೆ ನೆರವು!**

ನವದೆಹಲಿ, ಜೂನ್ 22– ಕೇಂದ್ರ ಶಿಕ್ಷಣ ಸಚಿವ ಶಾಖೆ 1967–68ರಲ್ಲಿ ನವದೆಹಲಿಯ ಸಂಸ್ಥೆಯೊಂದಕ್ಕೆ ಭಾಷಾಂತರ ಕಾರ್ಯನಿರ್ವಹಿಸಲು ಅನುಮತಿ ನೀಡಿತು. ಈ ಸಂಸ್ಥೆಯ ಹೆಸರು: ಪುರಾತನ ವಿಜ್ಞಾನ ಸಂಶೋಧನಾ ಸಂಸ್ಥೆ. ಸಚಿವ ಶಾಖೆ ಐದು ಪುಸ್ತಕಗಳ ಭಾಷಾಂತರಕ್ಕಾಗಿ ಈ ಸಂಸ್ಥೆಗೆ 33 ಸಾವಿರ ರೂಪಾಯಿ ನೀಡಿತು.

ಇತ್ತೀಚೆಗೆ ತನಿಖೆ ನಡೆಸಿದಾಗ ಈ ಸಂಸ್ಥೆಯಲ್ಲಿ ಸಿಬ್ಬಂದಿಯೇ ಕಾಣಬರಲಿಲ್ಲ. ಈ ಸಂಸ್ಥೆ ಜೊತೆ ಯಾವುದೇ ರೀತಿಯ ವ್ಯವಹಾರವಿಟ್ಟುಕೊಳ್ಳಬಾರದೆಂದು ಸರ್ಕಾರ ತೀರ್ಮಾನಿಸಿದೆ.

- **ಮಂಗಳೂರು ಗೊಬ್ಬರ ಕಾರ್ಖಾನೆ ಸ್ಥಾಪನೆಗೆ ವಿದೇಶಿ ಸಂಸ್ಥೆ ಸಹಕಾರ ಅಪೇಕ್ಷೆ ಬಗ್ಗೆ ಶಂಕೆ**

ಬೆಂಗಳೂರು, ಜೂನ್ 22– ಮಂಗಳೂರಿನಲ್ಲಿ ರಾಸಾಯನಿಕ ಗೊಬ್ಬರ ಕಾರ್ಖಾನೆಯನ್ನು ಸ್ಥಾಪಿಸಲು ವಿದೇಶಿ ಸಂಸ್ಥೆಯೊಂದರ ಸಹಕಾರವನ್ನು ಪಡೆಯುವುದರ ಔಚಿತ್ಯವನ್ನು ವಿಧಾನ ಪರಿಷತ್ ಸದಸ್ಯ ಶ್ರೀ ಜಿ.ಎಸ್. ಉಳ್ಳಾಲ್ ಅವರು ಪ್ರಶ್ನಿಸಿದ್ದಾರೆ.

ಗೊಬ್ಬರ ತಯಾರಿಕೆಯಲ್ಲಿ ಫರ್ಟಿಲೈಸರ್ ಕಾರ್ಪೊರೇಷನ್ ಆಫ್ ಇಂಡಿಯಾ, ಫ್ಯಾಕ್ಟ್ ಮುಂತಾದ ಸಂಸ್ಥೆಗಳ ಅಥವಾ ಇತರ ದೇಶೀಯ ತಜ್ಞರ ನೆರವು ಸುಲಭದಲ್ಲಿ ದೊರೆಯುವ ಸಾಧ್ಯತೆ ಇರುವಾಗ ವಿದೇಶಿ ಸಂಸ್ಥೆಗಳ ಆಶ್ರಯವನ್ನು ಪಡೆಯುವುದು ದೇಶದ ಹಿತದೃಷ್ಟಿಯಿಂದ ಸರಿಯಲ್ಲ ಎಂದು ಅವರು ಪ್ರಕಟಣೆಯೊಂದರಲ್ಲಿ ಹೇಳಿದ್ದಾರೆ.

ಒಲಿಂಪಿಕ್ಸ್‌ನಲ್ಲಿ ಈ ಪದಕ ಜಯಿಸುವ ಭಾರತೀಯರ ದಶಕಗಳ ಕನಸು ಟೋಕಿಯೊದಲ್ಲಿ ನನಸಾಗುವುದೇ?

ಅಥ್ಲೆಟಿಕ್ಸ್ ಪದಕವೆಂಬ ಮಾಯಾಜಿಂಕೆ



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಸರಿಯಾಗಿ ಇನ್ನೊಂದು ತಿಂಗಳು ಕಳೆದರೆ ಜಪಾನಿನ ಟೋಕಿಯೊದಲ್ಲಿ ಒಲಿಂಪಿಕ್ ಕೂಟದ ಕ್ರೀಡಾಜ್ಯೋತಿ ಪ್ರಜ್ವಲಿಸಲಿದೆ. ಕೊರೊನಾ ವೈರಾಣುವಿಗೆ ಸಡ್ಡು ಹೊಡೆಯುತ್ತಾ ಬ್ರಹ್ಮಾಂಡದ ಅತಿದೊಡ್ಡ ಕ್ರೀಡಾಮೇಳ ಗರಿಗೆದರಲಿದೆ. ನೂರಾರು ಕ್ರೀಡಾಪಟುಗಳ ಸಾಧನೆಗಳು, ಕೋವಿಡ್ ಸಾಂಕ್ರಾಮಿಕದಿಂದ ನೋವುಂಡ ಮನುಕುಲಕ್ಕೆ ಹೊಸ ಉತ್ಸಾಹ ತುಂಬುವ ನಿರೀಕ್ಷೆ ಇದೆ.

ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗದಲ್ಲಿ ಪದಕ ಗಳಿಕೆಯ ಕನಸನ್ನು ಹಲವು ದಶಕಗಳಿಂದ ಭಾರತೀಯ ಕ್ರೀಡಾ-ಪ್ರೇಮಿಗಳೂ ತಮ್ಮ ಎದೆಯಲ್ಲಿ ಕಾಪಿಟ್ಟುಕೊಂಡಿದ್ದಾರೆ. ಈ ಬಾರಿಯಾದರೂ ಅದು ಈಡೇರಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆ. ಜಾವೆಲಿನ್ ಥ್ರೋ ಪಟು ನೀರಜ್ ಚೋಪ್ರಾ ಅವರ ಮೇಲೆ ಎಲ್ಲರ ಭರವಸೆ ಕೇಂದ್ರೀಕೃತ-ವಾಗಿದೆ. ಏಕೆಂದರೆ ಅವರು ಹೋದ ವರ್ಷ ಅರ್ಹತಾ ಸುತ್ತಿನಲ್ಲಿ 87.86 ಮೀಟರ್ಸ್ ಜಾವೆಲಿನ್ ಎಸೆದಿದ್ದಾರೆ. ರಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದ ದಾಖಲೆಗೆ ಸಮೀಪ ಇದ್ದಾರೆ. ಆದ್ದರಿಂದಲೇ ನೀರಜ್ ಮೇಲೆ ಭರವಸೆ ಇಟ್ಟುಕೊಳ್ಳಲಾಗಿದೆ.

ಅದೇನೆ ಇರಲಿ, ಅಥ್ಲೆಟಿಕ್ಸ್‌ನಲ್ಲಿ ಅವರು ಯಾವುದೇ ಪದಕ ಜಯಿಸಿದರೂ ಅದು ಭಾರತಕ್ಕೆ ಪ್ರಥಮ ಮಹಾಸಾಧನೆಯೇ ಆಗಲಿದೆ. ಹಾಕಿ, ಕುಸ್ತಿ, ಬಾಕ್ಸಿಂಗ್, ಬ್ಯಾಡ್ಮಿಂಟನ್, ಟೆನಿಸ್ ಮತ್ತು ಶೂಟಿಂಗ್ ಕ್ರೀಡೆಗಳಲ್ಲಿ ಭಾರತೀಯರು ಈಗಾಗಲೇ ಒಲಿಂಪಿಕ್ಸ್ ಪದಕಗಳನ್ನು ಗೆದ್ದಿದ್ದಾರೆ. ಆದರೆ, ಕ್ರೀಡೆಗಳ ತಾಯಿ ಎಂದೇ ಪರಿ-ಗಣಿತವಾಗಿರುವ ಅಥ್ಲೆಟಿಕ್ಸ್, ಒಲಿಂಪಿಕ್ ಕೂಟದ ಮುಕುಟಮಣಿ ಇದ್ದಂತೆ. ಓಟ, ಜಿಗಿತ ಮತ್ತು ಎಸೆತಗಳ ವಿವಿಧ ವಿಭಾಗಗಳ ಸ್ಪರ್ಧೆಗಳಲ್ಲಿ ದೇಹಬಲ ಮತ್ತು ಬುದ್ಧಿಬಲ ಮೆರೆಯುವವನೇ ಶ್ರೇಷ್ಠ ಎಂಬ ಪ್ರತಿಷ್ಠೆ ಗ್ರೀಕರ ಕಾಲದಿಂದಲೂ ಇರುವಂತಹದ್ದು.

ಅದರಲ್ಲೂ 100 ಮೀಟರ್ ಓಟದಲ್ಲಿ ಚಿನ್ನದ ಪದಕ ಗೆದ್ದವರು 'ವೇಗದ ರಾಜ ಮತ್ತು ರಾಣಿ' ಎಂಬ ಶ್ರೇಯಕ್ಕೆ ಪಾತ್ರರಾಗುತ್ತಾರೆ. ಜಮೈಕಾದಂತಹ ಪುಟ್ಟ ದೇಶದಿಂದ ಉಸೇನ್ ಬೋಲ್ಟ್ ಅವರಂತಹ ಸಿಡಿಲಮರಿ ಒಲಿಂಪಿಕ್ಸ್ ಟ್ರ್ಯಾಕ್‌ನ ಅನಭಿಷಿಕ್ತ ದೊರೆಯಾಗಿ ಮೆರೆದ ಕಥೆ ಜಗಕ್ಕೆಲ್ಲಾ ಗೊತ್ತಿದೆ. ದೀರ್ಘ ಅಂತರದ ಓಟಗಳಲ್ಲಿ ಇಥಿಯೋಪಿಯಾ, ಕೆನ್ಯಾದಂತಹ ಆಫ್ರಿಕಾದ ಹಿಂದುಳಿದ ರಾಷ್ಟ್ರಗಳ ಅಥ್ಲೀಟ್‌ಗಳ ಕಾಲುಗಳ ಶಕ್ತಿಯನ್ನು ನೋಡಿದ್ದೇವೆ. ಅದರ ಬೆನ್ನಲ್ಲೇ 100 ಕೋಟಿಗೂ ಹೆಚ್ಚು ಜನಸಂಖ್ಯೆಯಿರುವ ಭಾರತದ ಕ್ರೀಡಾಪಟುಗಳಿಂದ ಈ ಸಾಧನೆ ಏಕೆ ಸಾಧ್ಯವಾಗುತ್ತಿಲ್ಲ ಎಂಬ ವ್ಯಂಗ್ಯಭರಿತ ಪ್ರಶ್ನೆ ಪ್ರತೀ ಒಲಿಂಪಿಕ್ಸ್ ವೇಳೆ ಕೇಳಿಬರುತ್ತದೆ.

'ಫ್ಲೈಯಿಂಗ್ ಸಿಖ್' ಖ್ಯಾತಿಯ ದಿಗ್ಗಜ ಅಥ್ಲೀಟ್ ಮಿಲ್ಖಾ ಸಿಂಗ್ ಈಚೆಗೆ ನಿಧನರಾದಾಗಲೂ ಇಂತಹದ್ದೊಂದು ಚರ್ಚೆ ನಡೆಯಿತು. ಭಾರತೀಯರಿಗೆ ಅಥ್ಲೆಟಿಕ್ಸ್ ಪದಕ ಜಯಿಸಲು ಏಕೆ ಸಾಧ್ಯವಾಗುತ್ತಿಲ್ಲ ಎಂಬ ಪ್ರಶ್ನೆ ಸುಳಿದಾಡಿತು. ಅದಕ್ಕೆ ಕಾರಣ 1960ರ ರೋಮ್ ಒಲಿಂಪಿಕ್ಸ್‌ನಲ್ಲಿ ಮಿಲ್ಖಾ 'ಗೆಲ್ಲುವ ಕುದುರೆ' ಹಣೆಪಟ್ಟಿ-ಯೊಂದಿಗೆ ಟ್ರ್ಯಾಕ್‌ಗೆ ಇಳಿದಿದ್ದರು. 400 ಮೀಟರ್ಸ್ ಓಟದ ಫೈನಲ್ ಆರಂಭದಲ್ಲಿ ಮಹತ್ವದ ಮುನ್ನಡೆಯನ್ನೂ ಸಾಧಿಸಿದ್ದರು. ಆದರೆ ತಮ್ಮ ಪ್ರತಿಸ್ಪರ್ಧಿಗಳು ಎಷ್ಟು ದೂರವಿದ್ದಾರೆಂದು ಕತ್ತು ಹೊರಳಿಸಿ ನೋಡಿದ್ದೇ ಅವರಿಗೆ ಮುಳುವಾಯಿತು. ಆ ರೇಸ್‌ನಲ್ಲಿ ಕಂಚಿನ ಪದಕ ಜಯಿಸಿದ್ದ ದಕ್ಷಿಣ ಆಫ್ರಿಕಾದ ಮಾಲ್ಕಂ ಸ್ಪೆನ್ಸ್ ಮತ್ತು ಮಿಲ್ಖಾ ಅವರಿಗೆ ಇದ್ದ ಅಂತರ 0.01 ಸೆಕೆಂಡು ಮಾತ್ರ.

'ಒಲಿಂಪಿಕ್ಸ್‌ನಲ್ಲಿ ಭಾರತದ ಅಥ್ಲೀಟ್ ಪದಕ ಜಯಿಸುವುದನ್ನು ನಾನು ಸಾಯುವುದರೊಳಗೆ ನೋಡಬೇಕು. ಅದೇ ನನ್ನ ಕೊನೆಯ ಆಸೆ' ಎಂದು ಮಿಲ್ಖಾ ಹೇಳಿದ್ದರು. ಆದರೆ ಅವರ ಆಸೆ ಈಡೇರಲಿಲ್ಲ. ದೇಶದಲ್ಲಿ ಓಟದ ರಾಣಿ ಎನಿಸಿದ್ದ ಪಿ.ಟಿ.ಉಷಾ 1984ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಕೂದಲೆಳೆ ಅಂತರದಿಂದ (ಸೆಕೆಂಡಿನ ನೂರನೇ ಒಂದು ಭಾಗದಿಂದ) ಕಂಚಿನ ಪದಕ ತಪ್ಪಿಸಿಕೊಂಡಿದ್ದರು.

ಕಳೆದ ಆರು ದಶಕಗಳಲ್ಲಿ ಕ್ರೀಡಾಕ್ಷೇತ್ರದಲ್ಲಿ ಹೊಸ ತಂತ್ರಜ್ಞಾನ, ವೈದ್ಯಕೀಯ ವಿಜ್ಞಾನ ಮತ್ತು ತರಬೇತಿ ತಂತ್ರಗಳು ಅಗಾಧವಾಗಿ ಬೆಳೆದಿವೆ. ಆದರೆ ಈ ವಿಷಯದಲ್ಲಿ ಭಾರತ ಇನ್ನೂ ಹಿಂದೆಯೇ ಇದೆ. ಈಗಲೂ ನೀರಜ್ ಚೋಪ್ರಾ ವಿದೇಶದಲ್ಲಿ ತರಬೇತಿ ಪಡೆಯುತ್ತಿ-ದ್ದಾರೆ. ಇದಕ್ಕಾಗಿ ಸರ್ಕಾರ ಹಣ ಖರ್ಚು ಮಾಡುತ್ತಿದೆ ಎನ್ನುವುದು ಉತ್ತಮ ಸಂಗತಿ ಇರಬಹುದು. ಆದರೆ, ವಿಶ್ವದರ್ಜೆಯ ತರಬೇತಿ ಸೌಲಭ್ಯಗಳು ನಮ್ಮಲ್ಲಿ ಇನ್ನೂ ಏಕೆ ಆಗಿಲ್ಲ?

'ನಮ್ಮ ದೇಶದ ಕ್ರೀಡಾಪಟುಗಳು ಒಲಿಂಪಿಕ್ಸ್ ಮಟ್ಟದ ಅಥ್ಲೆಟಿಕ್ಸ್‌ನಲ್ಲಿ ಪದಕ ಜಯಿಸಲು ಸಾಧ್ಯವಾಗದಿರಲು ಹಲವು ಕಾರಣಗಳಿವೆ. ಬೇರುಮಟ್ಟದಿಂದ ಹಿಡಿದು ಕೊನೆಯ ಹಂತದವರೆಗೂ ಹತ್ತಾರು ಸಮಸ್ಯೆಗಳಿವೆ. ಪ್ರತಿಭಾ ಶೋಧದ ಪದ್ಧತಿ ಇನ್ನೂ ವೈಜ್ಞಾನಿಕವಾಗಿಲ್ಲ. ಆಧುನಿಕ ಪದ್ಧತಿ ತರಬೇತಿ, ಕ್ರೀಡಾ ವೈದ್ಯಕೀಯ ವಿಜ್ಞಾನದ ಬೆಳವಣಿಗೆ ಇನ್ನೂ ದೊಡ್ಡದಾಗಿ ಬೆಳೆಯಬೇಕಿದೆ. ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿ ಇತ್ತೀಚೆಗೆ ಕೆಲವು ಸೌಲಭ್ಯಗಳು ಬರುತ್ತಿವೆ. ಆದರೆ, ಯುರೋಪ್, ಅಮೆರಿಕದವರು ಬಹಳ ಮುಂದೆ ಸಾಗಿದ್ದಾರೆ. ಇವತ್ತು ಕ್ರೀಡಾಪಟು ಮೈದಾನದಲ್ಲಿ ಅಲ್ಲ, ಪ್ರಯೋಗಾಲಯದಲ್ಲಿ ಸಿದ್ಧಗೊಳ್ಳುತ್ತಿದ್ದಾನೆ. ನಮ್ಮಲ್ಲಿರುವ ವ್ಯವಸ್ಥೆಯನ್ನು ಸಂಪೂರ್ಣವಾಗಿ ತೆಗೆದುಹಾಕಿ ಹೊಸದಾಗಿಯೇ ವಿನ್ಯಾಸ ಮಾಡುವ ಅಗತ್ಯವಿದೆ' ಎಂದು ಭಾರತ ಫುಟ್‌ಬಾಲ್ ತಂಡದ ಕ್ರೀಡಾ ವೈದ್ಯ ಕಿರಣ ಕುಲಕರ್ಣಿ ಅಭಿಪ್ರಾಯಪಡುತ್ತಾರೆ.

ಇದೆಲ್ಲದರಾಚೆ ರಾಜಕೀಯ ಹಸ್ತಕ್ಷೇಪ ಮತ್ತು ಸ್ವಜನ ಪಕ್ಷಪಾತವೂ ಪ್ರತಿಭಾವಂತ ಅಥ್ಲೀಟ್‌ಗಳ ಬೆಳವಣಿಗೆಗೆ ಮಾರಕವಾಗುತ್ತಿದೆ. ದೇಶದ ಪ್ರಮುಖ ಕ್ರೀಡಾ ವ್ಯವಸ್ಥೆಯಾದ ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿಯೇ ಎಲ್ಲವೂ ಸರಿಯಿಲ್ಲ.

'ನಾನು ನೀರಜ್ ಚೋಪ್ರಾಗೆ ಎರಡು ಭರ್ಜಿಗಳಿಗಾಗಿ ಬೇಡಿಕೆ ಸಲ್ಲಿಸಿದ್ದೆ. ಕೆಲವು ದಿನಗಳಾದರೂ ಅವು ಬರಲಿಲ್ಲ. ನಂತರ ವಿಚಾರಿಸಿದಾಗ ಸಂಬಂಧಪಟ್ಟ ವ್ಯಕ್ತಿಯು ನಾನು ಮನವಿ ಮಾಡಿದ್ದ ಇ- ಮೇಲ್ ಅನ್ನೇ ತೆರೆದು ನೋಡಿರಲಿಲ್ಲ. ವೃತ್ತಿಪರತೆಯ ಕೊರತೆ ಇದೆ' ಎಂದು ಯುವೆ ಹಾನ್ ಎರಡು ವರ್ಷಗಳ ಹಿಂದೆ ಮಾಧ್ಯಮಗಳ ಮುಂದೆ ಅಸಮಾಧಾನ ವ್ಯಕ್ತಪಡಿಸಿದ್ದರು.

ಇತಿಹಾಸದ ಪುಟಗಳನ್ನು ತೆಗೆದು ನೋಡಿದರೆ ಇಂತಹ ಹಲವು ಅವ್ಯವಸ್ಥೆಗಳನ್ನು ನೋಡಿದ್ದೇವೆ. 2016ರ ಒಲಿಂಪಿಕ್ಸ್‌ನಲ್ಲಿ ತಂಡದೊಂದಿಗೆ ಕ್ರೀಡಾ ವೈದ್ಯರ ಬದಲು ರೇಡಿಯಾಲಜಿಸ್ಟ್ ಹೋಗಿದ್ದು ದೊಡ್ಡ ವಿವಾದವಾಗಿತ್ತು. ಅವರು ಯಾವುದೋ ರಾಜಕಾರಣಿಯ ಸಂಬಂಧಿಯಾಗಿದ್ದೇ ಅದಕ್ಕೆ ಕಾರಣವಾಗಿತ್ತು.

ಈ ಎಲ್ಲ ಕೊರತೆ ಮತ್ತು ಅವ್ಯವಸ್ಥೆಯ ನಡುವೆಯೂ ಒಂದಿಷ್ಟು ಕ್ರೀಡಾಪಟುಗಳು ಸ್ವಂತ ಪರಿಶ್ರಮದಿಂದ ಉನ್ನತ ಸ್ಥಾನಕ್ಕೇರುತ್ತಾರೆ. ಅವರೇ ಉಳಿದವರಿಗೂ ಪ್ರೇರಣೆಯಾಗುತ್ತಾರೆ. ಹೋದ ಒಲಿಂಪಿಕ್ಸ್‌ನಲ್ಲಿ 3000 ಮೀಟರ್ಸ್ ಸ್ಟೀಪಲ್ ಚೇಸ್‌ನಲ್ಲಿ ಫೈನಲ್ ತಲುಪಿದ್ದ ಲಲಿತಾ ಬಾಬರ್ ಮಹಾರಾಷ್ಟ್ರದ ಸಾತಾರಾ ಜಿಲ್ಲೆಯ ಮೋಹಿ ಗ್ರಾಮದ ಬಡ ಕೃಷಿಕರ ಕುಟುಂಬದ ಹುಡುಗಿ. 2012ರಲ್ಲಿ ಕನ್ನಡಿಗ ವಿಕಾಸ್ ಗೌಡ ಡಿಸ್ಕಸ್ ಥ್ರೋ ಫೈನಲ್ ತಲುಪಿದ್ದರು. ಅವರ ತಂದೆ ಶಿವೇಗೌಡರು ಬಾಲ್ಯದಲ್ಲಿಯೇ ವಿಕಾಸ್ ಅವರನ್ನು ಅಮೆರಿಕಕ್ಕೆ ಕರೆದುಕೊಂಡು ಹೋಗಿ ತರಬೇತಿ ಕೊಟ್ಟು ಬೆಳೆಸಿದ್ದರು.

'ಕುಟುಂಬ ಸಮೇತ ಅಲ್ಲಿ ಹೋಗಿದ್ದಕ್ಕೆ ನನ್ನ ಮಗ ಒಲಿಂಪಿಕ್ಸ್ ಫೈನಲ್ ತಲುಪಲು ಸಾಧ್ಯವಾಯಿತು. ಅಲ್ಲಿಯ ವ್ಯವಸ್ಥೆಗೂ ಇಲ್ಲಿಯದಕ್ಕೂ ಅಜಗಜಾಂತರ ಇದೆ' ಎಂದು ಶಿವೇಗೌಡರು ಆಗ ಹೇಳಿದ್ದರು.

1964ರಲ್ಲಿ ಗುರುಬಚನ್ ಸಿಂಗ್ ರಂಧಾವ 110 ಮೀ. ಹರ್ಡಲ್ಸ್, 1976ರಲ್ಲಿ ಶ್ರೀರಾಮ್ ಸಿಂಗ್ 800 ಮೀಟರ್ಸ್ ಓಟದಲ್ಲಿ ಫೈನಲ್ ತಲುಪಿದಾಗಲೂ ಪದಕ ಜಯದ ಕನಸು ಸಮೀಪಬಂದಿತ್ತು. ಆದರೆ ಗುರುಬಚನ್ ಸಿಂಗ್ ಐದನೇ ಸ್ಥಾನ ಮತ್ತು ಶ್ರೀರಾಮ್ ಏಳನೇ ಸ್ಥಾನ ಪಡೆದಿದ್ದರು. 1984ರಲ್ಲಿ 'ಚಿನ್ನದ ಹುಡುಗಿ' ಪಿ.ಟಿ. ಉಷಾ ನಾಲ್ಕನೇ ಸ್ಥಾನ ಪಡೆದರು. 2004ರಲ್ಲಿ ಅಂಜು ಬಾಬಿ ಜಾರ್ಜ್ ಕೂಡ ಲಾಂಗ್ ಜಂಪ್ ಫೈನಲ್ ತಲುಪಿದ್ದರು. ಅವರೆಲ್ಲರೂ ತಪ್ಪಿಸಿಕೊಂಡ ಸಾಧನೆಯು ಟೋಕಿಯೊದಲ್ಲಿ ಮೂಡಿಬರುವುದೇ?



ಚುರುಮುರಿ



ಮಠ ಯಾತ್ರೆ

• ಮಣ್ಣೆ ರಾಜು

'ನಾಳೆ ಕಡ್ಲೇಪುರ ಮಠಾಧೀಶರ ದರ್ಶನಕ್ಕೆ ಹೋಗಬೇಕು. ಸ್ವಾಮೀಜಿಗಳ ಅಪಾಯಿಂಟ್‌ಮೆಂಟ್ ತಗೊಂಡಾ?' ಜನನಾಯಕರು ಪಿ.ಎ.ಗೆ ಕೇಳಿದರು.

'ತಗೊಂಡಿದ್ದೀನಿ ಸಾರ್... ಬೆಳಿಗ್ಗೆ 9ಕ್ಕೆ ಸ್ವಾಮೀಜಿಗಳು ಟೈಂ ಕೊಟ್ಟಿದ್ದಾರೆ' ಅಂದ ಪಿ.ಎ.

'ನಾವು ಇದುವರೆಗೆ ಎಷ್ಟು ಮಠಗಳ ಪರಮಪೂಜ್ಯರ ಆಶೀರ್ವಾದ ಪಡೆದಿದ್ದೇವೆ?'

'36 ಸ್ವಾಮೀಜಿಗಳ ದರ್ಶನಾಶೀರ್ವಾದ ಮುಗಿದಿದೆ, ಇನ್ನೂ ಹತ್ತಾರು ಬಾಕಿ ಇವೆ'.

'ಮಠ ಯಾತ್ರೆಯಿಂದ ನನ್ನ ರಾಜಕೀಯ ಭವಿಷ್ಯದಲ್ಲಿ ಆರೋಗ್ಯಕರ ಬದಲಾವಣೆ ಆಗಿದೆಯೇ?' ನಾಯಕರಿಗೆ ಕುತೂಹಲ.

'ಆಗಿದೆ ಸಾರ್, ಒಂದು ಮಠದಲ್ಲಿ ರಾಗಿಮುದ್ದೆ ಬಸ್ಸಾರು, ಇನ್ನೊಂದರಲ್ಲಿ ಖಡಕ್ ರೊಟ್ಟಿ ಕಾಯಿಪಲ್ಲೆ, ಮತ್ತೊಂದರಲ್ಲಿ ಮಜ್ಜಿಗೆಹುಳಿ... ಎಲ್ಲಾ ಕಡೆ ಪೌಷ್ಟಿದಾಯಕ ಪ್ರಸಾದ ಸೇವಿಸಿದ್ದೀರಿ, ಆರೋಗ್ಯಕರ ಸುಧಾರಣೆ ಆಗಬೇಕಲ್ವಾ ಸಾರ್?...'

'ಜನಸಾಮಾನ್ಯರಿಗೆ ಸಂಕಟ ಬಂದಾಗ ವೆಂಕಟರಮಣ, ಜನನಾಯಕರಿಗೆ ಸಂಕಷ್ಟ ಬಂದಾಗ ಮಠಗಳತ್ತ ಪಯಣ ಅಲ್ವಾ? ಹಹ್ಹಹ್ಹಾ...' ನಾಯಕರು ಸಂತಸಗೊಂಡರು.

'ಹೌದು ಸಾರ್... ಗುಡಿ ದೇವರಿಗೆ ಮುಡಿ ಕೊಟ್ಟು, ಪೂಜೆ, ನೈವೇದ್ಯ ಮಾಡಿದರೂ ವರ ಕೊಡುವ ಗ್ಯಾರಂಟಿ ಇಲ್ಲ. ಕಾವಿ ದೇವರು ಹಾಗಲ್ಲ, ದರ್ಶನ ಮಾಡಿ ಪಾದಕ್ಕೆರಗಿದರೆ ತಥಾಸ್ತು ಅಂತ ಆಶೀರ್ವಾದ ಮಾಡಿಬಿಡುತ್ತಾರೆ. ಆದರೆ, ನಾಲ್ವರು ಸ್ವಾಮೀಜಿಗಳ ಆಶೀರ್ವಾದದ ಬಗ್ಗೆ ಅನುಮಾನವಿದೆ' ಅಂದ ಪಿ.ಎ.

'ಹೌದಾ?! ಪೂಜೆಯಲ್ಲಿ ಲೋಪ ಆಯ್ತೇ?'

'ಏನೋ ಗೊತ್ತಿಲ್ಲ, ನೀವು ಪಾದಕ್ಕೆ ಬಿದ್ದಾಗ ಸ್ವಾಮೀಜಿಗಳು ಕೋಪಗೊಂಡು ಮುಖ ಕಿವುಚಿಕೊಂಡಿದ್ದರು... ಆ ಮಠಗಳತ್ತ ಮತ್ತೊಂದು ಸುತ್ತಿನ ಯಾತ್ರೆ ತೆರಳಿ ಸ್ವಾಮೀಜಿಗಳನ್ನು ಒಲಿಸಿಕೊಳ್ಳಿ...'

'ಹೌದ್ದೌದು. ಕಾವಿ ದೇವರುಗಳ ಕೋಪ-ಶಾಪದಿಂದ ಚುನಾವಣೆ ಫಲಿತಾಂಶಗಳೇ ಬದಲಾಗಿವೆ. ಕುರ್ಚಿಗಳೇ ಅದಲು ಬದಲಾಗಿವೆ! ಅವರ ಆಶೀರ್ವಾದವಿಲ್ಲದೆ ನಮಗೆ ಏಳಿಗೆಯಿಲ್ಲ...' ಜನನಾಯಕರು ಭಯಭಕ್ತಿಯಿಂದ ಕೆನ್ನೆ ತಟ್ಟಿಕೊಂಡರು.

ಚರ್ಚೆ

ಬ್ರಾಹ್ಮಣ್ಯ: ವಾಸ್ತವದ ಅರಿವಿರಲಿ

ವರ್ಣ ವ್ಯವಸ್ಥೆಯ ಜಾತಿನೀತಿ ಕುರಿತು ಆಗಬೇಕಿದೆ ಆತ್ಮವಿಮರ್ಶೆ

• ಎಸ್.ಜಿ. ಸಿದ್ಧರಾಮಯ್ಯ

ಈ ದೇಶದಲ್ಲಿ ಜಾತಿಯು ವಾಸ್ತವ ಅಷ್ಟೇ ಅಲ್ಲ, ಅದು ಒಂದು ಶಾಪ. ಇಂದು ಅದು ಮೇಲುಕೀಳು, ಶ್ರೇಷ್ಠ, ಕನಿಷ್ಠತೆಯ ಪ್ರಮಾಣುವಿನಲ್ಲಿ ಮಾತ್ರ ಉಳಿದಿಲ್ಲ. ಅದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಡಿದ ದೊಡ್ಡ ಕುಷ್ಟ ರೋಗ. ಈ ಜಾತಿ ವ್ಯವಸ್ಥೆಯನ್ನು ಭದ್ರಗೊಳಿಸಲು ಮಠ, ಪೀಠಗಳು ಬೆಳೆದಿವೆ. ಇವುಗಳನ್ನು ಯಾರಿಂದಲೂ ನಿಯಂತ್ರಿಸಲಾಗುತ್ತಿಲ್ಲ. ಬದಲಾಗಿ ಅವೇ ಪ್ರಜಾಪ್ರಭುತ್ವ ಶಕ್ತಿಯನ್ನು ನಿಯಂತ್ರಿಸುತ್ತಿವೆ.

ಈ ಜಾತಿ ವ್ಯವಸ್ಥೆಯು ಚಾತುರ್ವರ್ಣ ಪದ್ಧತಿಯ ಕೊಡುಗೆ. ಇದು ಹಗಲು ಸತ್ಯ. ಇದಕ್ಕೆ ಯಾವ ವಿದ್ವಾಂಸರ ಸಂಶೋಧನೆಯ ಆಕರಗಳ ಅಗತ್ಯವೂ ಬೇಕಿಲ್ಲ. ಇಂಥ ಚಾತುರ್ವರ್ಣ ಪದ್ಧತಿಯ ವಿರುದ್ಧವಾಗಿಯೇ ಆಜೀವಕರಿಂದ ಮೊದಲ್ಗೊಂಡು ಬುದ್ಧ, ಚಾರ್ವಾಕರೆಲ್ಲರೂ ಹೋರಾಡಿದರು. ಆದರೆ ಅವರ ಹೋರಾಟಗಳ ವೈಫಲ್ಯಕ್ಕೆ ಕಾರಣ ಚಾತುರ್ವರ್ಣ ವ್ಯವಸ್ಥೆಯನ್ನು ನಿಯಂತ್ರಿಸುವ ಪುರೋಹಿತ ವರ್ಣ ಎಂಬುದು ಚಾರಿತ್ರಿಕ ಸತ್ಯವಷ್ಟೇ ಅಲ್ಲ, ಇಂದಿಗೂ ಅದು ಕ್ರೂರ ವಾಸ್ತವ.

ಅಂದು ಜಾತಿಗಾಗಿ ಒಡೆದಿದ್ದ ಸಮಾಜವನ್ನು ಇಂದು ರಾಜಕೀಯ ಕಾರಣಕ್ಕಾಗಿ 'ಹಿಂದೂ ಒಂದು' ಎಂಬ ಹುಸಿ ಘೋಷದೊಂದಿಗೆ ಕರೆಯಲಾಗುತ್ತಿದೆ. ಹಿಂದೂ ಎಂಬುದು ಮಧ್ಯಯುಗೀನ ಕಾಲದಲ್ಲಿ ಮುಸ್ಲಿಮೇತರರನ್ನು ಸಂಬೋಧಿಸಲು ಪ್ರಯೋಗಿಸಿದ ಪದವಾಗಿದ್ದು, ಬೈಗುಳದ ರೀತಿಯ ಆ ಪದವೇ ಇಂದು ಧರ್ಮ ನಿರ್ದೇಶನದ ಪದವಾಗಿ ಬಳಕೆಗೆ ಬಂದಿದೆ. ಆದರೆ ಆ ಧರ್ಮದಲ್ಲಿ ಸರ್ವರೂ ಸಮಾನರಲ್ಲ. ಅದು ಅಸಮಾನತೆಯ ಆಗರ. ಭ್ರಾತೃತ್ವ, ಸಹಿಷ್ಣುತೆ, ಸಮನ್ವಯತೆ ಎಂಬುದೆಲ್ಲ ಅಲ್ಲಿ ಇಲ್ಲದ ಭ್ರಮಾತ್ಮಕ ಪದಪ್ರಯೋಗಗಳು.

ಹಿಂದೂ ಸಮಾಜದಲ್ಲಿ ಎಂದೂ ಸಮಾನತೆ ಎಂಬುದು ಇರಲಿಲ್ಲ. ಈಗಲೂ ಇಲ್ಲ. ಮೇಲುವರ್ಣದ ಸಾಂಸ್ಕೃತಿಕ ದಬ್ಬಾಳಿಕೆ ಇಂದು ಕೇವಲ ಸಾಂಸ್ಕೃತಿಕ ವಲಯದಲ್ಲಿ ಉಳಿಯದೆ ರಾಜಕೀಯದಲ್ಲೂ ಮೇಲುಗೈ ಸಾಧಿಸುತ್ತಿರುವುದು ಕಟುಸತ್ಯ.

ಬ್ರಾಹ್ಮಣ್ಯ ಎಂಬುದು ಗಳಿಸುವುದು ಎಂಬುದನ್ನು ಪದೇ ಪದೇ ಕೆಲವು ಋಷಿಗಳ, ಕವಿಗಳ, ರಾಜರುಗಳ ಹೆಸರು ಹೇಳಿ ಕ್ರೂರ ವಾಸ್ತವವನ್ನು ಮರೆಮಾಚುವ ಹುನ್ನಾರ ನಡೆಯುತ್ತಿದೆ. ಅವರೆಲ್ಲರೂ ವಿದ್ವಾಂಸರು, ಕವಿಗಳು, ವೇದವಿದ್ಯಾ ಪಾರಂಗತರು. ಆದರೆ ಹುಟ್ಟಿನಿಂದ ಬ್ರಾಹ್ಮಣ ಜಾತಿಯವರಲ್ಲ. ಅವರನ್ನು ತಮ್ಮ ವರ್ಣದ ವರ್ಚಸ್ಸಿಗಾಗಿ ಕೇವಲ ಉದಾಹರಣೆಗಾಗಿ ಬಳಸಿಕೊಳ್ಳಲಾಗುತ್ತಿದೆಯೇ ವಿನಾ ಹುಟ್ಟಿನಿಂದ ಬ್ರಾಹ್ಮಣರಾಗಿರುವವರು ವಿದ್ಯಾವಂತರಾಗಿರದಿದ್ದರೆ ಯಾರೂ ಅವರನ್ನು ಅಸ್ಪೃಶ್ಯ, ಕುರುಬ, ಗೊಲ್ಲ, ಕುಂಚಿಟಿಗ ಇತ್ಯಾದಿ ಶೂದ್ರ ಜಾತಿಗಳ ಮೂಲದಲ್ಲಿ ಗುರುತಿಸಿ ಕರೆಯುವುದಿಲ್ಲ. ಇದು ಸಾಂಸ್ಕೃತಿಕ ಅಧಿಕಾರ ರಾಜಕಾರಣದ ಒಳಸೂಕ್ಷ್ಮ.

ಕನಕದಾಸರಿಗೆ ದೇವಾಲಯ ಪ್ರವೇಶ ನಿರಾಕರಿಸಿದ್ದು ಏನು ಹೇಳುತ್ತದೆ? ಸಾವಿರಾರು ವರ್ಷಗಳಿಂದ ಸಂಸ್ಕೃತ ಭಾಷೆಯಿಂದ ಈ ವರ್ಣಗಳನ್ನು ದೂರ ಇಟ್ಟಿದ್ದು ಏನು ಹೇಳುತ್ತದೆ? ಗ.ನಾ.ಭಟ್ಟರು ಈ ದೇಶದ ಕ್ರೂರ ವಾಸ್ತವವನ್ನು ಕೇವಲ ಕೆಲವು ಉದಾಹರಣೆಗಳ ಮುಖೇನ ತಿಪ್ಪೆ ಸಾರಿಸಲು ಹೊರಟಿದ್ದಾರೆ (ಚರ್ಚೆ, ಜೂನ್ 22). ವರ್ಣ ವ್ಯವಸ್ಥೆಯ ಜಾತಿನೀತಿ ಯಾವ ಯಾವ ರೂಪದಲ್ಲಿ ವ್ಯವಹರಿಸುತ್ತಿದೆ ಎಂಬುದರ ಆತ್ಮವಿಮರ್ಶೆ ಮಾಡಿಕೊಂಡು ಮಾತಿಗೆ ತೊಡಗುವುದು ಉತ್ತಮ.



ಗ್ರಹಿಸದ ಆಶಯ

ಬ್ರಾಹ್ಮಣ್ಯ ಕುರಿತ ಮೂಡ್ನಾಕೂಡು ಚಿನ್ನಸ್ವಾಮಿ ಅವರ ಅಭಿಪ್ರಾಯಗಳಿಗೆ ಗ.ನಾ.ಭಟ್ಟ ಅವರ ಪ್ರತಿಕ್ರಿಯೆ ಗಮನಿಸಿದೆ. ಅವರು 'ಬ್ರಾಹ್ಮಣ ಅನ್ನುವುದು ಜಾತಿವಾಚಕ ಅಲ್ಲ, ಅದೊಂದು ವರ್ಣವಾಚಕ' ಎಂದು ಹೇಳಿ 'ಬ್ರಾಹ್ಮಣ ಮತ್ತು ಬ್ರಾಹ್ಮಣ್ಯ ಕೂಡಾ ಒಂದನ್ನೊಂದು ಬಿಟ್ಟಿರಲಾರವು' ಎಂಬ ಸ್ಪಷ್ಟೀಕರಣ-ವನ್ನು ನೀಡಿದ್ದಾರೆ. ಅಲ್ಲದೆ 'ಮೂಡ್ನಾಕೂಡು ಅವರಿಗೆ ಈ ಒಂದು ಪ್ರಾಥಮಿಕ ತಿಳಿವಳಿಕೆಯೂ ಇಲ್ಲದಿದ್ದುದು ಒಂದು ಚೋದ್ಯವೆನಿಸುತ್ತದೆ' ಎಂದು ವ್ಯಂಗ್ಯವಾಡಿದ್ದಾರೆ.

ಗ.ನಾ.ಭಟ್ಟ ಅವರು ಮೂಡ್ನಾಕೂಡು ಅವರ ಅಭಿಪ್ರಾಯಗಳನ್ನು, ಅದರ ಹಿಂದಿನ ಆಶಯಗಳನ್ನು ಸರಿಯಾಗಿ ಗ್ರಹಿಸದೇ ಬ್ರಾಹ್ಮಣ, ಬ್ರಾಹ್ಮಣ್ಯ ಎರಡನ್ನೂ ಸಮರ್ಥಿಸಿಕೊಂಡಿರುವುದು ವಿಪರ್ಯಾಸ. ಮೂಡ್ನಾಕೂಡು ಅವರು ಸ್ಪಷ್ಟವಾಗಿ 'ಬ್ರಾಹ್ಮಣ್ಯವು ವೈರಾಣುವಿನ ರೀತಿ ಎಲ್ಲ ಕ್ಷೇತ್ರಗಳನ್ನೂ ಆವರಿಸಿದೆ. ಇದೊಂದು ವ್ಯಸನ. ಜಾತಿ ಆಧಾರಿತ ತಾರತಮ್ಯಗಳನ್ನು ಜೀವಂತವಾಗಿಡುವುದೇ ಬ್ರಾಹ್ಮಣ್ಯ... ದಲಿತರಲ್ಲೂ ಬ್ರಾಹ್ಮಣ್ಯವಿದೆ. ಅದಕ್ಕೆ ಅವರ ಅಜ್ಞಾನವೇ ಕಾರಣ' ಎಂದಿದ್ದಾರೆ. ಜಾತಿವ್ಯವಸ್ಥೆಯ ದುಷ್ಪರಿಣಾಮಗಳನ್ನು ಬರೀ ಬ್ರಾಹ್ಮಣರ ತಲೆಗೆ ಕಟ್ಟದೆ, ಆ ಮನೋಧರ್ಮವು ದಲಿತರನ್ನು ಒಳಗೊಂಡಂತೆ ಎಲ್ಲಾ ಬ್ರಾಹ್ಮಣೇತರ ಜಾತಿಗಳಲ್ಲಿಯೂ ಬೆಳೆಯುತ್ತಿರು-ವುದರ ಅಪಾಯದ ಕುರಿತು ಗಮನ ಸೆಳೆದಿದ್ದಾರೆ.

ಸಮಾಜದಲ್ಲಿ ವರ್ಣ ವ್ಯವಸ್ಥೆಗೆ ಬದಲಾಗಿ ಜಾತಿ ವ್ಯವಸ್ಥೆ ಚಾಲ್ತಿಗೆ ಬಂದು ಹಲವು ಶತಮಾನಗಳಾಗಿವೆ. 'ಯಾವುದೇ ವರ್ಣದವರು ಬ್ರಾಹ್ಮಣರಾಗಬಹು-ದಿತ್ತು' ಎಂಬುದು ಹಳೆಯದಾದ ಕ್ಲೀಷೆಯ ಮಾತು. ನಮಗೆ ಸ್ವಾತಂತ್ರ್ಯ ಬಂದು ಏಳು ದಶಕಗಳಾದರೂ ಜಾತಿ ವ್ಯವಸ್ಥೆಯ ಕಂದಾಚಾರಗಳು ಈಗಲೂ ಜೀವಂತವಾಗಿವೆ. ಹನ್ನೆರಡನೇ ಶತಮಾನದ ಶಿವ-ಶರಣರೆಲ್ಲ ವಿರೋಧ ವ್ಯಕ್ತಮಾಡಿದ್ದು ಬ್ರಾಹ್ಮಣ್ಯದ ಬಗ್ಗೆಯೇ. ಸ್ವತಃ ಬಸವಣ್ಣ ತಾನು ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ್ದರೂ 'ನಾನು ಹಾರುವನೆಂದೊಡೆ ಕೂಡಲ ಸಂಗಮ ನಗುವನಯ್ಯಾ' ಎಂದದ್ದು ಈ ಹಿನ್ನೆಲೆಯಲ್ಲಿಯೇ. ಜಾತಿ ಆಧಾರಿತ ತರತಮಗಳನ್ನು ಒಪ್ಪದ ಪ್ರಜ್ಞಾವಂತ ಜನ ಎಲ್ಲಾ ಜಾತಿಗಳಲ್ಲಿ ಇದ್ದಾರೆಂಬುದು ಕೊಂಚ ನೆಮ್ಮದಿಯ ಸಂಗತಿ.

ಡಾ. ಕೆ.ಆರ್.ದುರ್ಗಾದಾಸ್, ಧಾರವಾಡ

ವಾಚಕರ ವಾಣಿ

ಭೂಕುಸಿತ ತಡೆ: ಕಟ್ಟುನಿಟ್ಟಿನ ನೀತಿ ಜಾರಿಯಾಗಲಿ

ರಾಜ್ಯದ ಪಶ್ಚಿಮಘಟ್ಟದ ಜಿಲ್ಲೆಗಳಲ್ಲಿ ಕೆಲವು ವರ್ಷಗಳಿಂದ ಸತತವಾಗಿ ಘಟಿಸುತ್ತಿರುವ ಭೂಕುಸಿತದ ಕುರಿತಾಗಿನ ಸಕಾಲಿಕ ಸಂಪಾದಕೀಯಕ್ಕೆ (ಪ್ರ.ವಾ., ಜೂನ್ 22) ಕೃತಜ್ಞತೆಗಳು. ಹಲವು ಒಳನೋಟಗಳಿರುವ ಈ ಬರಹವು ಸರ್ಕಾರ ಹಾಗೂ ಜನರನ್ನು ಎಚ್ಚರಿಸಲಿ ಎಂದು ಹಾರೈಕೆ. ಎರಡು ಬಗೆಯಲ್ಲಿ ಈಗ ಕಾರ್ಯೋನ್ಮುಖವಾಗುವ ಅವಶ್ಯಕತೆಯಿದೆ.

ಒಂದನೆಯದು, ಇಲ್ಲಿನ ಪರಿಸರಕ್ಕೆ ಈಗಾಗಲೇ ಆಗಿರುವ ಗಾಸಿಯನ್ನು ಸರಿಪಡಿಸುವ ಕಾರ್ಯ. ಪರ್ವತಶ್ರೇಣಿ, ಕಾಡು, ಗೋಮಾಳ, ನದಿತಪ್ಪಲು, ಕೃಷಿಭೂಮಿ- ಎಲ್ಲೆಡೆಯ ಪರಿಸರವನ್ನು ಪುನಶ್ಚೇತನಗೊಳಿಸುವ ಸೂಕ್ತ ಕಾರ್ಯನೀತಿ ಜಾರಿಯಾಗಬೇಕಿದೆ. ಇದು ಸರ್ಕಾರ ಹಾಗೂ ನಾಗರಿಕ ಸಮಾಜವು ಜಂಟಿಯಾಗಿ ಹಲವು ಹಂತಗಳಲ್ಲಿ ಸಾಧಿಸಬೇಕಾದ ಸವಾಲು. ಎರಡನೆಯದು, ಭವಿಷ್ಯದಲ್ಲಿ ಈ ಅಪಾಯಗಳನ್ನು ತಡೆಗಟ್ಟುವ ಉದ್ದೇಶದ ಸೂಕ್ತ 'ನೆಲ-ಜಲ ಬಳಕೆ ನೀತಿ'ಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದು. ಕೃಷಿ, ವಸತಿಪ್ರದೇಶ, ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ, ಪರಿಸರದ ಸೂಕ್ಷ್ಮತೆಯನ್ನು ಪುರಸ್ಕರಿಸುವ ಶಿಸ್ತಿನ ಚೌಕಟ್ಟಾಗಬೇಕು ಅದು.

ಇವೆರಡೂ ಸಾಧ್ಯವಾದರೆ ಮಾತ್ರ ಪಶ್ಚಿಮಘಟ್ಟ ಪ್ರದೇಶವನ್ನು ಸಂರಕ್ಷಿಸಿಕೊಳ್ಳಲು ಸಾಧ್ಯವಾದೀತು. ಇಲ್ಲವಾದಲ್ಲಿ, ಸಹ್ಯಾದ್ರಿ ತಪ್ಪಲಿನ ಹಾಗೂ ಕರಾವಳಿಯ ಲಕ್ಷಾಂತರ ಕುಟುಂಬಗಳ ಬದುಕು ಇನ್ನೂ ದುಸ್ತರವಾಗಲಿದೆ. ಜೊತೆಗೆ, ಅಲ್ಲಿಯೇ ಹುಟ್ಟಿ ಹರಿಯುವ ನದಿಗಳ ನೀರನ್ನೇ ನಂಬಿರುವ ನಾಡಿನ ಅಸಂಖ್ಯ ಜನರ ಬದುಕು ಮತ್ತಷ್ಟು ಹೈರಾಣಾಗಲಿದೆ. ಎಲ್ಲರಲ್ಲಿ ಈ ವಿವೇಕ ಮೂಡಲಿ ಎಂದು ಆಶಿಸೋಣ.

ಡಾ. ಕೇಶವ ಎಚ್. ಕೊರ್ಸೆ, ಶಿರಸಿ

ಒತ್ತಡರಹಿತ ಶಿಕ್ಷಣಕ್ಕೆ ಸಂಗೀತದ ನೆರವು

'ಶಿಕ್ಷಣ ಯಜ್ಞದಲ್ಲೊಂದು ಸಂಗೀತ ಲೋಕ' ಎಂಬ ಯೋಗಾನಂದ ಅವರ ಲೇಖನ (ಸಂಗತ, ಜೂನ್ 21) ಸಮಯೋಚಿತವಾಗಿದೆ. ಆಧುನಿಕತೆಯ ಭರದಲ್ಲಿ ಸಾಗುತ್ತಿರುವ ನಾವು, ಮಕ್ಕಳನ್ನು ಯಂತ್ರಗಳಂತೆ ಇಡಲು ಪ್ರಯತ್ನಿಸುತ್ತಾ ಶಿಕ್ಷಣದ ಮೂಲ ಆಶಯವನ್ನೇ ಮರೆಯುತ್ತಿದ್ದೇವೆ. ಮಕ್ಕಳು ಬರೀ ಶಿಕ್ಷಿತರಾದರೆ ಸಾಲದು ಭವಿಷ್ಯದ ಪ್ರಜ್ಞಾವಂತ ನಾಗರಿಕರಾಗುವುದು ಕೂಡ ತುಂಬಾ ಅವಶ್ಯಕ. ಹಾಗಾಗಿ ಕಲಿಕೆಯ ಜೊತೆಜೊತೆಗೆ ಪಠ್ಯೇತರ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಹಾಗೂ ಆ ದಿಸೆಯಲ್ಲಿ ಕಾರ್ಯೋನ್ಮುಖರಾಗುವ ಜರೂರತ್ತು ಖಂಡಿತ ಇದೆ. ಸಂದಿಗ್ಧ ಸ್ಥಿತಿಯಲ್ಲಿ ಮಕ್ಕಳು ಒತ್ತಡರಹಿತ ಶಿಕ್ಷಣವನ್ನು ಪಡೆಯಲು ಸಂಗೀತದ ಪಾಠ ಖಂಡಿತ ನೆರವಿಗೆ ಬರುತ್ತದೆ. ಜನಪ್ರತಿನಿಧಿಗಳು ಇಂತಹ ಚಿಂತನೆಗಳ ಅನುಷ್ಠಾನಕ್ಕೆ ಕಾರ್ಯೋನ್ಮುಖರಾಗಲಿ.

ಆನಂದ ಕುಂಬಾರ, ಬೆಳಗಾವಿ

ಸನ್ಮಾನ್ಯ ಕನ್ನಡಕ್ಕೆ ಅನ್ಯಾಯ ಆಗದಿರಲಿ

ಈಗ ನಮ್ಮ ನಾಡಿನ ಶೈಕ್ಷಣಿಕ ಕ್ಷೇತ್ರದಲ್ಲಿ ಹೆಚ್ಚು ಚರ್ಚೆಗೆ ಬರುತ್ತಿರುವುದು ಕನ್ನಡದ ಅಧ್ಯಯನಕ್ಕೆ ಸಂಬಂಧಿಸಿದ ವಿಷಯ. ಉನ್ನತ ಶಿಕ್ಷಣ ಸಚಿವರು ಪದವಿ ತರಗತಿಯ ಅವಧಿಯನ್ನು ವಿಸ್ತರಿಸುತ್ತಿದ್ದಾರೆ. ಇದುವರೆಗೆ ಮೂರು ವರ್ಷಗಳ ಅಧ್ಯಯನವೇ ಶೈಕ್ಷಣಿಕ ಇತ್ಯಾತ್ಮಕ ವಿನ್ಯಾಸವಾಗಿತ್ತು. ಈಗ ಸಚಿವರು ಅದನ್ನು ನಾಲ್ಕು ವರ್ಷಗಳ ಅವಧಿಗೆ (ಅಂದರೆ ಎಂಟು ಸೆಮಿಸ್ಟರ್) ವಿಸ್ತರಿಸುತ್ತಿದ್ದಾರೆ. ಅದರ ಬಗ್ಗೆ ನಮ್ಮ ತಕರಾರಿಲ್ಲ! ಆದರೆ ಆ ನೆಪದಲ್ಲಿ ಕನ್ನಡ ಬೋಧನೆಗೆ ಪ್ರಾಧಾನ್ಯತೆ ಸಿಗುತ್ತಿಲ್ಲ. ಇದು ವಿಷಾದನೀಯ. ಈಗಾಗಲೇ ತಾಂತ್ರಿಕ ವಿದ್ಯಾಲಯಗಳಲ್ಲಿ ಕನ್ನಡದ ಕಲಿಕೆ 'ನಾಮಕೆವಾಸ್ತೆ' ಆಗಿದೆ. ಈಗ ಅವಧಿಯನ್ನು ಕಡಿತಗೊಳಿಸುತ್ತಿರುವುದರಿಂದ ಶೈಕ್ಷಣಿಕ ಅಧೋಗತಿ.

ಸುಧಾರಣೆಗಳು ಇತ್ಯಾತ್ಮಕವಾಗಿರಬೇಕು, ಜ್ಞಾನಾರ್ಜನೆ ಪರವಾಗಿರಬೇಕು. ಬದಲಾವಣೆ ಸಹಜ. ಹಾಗೆಂದು ಅದು ಕನ್ನಡದ ಸ್ಥಾನಮಾನಕ್ಕೆ ಚ್ಯುತಿ ತರಬಾರದು. ಭಾಷಾ ಕಲಿಕೆ ಬಹಳ ಮುಖ್ಯ. ಕನ್ನಡದಲ್ಲಿ ಪ್ರೌಢಿಮೆ ಸಾಧ್ಯವಾಗಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗೆ ಭಾಷೆಯ ಬಗೆಗಿನ ತಿಳಿವಳಿಕೆ ಸರಿಯಾಗಿದ್ದರೆ ಸಂವಹನ ಸಲೀಸಾಗುತ್ತದೆ. ತಾಂತ್ರಿಕ ಪದವಿ ಗಳಿಸುವಲ್ಲಿ ವಿದ್ಯಾರ್ಥಿ ನಮ್ಮ ನಾಡಿನ ಮೂಲ ತಳಹದಿಯನ್ನೇ ಮರೆಯಬಾರದು. ನಾಲ್ಕು ಸೆಮಿ-ಸ್ಟರ್‌ಗಳಲ್ಲೂ ಕನ್ನಡವನ್ನೂ ಇತರ ವಿಷಯಗಳ ಜೊತೆ ಸಮರ್ಥವಾಗಿ ಗ್ರಹಿಸಬೇಕು. ಭಾಷೆಯ ಅಧ್ಯಯನದ ಬಗೆಗೆ ಬೇಕಾಬಿಟ್ಟಿ ನಿಲುವು ಸರಿಯಲ್ಲ. ಕನ್ನಡ ಭಾಷೆಯಲ್ಲೂ ಅವನು ಪದವಿ ಗಳಿಸುವುದಾದರೆ ಆಗ ಶಿಕ್ಷಣ ಅರ್ಥಪೂರ್ಣ. ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ಧೋರಣೆ ಸರ್ವಸಮ್ಮತವಲ್ಲ. ಕನ್ನಡದಲ್ಲೂ ಮೂವತ್ತೈದು ಅಂಕ ತೆಗೆದುಕೊಂಡು ತೇರ್ಗಡೆ ಆದಾಗ ಮಾತ್ರ, ತಾಂತ್ರಿಕ ವಿಷಯಗಳಲ್ಲಿ ಪರಿಣತಿ ಪಡೆದದ್ದಕ್ಕೆ ಸಾಕ್ಷಿ!

ಸರಿಯಾದ ಭಾಷಾಪ್ರಯೋಗ ಅತ್ಯಂತ ಅವಶ್ಯ. ಕನ್ನಡವಾಗಲೀ ಇಂಗ್ಲಿಷ್ ಆಗಲೀ ವ್ಯಾಕರಣಬದ್ಧವಾಗಿ ಬರೆಯುವ, ಓದುವ ಪ್ರೌಢಿಮೆ ಮೆರೆಯಬೇಕು. ವಿದೇಶಗಳಲ್ಲಿ ಓದಲು ಹೋಗುವ ಭಾರತೀಯ ವಿದ್ಯಾರ್ಥಿಗಳು ತಮ್ಮ ಆಯ್ಕೆಯ ವಿಷಯಗಳಲ್ಲಿ ಶುದ್ಧವಾಗಿರಬೇಕೆಂದೂ ಅದರಲ್ಲಿ ಪರಿಣತಿ ಇರಬೇಕೆಂದೂ ಆಶಿಸುವುದರಿಂದ ಅದಕ್ಕೆ ಆದ್ಯತೆ ಸಿಗುತ್ತದೆ. ಭಾಷೆಯ ವಿಷಯದಲ್ಲಿ ಇದು ಐಚ್ಛಿಕವಾಗಿರುವುದರಿಂದ ಪಠ್ಯಕ್ರಮ ಹಗುರಾಗುತ್ತಿದೆ. ಕನ್ನಡವೆಂದರೆ ತಿರಸ್ಕಾರ ಬೇಡ. ಇದನ್ನು ತಾಂತ್ರಿಕ ವಿಶ್ವವಿದ್ಯಾಲಯಗಳೂ ವೈದ್ಯಕೀಯ ವಿಶ್ವವಿದ್ಯಾಲಯಗಳೂ ಮೊದಲು ಅರ್ಥಮಾಡಿಕೊಳ್ಳಬೇಕು.

ಎಂಜಿನಿಯರ್‌ಗಾಗಲೀ ಡಾಕ್ಟರ್‌ಗಾಗಲೀ ಭಾಷೆ ಬಹಳ ಮುಖ್ಯವಾಗುತ್ತದೆ. ಇಲ್ಲದೆಹೋದರೆ ಸಂವಹನ ಕಷ್ಟಸಾಧ್ಯ. ಇನ್ನು ಕನ್ನಡ ಬೋಧನೆಯನ್ನು ಕನಿಷ್ಠ ಮೂರು ವರ್ಷಗಳಿಗೆ (ಆರು ಸೆಮಿಸ್ಟರ್) ನಿಗದಿ ಮಾಡುವುದರಿಂದ ಕನ್ನಡ ನಾಡಿನಲ್ಲಿ ಕನ್ನಡ ಅಧ್ಯಾಪಕರಿಗೆ ನಿರುದ್ಯೋಗ ಸಮಸ್ಯೆ ಪರಿಹಾರವಾಗುತ್ತದೆ. ಇದರಿಂದ, ಕನ್ನಡ ಎಂ.ಎ ಅಥವಾ ಕನ್ನಡ ಪಿಎಚ್.ಡಿ. ಮಾಡಿದ್ದಕ್ಕೂ ಸಾರ್ಥಕವಾಗುತ್ತದೆ.

ಈಗಲೂ ಕಾಲ ಮಿಂಚಿಲ್ಲ. ಉನ್ನತ ಶಿಕ್ಷಣ ಸಚಿವರು ಮತ್ತೊಮ್ಮೆ ಮಗದೊಮ್ಮೆ ಮರುಚಿಂತನೆ ಮಾಡಲಿ. ಕನ್ನಡದ ಬೇರುಗಳು ಭದ್ರವಾಗಬೇಕು. ಕನ್ನಡದ ಕಲಿಕೆ ಅರ್ಥಪೂರ್ಣ ಆಗಬೇಕು. ಕನ್ನಡದ ಬಗ್ಗೆ ವೇದಿಕೆ ಭಾಷಣದಿಂದ ಪ್ರಯೋಜನವಿಲ್ಲ.

ಡಾ. ದೊಡ್ಡರಂಗೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ತೃತೀಯ ರಂಗ ರಚನೆಯ ಇನ್ನೊಂದು ಪ್ರಯತ್ನ?

ಚುನಾವಣಾ ನೀತಿ ನಿರೂಪಕ ಪ್ರಶಾಂತ್ ಕಿಶೋರ್ ಮತ್ತು ಹಿರಿಯ ಮುತ್ಸದ್ದಿ ಶರದ್ ಪವಾರ್ ಅವರು ಎರಡು ಬಾರಿ ಭೇಟಿಯಾಗಿ ಸುದೀರ್ಘ ಚರ್ಚೆ ನಡೆಸಿದ ನಂತರ, ರಾಷ್ಟ್ರಮಟ್ಟದಲ್ಲಿ ತೃತೀಯ ರಂಗ ರಚನೆಯ ಊಹಾಪೋಹಗಳಿಗೆ ಪುನಃ ರೆಕ್ಕೆಪುಕ್ಕಗಳು ಮೂಡಿವೆ.

'ತೃತೀಯ ರಂಗ ರಚನೆಯ ಉದ್ದೇಶವಿಲ್ಲ' ಎಂದು ಈ ಇಬ್ಬರೂ ನಾಯಕರು ಪ್ರತ್ಯೇಕವಾಗಿ ಹೇಳಿದ್ದರೂ, ದೇಶದಲ್ಲಿ ಈಚಿನ ಕೆಲವು ದಿನಗಳಿಂದ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳನ್ನು ನೋಡಿದರೆ, ಆ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿವೆ ಎಂಬ ಭಾವನೆ ದಟ್ಟವಾಗಿ ಮೂಡುತ್ತಿದೆ.

ಚದುರಿಹೋಗಿರುವ ವಿರೋಧಪಕ್ಷಗಳು ಮತ್ತು ಅದರ ಲಾಭ ಪಡೆದು ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ, ರಾಷ್ಟ್ರೀಯ ಪಕ್ಷವಾಗಿರುವ ಕಾಂಗ್ರೆಸ್‌ನ ಒಳಗಿನ ಬೇಗುದಿ ಬಹಿರಂಗಗೊಳ್ಳುತ್ತಿರುವುದು, ನಾಯಕರ ಪಕ್ಷತ್ಯಾಗ ಮುಂತಾದ ಬೆಳವಣಿಗೆಗಳು ತೃತೀಯ ರಂಗದ ಪ್ರವೇಶಕ್ಕೆ ಒಳ್ಳೆಯ ಅವಕಾಶ ಮಾಡಿಕೊಟ್ಟಿದೆ ಎಂದು ವಿಶ್ಲೇಷಕರು ಅಭಿಪ್ರಾಯಪಡುತ್ತಾರೆ.

ಆದರೆ, ತೃತೀಯ ರಂಗ ಎಂಬುದು ಒಂದು ಕನಸೇ ವಿನಾ ವಾಸ್ತವದಲ್ಲಿ ಜಾರಿಯಾಗುವುದು ಅಸಾಧ್ಯ ಎಂಬ ವಾದವೂ ಇದೆ. ಇಂಥ ಒಂದು ರಾಜಕೀಯ ವೇದಿಕೆಯನ್ನು ರೂಪಿಸಲು ಈ ಹಿಂದೆ ನಡೆದಿದ್ದ ಪ್ರಯತ್ನಗಳು ಮತ್ತು ಅದರ ಪರಿಣಾಮಗಳನ್ನು ಗಮನಿಸಿದರೆ ತೃತೀಯ ರಂಗ ರಚನೆ ಸುಲಭದ ಕೆಲಸವಲ್ಲ ಎಂಬುದು ವ್ಯಕ್ತವಾಗುತ್ತದೆ.

ಮಾಯಾವತಿ, ಅಖಿಲೇಶ್ ಯಾದವ್, ಚಂದ್ರಬಾಬು ನಾಯ್ಡು, ಮಮತಾ ಬ್ಯಾನರ್ಜಿ ಮುಂತಾದ ನಾಯಕರೂ ತೃತೀಯ ರಂಗ ರಚನೆಗೆ ಪ್ರಯತ್ನಿಸಿದ್ದಿದೆ. ಆಡಳಿತ ಮತ್ತು ವಿರೋಧಪಕ್ಷಗಳಿಂದ ಬೇರೆಯಾದ ರಾಜಕೀಯ ರಂಗನ್ನು ರೂಪಿಸುವ ಪ್ರಯತ್ನಗಳು ಹಿಂದೆಯೂ ನಡೆದಿವೆ. ಇಂಥ ರಂಗಗಳು ರಚಿಸಿದ ಸರ್ಕಾರಗಳು ಅಲ್ಪಾಯುವಾಗಿದ್ದವು ಎಂಬುದನ್ನು ಇತಿಹಾಸ ಹೇಳುತ್ತದೆ.



2018ರಲ್ಲಿ ಎಚ್‌.ಡಿ.ಕುಮಾರಸ್ವಾಮಿ ಅವರ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಬಿಜೆಪಿಯೇತರ ಪಕ್ಷಗಳ ನಾಯಕರ ಒಗ್ಗಟ್ಟು ಪ್ರದರ್ಶನ

ನಾಯಕತ್ವದ ಕೊರತೆ

1989ರಿಂದ 1998ರವರೆಗಿನ ಅವಧಿಯಲ್ಲಿ ತೃತೀಯ ರಂಗದ ನಾಲ್ಕು ಸರ್ಕಾರಗಳು ರಚನೆಯಾಗಿದ್ದವು. ಆದರೆ ನಾಯಕತ್ವದ ಕೊರತೆ ಮತ್ತು ಸಂಘರ್ಷದಿಂದ ಯಾವ ಸರ್ಕಾರವೂ ಅವಧಿ ಪೂರ್ಣಗೊಳಿಸಲು ಯಶಸ್ವಿಯಾಗಲಿಲ್ಲ.

ಆ ಕಾಲಘಟ್ಟದಲ್ಲಿ ಎಲ್ಲಾ ಪಕ್ಷಗಳಲ್ಲೂ ಸಮರ್ಥ ನಾಯಕರಿದ್ದರು. ಆದರೆ ಒಕ್ಕೂಟದ ನಾಯಕ ಯಾರಾಗಬೇಕು ಎಂಬಲ್ಲಿ ಗೊಂದಲವಿತ್ತು. ಯಾರೂ ಅದನ್ನು ಸ್ವೀಕರಿಸಲು ಸಿದ್ಧರಿರಲಿಲ್ಲ. ದೇವೇಗೌಡರಿಗೆ ಪ್ರಧಾನಿ ಹುದ್ದೆ ಒಲಿಯುವುದಕ್ಕೂ ಮುನ್ನ, ಜ್ಯೋತಿ ಬಸು, ಚಂದ್ರಬಾಬು ನಾಯ್ಡು ಹಾಗೂ ವಿ.ಪಿ. ಸಿಂಗ್ ಅವರನ್ನೂ ಈ ಹುದ್ದೆಯನ್ನು ಸ್ವೀಕರಿಸುವಂತೆ ಅಂದಿನ ಮುಖಂಡರು ಮನವಿ ಮಾಡಿದ್ದರು. ಆದರೆ ಅವರು ಪ್ರಸ್ತಾವವನ್ನು ನಿರಾಕರಿಸಿದ್ದರು.

ನ್ಯಾಷನಲ್ ಫ್ರಂಟ್

ದೇಶದಲ್ಲಿ ತೃತೀಯ ರಂಗ ರಚನೆಯ ಪ್ರಯತ್ನ ಆರಂಭವಾದ್ದು 1987ರಲ್ಲಿ. ರಾಜೀವ್ ಗಾಂಧಿ ಅವರ ಸಂಪುಟದಲ್ಲಿ ಸಚಿವರಾಗಿದ್ದ ವಿ.ಪಿ. ಸಿಂಗ್ ಅವರನ್ನು, ಪಕ್ಷವಿರೋಧಿ ಚಟುವಟಿಕೆ ನಡೆಸಿದ ಆರೋಪದಲ್ಲಿ 1987ರಲ್ಲಿ ಪಕ್ಷದಿಂದ ಉಚ್ಚಾಟಿಸಲಾಯಿತು. ಪಕ್ಷದಿಂದ ಹೊರಬಂದ ಅವರು ಜನಮೋರ್ಚಾವನ್ನು ರಚಿಸಿದರು.

1989ರ ಲೋಕಸಭಾ ಚುನಾವಣೆಗೂ ಸ್ವಲ್ಪವೇ ಮುನ್ನ ಬೊಫೋರ್ಸ್ ಹಗರಣ ಭಾರಿ ಸುದ್ದಿ ಮಾಡಿತು. ಇದು ರಾಜೀವ್ ನೇತೃತ್ವದ ಸರ್ಕಾರಕ್ಕೆ ಭಾರಿ ಮುಜುಗರ ಉಂಟುಮಾಡಿತು.

ಇದನ್ನೇ ಮುಂದಿಟ್ಟುಕೊಂಡು ಸಿಂಗ್ ಅವರು ಇನ್ನಷ್ಟು ಪಕ್ಷಗಳನ್ನು ಒಗ್ಗೂಡಿಸಿ 'ನ್ಯಾಷನಲ್ ಫ್ರಂಟ್' ರಚಿಸಿದರು. ಟಿಡಿಪಿ, ಡಿಎಂಕೆ, ಅಸೋಂ ಗಣಪರಿಷತ್ ಮುಂತಾದವು ಸಿಂಗ್ ಜತೆಗೆ ಕೈಜೋಡಿಸಿದವು. ಈ ಕೂಟಕ್ಕೆ ಬಿಜೆಪಿ ಮತ್ತು ಸಿಪಿಎಂ ಬಾಹ್ಯ ಬೆಂಬಲ ನೀಡಿದವು. ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸೋಲಾಗಿ, 1989ರ ಡಿಸೆಂಬರ್ 2ರಂದು ವಿ.ಪಿ. ಸಿಂಗ್ ದೇಶದ ಪ್ರಧಾನಿಯಾದರು.

ಸಂಖ್ಯಾ ಬಲದ ಕೊರತೆಯಿಂದಾಗಿ ಈ ರಂಗವು ತಮಿಳುನಾಡಿನಲ್ಲಿ ಬದ್ಧ ವೈರಿಗಳಂತಿದ್ದ ಡಿಎಂಕೆ ಮತ್ತು ಎಐಎಡಿಎಂಕೆಯ ಬೆಂಬಲ ಪಡೆಯಲು ಪ್ರಯತ್ನಿಸಿತ್ತು. ಇನ್ನೊಂದೆಡೆ, ರಾಮ ಮಂದಿರ ನಿರ್ಮಾಣಕ್ಕಾಗಿ ಒತ್ತಾಯಿಸುತ್ತಾ ಬಂದಿದ್ದ ಬಿಜೆಪಿಯು ಬೆಂಬಲ ಹಿಂಪಡೆಯಿತು. ಪರಿಣಾಮ 1990ರ ನವೆಂಬರ್ 10ರಂದು ಸಿಂಗ್ ಅವರು ಅಧಿಕಾರ ಕಳೆದುಕೊಂಡರು.

ಸಿಂಗ್ ರಾಜೀನಾಮೆಯ ಬಳಿಕ, ಚಂದ್ರಶೇಖರ್ ಅವರು ಪ್ರಧಾನಿಯಾದರು. ಕಾಂಗ್ರೆಸ್ ಪಕ್ಷವು ಅವರಿಗೆ ಬೆಂಬಲನೀಡಿತ್ತು. ಆದರೆ ಏಳು ತಿಂಗಳಲ್ಲೇ ಬೆಂಬಲ ಹಿಂಪಡೆದ ಕಾರಣ ಅವರೂ ಅಧಿಕಾರ ಕಳೆದುಕೊಂಡರು. ನಂತರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪುನಃ ಅಧಿಕಾರಕ್ಕೆ ಬಂದು, ಪಿ.ವಿ. ನರಸಿಂಹ ರಾವ್ ಪ್ರಧಾನಿಯಾದರು.

ಯುನೈಟೆಡ್ ಫ್ರಂಟ್

1996ರ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ಇಲ್ಲದಾದಾಗ ಹೆಚ್ಚು ಸ್ಥಾನಗಳನ್ನು ಪಡೆದಿದ್ದ ಬಿಜೆಪಿಯನ್ನು ಸರ್ಕಾರ ರಚನೆಗೆ ಆಹ್ವಾನಿಸಲಾಯಿತು. ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದರೂ, ಬಹುಮತ ಸಾಬೀತುಪಡಿಸಲಾಗದೆ ಎರಡೇ ವಾರಗಳಲ್ಲಿ ರಾಜೀನಾಮೆ ನೀಡಬೇಕಾಯಿತು.

ಆಗ ಎರಡನೇ ಅತಿ ದೊಡ್ಡ ಪಕ್ಷವಾಗಿದ್ದ ಕಾಂಗ್ರೆಸ್, ಸರ್ಕಾರ ರಚನೆಗೆ ಮುಂದಾಗಲಿಲ್ಲ. ಬದಲಿಗೆ 13 ಪಕ್ಷಗಳ ಒಕ್ಕೂಟವಾಗಿದ್ದ 'ಯುನೈಟೆಡ್ ಫ್ರಂಟ್'ಗೆ ಬಾಹ್ಯ ಬೆಂಬಲ ನೀಡಲು ನಿರ್ಧರಿಸಿತು. 1996ರ ಜೂನ್ 1ರಂದು ಎಚ್‌. ಡಿ. ದೇವೇಗೌಡ ಅವರು ಪ್ರಧಾನಿಯಾದರು.

ಈ ಸರ್ಕಾರವೂ ಹೆಚ್ಚು ಕಾಲ ಬಾಳಲಿಲ್ಲ. ದೇವೇಗೌಡರ ನೇತೃತ್ವದ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಕಾಂಗ್ರೆಸ್ ವಿವಿಧ ರಾಜಕೀಯ ಕಾರಣಗಳಿಗಾಗಿ ಹಿಂಪಡೆಯಿತು. 1997ರ ಏಪ್ರಿಲ್‌ನಲ್ಲಿ ದೇವೇಗೌಡರೂ ಪ್ರಧಾನಿ ಹುದ್ದೆಯಿಂದ ಇಳಿಯಬೇಕಾಯಿತು.

ದೇವೇಗೌಡರ ನಂತರ ಪ್ರಧಾನಿ ಯಾರಾಗಬೇಕು ಎಂಬ ವಿಚಾರದಲ್ಲಿ ಮುಲಾಯಂ ಸಿಂಗ್ ಯಾದವ್ ಹಾಗೂ ಲಾಲು ಪ್ರಸಾದ್ ಮಧ್ಯೆ ಭಿನ್ನಾಭಿಪ್ರಾಯಗಳು ಮೂಡಿದ್ದವು. ಮಾತುಕತೆಯ ಮೂಲಕ ಎಲ್ಲವನ್ನೂ ಸರಿಪಡಿಸಿಕೊಂಡು, ಐ.ಕೆ. ಗುಜ್ರಾಲ್ ಅವರನ್ನು ನಾಯಕನಾಗಿ ಆಯ್ಕೆ ಮಾಡಲಾಯಿತು. 1997ರ ಏಪ್ರಿಲ್ 21ರಂದು ಗುಜ್ರಾಲ್ ಪ್ರಮಾಣವಚನ ಸ್ವೀಕರಿಸಿದರು. ಈ ಸರ್ಕಾರಕ್ಕೂ ಕಾಂಗ್ರೆಸ್ ಬಾಹ್ಯ ಬೆಂಬಲ ನೀಡಿತ್ತು.

ಆದರೆ, ರಾಜೀವ್ ಗಾಂಧಿ ಹತ್ಯೆಯ ತನಿಖೆ ನಡೆಸುತ್ತಿದ್ದ ಜೈನ್ ಆಯೋಗವು, ತಮಿಳುನಾಡಿನಲ್ಲಿ ಕರುಣಾನಿಧಿ ನೇತೃತ್ವದ ಡಿಎಂಕೆಯು ಎಲ್‌ಟಿಟಿಇಗೆ ಮುಕ್ತ ಸ್ವಾತಂತ್ರ್ಯ ನೀಡುತ್ತಿದೆ ಎಂದು ಆರೋಪಿಸಿತು. ಡಿಎಂಕೆ ವಿರುದ್ಧ ಕ್ರಮ ಕೈಗೊಳ್ಳುವಂತೆ ಕಾಂಗ್ರೆಸ್ ಒತ್ತಾಯಿಸಲು ಆರಂಭಿಸಿತ್ತು. ಗುಜ್ರಾಲ್ ಇದಕ್ಕೆ ಸಿದ್ಧರಿರಲಿಲ್ಲ. ನವೆಂಬರ್ 28ರಂದು ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಕಾಂಗ್ರೆಸ್ ಹಿಂಪಡೆಯಿತು.

ಒಗ್ಗಟ್ಟಿಗೆ ಅಡ್ಡಿಯಾದ ಒಮ್ಮತದ ಕೊರತೆ

ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಹೊರಗಿಟ್ಟ ತೃತೀಯ ರಂಗವನ್ನು ರಚಿಸುವ ಯತ್ನಗಳು 2014ರ ನಂತರ ಪದೇ ಪದೇ ನಡೆದಿವೆ. ಆದರೆ ಯಾವ ಪ್ರಯತ್ನವೂ ಯಶ ಕಂಡಿಲ್ಲ. ಕಾಂಗ್ರೆಸ್ ನೇತೃತ್ವದ ಯುಪಿಎ ಒಕ್ಕೂಟವನ್ನು ಸೇರಿಕೊಂಡು ಬಿಜೆಪಿ ನೇತೃತ್ವದ ಎನ್‌ಡಿಎಯನ್ನು ಎದುರಿಸುವ ಬಗ್ಗೆ ಯಾವ ಪ್ರಾದೇಶಿಕ ಪಕ್ಷದಲ್ಲೂ ಆಸಕ್ತಿ ಇಲ್ಲ. ಹೀಗಾಗಿ 2014ರ ನಂತರ ದೇಶದ ವಿವಿಧ ರಾಜ್ಯಗಳಲ್ಲಿ ಕಾಂಗ್ರೆಸ್ ಅನ್ನು ಒಕ್ಕೂಟದ ಕಿರಿಯ ಮಿತ್ರಪಕ್ಷವಾಗಿ ಮಾತ್ರ ಪರಿಗಣಿಸಲಾಗಿದೆ. ಈ ಸಲುವಾಗಿಯೇ ಪ್ರಾದೇಶಿಕ ಪಕ್ಷಗಳೆಲ್ಲವೂ ಒಟ್ಟಿಗೆ ಸೇರಿ, ತೃತೀಯ ರಂಗ ರಚಿಸುವ ಮಾತು ಬಾರಿಬಾರಿ ಕೇಳಿಬಂದಿದೆ. ಆಗಾಗ ಶಕ್ತಿಪ್ರದರ್ಶನ ನಡೆದಿರುವುದು ಬಿಟ್ಟರೆ ಯಾವುದೂ ಕಾರ್ಯರೂಪಕ್ಕೆ ಬಂದಿಲ್ಲ.

2018ರ ಮಾರ್ಚ್‌ನಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರು ಬಿಜೆಪಿ ವಿರುದ್ಧ ಒಗ್ಗಟ್ಟಾಗುವಂತೆ ಎಲ್ಲಾ ವಿರೋಧ ಪಕ್ಷಗಳಿಗೆ ಕರೆ ನೀಡಿದ್ದರು. ಈ ಇಬ್ಬರೂ ನಾಯಕರು ಕೋಲ್ಕತ್ತಾದಲ್ಲಿ ಸಭೆಯನ್ನೂ ನಡೆಸಿದ್ದರು. ಸಭೆಯ ನಂತರ ಕೆ.ಸಿ.ಆರ್ ಅವರು, 'ಕಾಂಗ್ರೆಸ್ ಅನ್ನು ಹೊರಗಿಟ್ಟು ಎನ್‌ಡಿಎಯೇತರ ಎಲ್ಲಾ ಪಕ್ಷಗಳೂ ಸೇರಿ ತೃತೀಯ ರಂಗವನ್ನು ರಚಿಸಿ ಬಿಜೆಪಿಯನ್ನು ಎದುರಿಸಬೇಕು' ಎಂದು ಕರೆ ನೀಡಿದ್ದರು. ಈ ಕರೆಗೆ ಮಮತಾ ಬ್ಯಾನರ್ಜಿ ಅವರೇ ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ. ನಂತರದ ದಿನಗಳಲ್ಲಿ ತೃತೀಯ ರಂಗವನ್ನು ರಚಿಸುವ ಪ್ರಯತ್ನವನ್ನು ಕೆ.ಸಿ.ಆರ್ ಅವರು ತ್ಯಜಿಸಿದರು.

2018ರ ಮೇನಲ್ಲಿ ಕರ್ನಾಟಕದಲ್ಲಿ ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ರಚನೆಯಾಯಿತು. ಎಚ್‌.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಕಾರ್ಯಕ್ರಮಕ್ಕೆ ಎನ್‌ಡಿಎಯೇತರ ಎಲ್ಲಾ ಪಕ್ಷಗಳ ಪ್ರಮುಖರನ್ನು ಆಹ್ವಾನಿಸಲಾಗಿತ್ತು. ಕಾಂಗ್ರೆಸ್‌ನ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಸಿಪಿಎಂನ ಸೀತಾರಾಂ ಯೆಚೂರಿ, ಟಿಎಂಸಿಯ ಮಮತಾ ಬ್ಯಾನರ್ಜಿ, ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್, ಬಿಎಸ್‌ಪಿಯ ಮಾಯಾವತಿ, ಟಿಡಿಪಿಯ ಚಂದ್ರಬಾಬು ನಾಯ್ಡು, ಆರ್‌ಜೆಡಿಯ ತೇಜಸ್ವಿ ಯಾದವ್ ಮತ್ತಿತರರು ಈ ಸಮಾರಂಭದಲ್ಲಿ ಭಾಗಿಯಾಗಿದ್ದರು. ಇದು ಬಿಜೆಪಿ ಮತ್ತು ಎನ್‌ಡಿಎ ವಿರುದ್ಧದ ಒಕ್ಕೂಟದ ಬಲ ಪ್ರದರ್ಶನ ಎಂದೇ ಬಿಂಬಿಸಲಾಗಿತ್ತು. ಆದರೆ ಈ ಒಗ್ಗಟ್ಟು 2019ರ ಲೋಕಸಭಾ ಚುನಾವಣೆವರೆಗೆ ಉಳಿಯಲಿಲ್ಲ.

2019ರ ಲೋಕಸಭಾ ಚುನಾವಣೆಗೂ ಮುನ್ನ ಕೋಲ್ಕತ್ತಾದಲ್ಲಿ ಮತ್ತೊಮ್ಮೆ ತೃತೀಯ ರಂಗದ ಬಲ ಪ್ರದರ್ಶನ ನಡೆಯಿತು. ಮಮತಾ ಬ್ಯಾನರ್ಜಿ ಅವರು ಕರೆ ನೀಡಿದ್ದ ಈ ಒಕ್ಕೂಟ ರಂಗದ ರ‍್ಯಾಲಿಯಲ್ಲಿ ಎನ್‌ಡಿಎಯೇತರ ಪಕ್ಷಗಳ ನಾಯಕರು ಭಾಗಿಯಾಗಿದ್ದರು. ಸೀತಾರಾಂ ಯೆಚೂರಿ, ಅಖಿಲೇಶ್ ಯಾದವ್, ಮಾಯಾವತಿ, ಚಂದ್ರಬಾಬು ನಾಯ್ಡು, ತೇಜಸ್ವಿ ಯಾದವ್, ಕೆ.ಸಿ.ಆರ್., ಚಂದ್ರಬಾಬು ನಾಯ್ಡು, ಡಿಎಂಕೆಯ ಎಂ.ಕೆ.ಸ್ಟಾಲಿನ್, ಎನ್‌ಸಿಪಿಯ ಶರದ್ ಪವಾರ್, ಎನ್‌ಸಿಯ ಫಾರೂಕ್ ಅಬ್ದುಲ್ಲಾ, ಜೆಎಂಎಂನ ಹೇಮಂತ್ ಸೊರೇನ್, ಎಎಪಿಯ ಅರವಿಂದ ಕೇಜ್ರಿವಾಲ್, ಶರದ್ ಯಾದವ್ ಸರಿದಂತೆ ಎಲ್ಲರೂ ರ‍್ಯಾಲಿ ನಡೆಸಿದ್ದರು. ಕಾಂಗ್ರೆಸ್ ಪರವಾಗಿ ಸಂಸದ ಮಲ್ಲಿಕಾರ್ಜುನ ಖರ್ಗೆ ಭಾಗಿಯಾಗಿದ್ದರು.

ಈ ಒಕ್ಕೂಟ ರಂಗವು ಅಸ್ತಿತ್ವಕ್ಕೆ ಬರುವ ಮುನ್ನವೇ, ಮುಂದಿನ ಪ್ರಧಾನಿ ಯಾರಾಗಬೇಕು ಎಂಬ ಚರ್ಚೆ ಉದ್ಭವಿಸಿತು. ಇದು ಪೈಪೋಟಿಯಾಗಿ ಬದಲಾಯಿತು. ರಾಹುಲ್ ಗಾಂಧಿ, ಶರದ್ ಪವಾರ್, ಮಾಯಾವತಿ, ಮಮತಾ ಬ್ಯಾನರ್ಜಿ ಎಲ್ಲರೂ ಪ್ರಧಾನಿಯಾಗುವ ಇಂಗಿತ ವ್ಯಕ್ತಪಡಿಸಿದರು. ಈ ವಿಚಾರದಲ್ಲಿ ಒಮ್ಮತ ಮೂಡದೆ ಒಕ್ಕೂಟ ರಂಗವೇ ವಿಸರ್ಜನೆಯಾಯಿತು. ಚುನಾವಣೆಯಲ್ಲಿ ಬಿಜೆಪಿ ಭಾರಿ ಬಲದೊಂದಿಗೆ ಗೆದ್ದು, ಮತ್ತೆ ಸರ್ಕಾರ ರಚಿಸಿತು.


ಗುಪ್ಕಾರ್ ಕೂಟದ ಸದಸ್ಯರು ಶ್ರೀನಗರದಲ್ಲಿ ಮಂಗಳವಾರ ಸಭೆ ನಡೆಸಿದರು –ಪಿಟಿಐ ಚಿತ್ರ

ಕಾಶ್ಮೀರ: ಗುಪ್ಕಾರ್ ಸಭೆಯಲ್ಲಿ ತೀರ್ಮಾನ

ವಿಶೇಷ ಸ್ಥಾನ ಮರುಸ್ಥಾಪನೆ ಒತ್ತಾಯಕ್ಕೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಶ್ರೀನಗರ: 'ಜಮ್ಮು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಮರುಸ್ಥಾಪಿಸದ ಹೊರತು ಕಣಿವೆಯಲ್ಲಿ ಶಾಂತಿ ಸ್ಥಾಪನೆ ಸಾಧ್ಯವಿಲ್ಲ' ಎಂದು ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಹೇಳಿದ್ದಾರೆ.

ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಅವರ ನಿವಾಸದಲ್ಲಿ ನಡೆದ ಗುಪ್ಕಾರ್ ಕೂಟದ ಪಕ್ಷಗಳ ಸಭೆಯ ನಂತರ ಮಾಧ್ಯಮಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ನಮ್ಮಿಂದ ಕಿತ್ತುಕೊಂಡಿರುವ ಜಮ್ಮು ಕಾಶ್ಮೀರ ವಿಶೇಷ ಸ್ಥಾನಮಾನ ಮರು ಸ್ಥಾಪಿಸುವಂತೆ ಪ್ರಧಾನಿ ನೇತೃತ್ವದ ಸಭೆಯಲ್ಲಿ ಒತ್ತಾಯಿಸುತ್ತೇನೆ' ಎಂದು ಹೇಳಿದರು.

'ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಲು ಕೇಂದ್ರ ಸರ್ಕಾರವು ಪಾಕಿಸ್ತಾನ ಸೇರಿದಂತೆ ಎಲ್ಲರೊಂದಿಗೂ ಮಾತುಕತೆ ನಡೆಸಬೇಕು. ಅವರು (ಭಾರತ) ದೋಹಾದ ತಾಲಿಬಾನ್ ಜೊತೆ ಮಾತನಾಡುತ್ತಿದ್ದಾರೆ. ಅದರಂತೆ ಕಾಶ್ಮೀರ ಸಮಸ್ಯೆಯ ಪರಿಹಾರಕ್ಕಾಗಿ ಜಮ್ಮು ಮತ್ತು ಕಾಶ್ಮೀರದ ಜನರೊಂದಿಗೆ ಮತ್ತು ಪಾಕಿಸ್ತಾನದೊಂದಿಗೆ ಮಾತನಾಡಬೇಕು' ಎಂದರು.

ಕೇಂದ್ರದೊಂದಿಗೆ ಮಾತುಕತೆಯನ್ನು ತಮ್ಮ ಪಕ್ಷ ಎಂದಿಗೂ ವಿರೋಧಿಸಿಲ್ಲ.

ಗುಪ್ಕಾರ್ ಪ್ರತಿಪಾದನೆಗಳು

- ತಾಲಿಬಾನಿಗಳ ಜೊತೆ ಮಾತುಕತೆ ಸಾಧ್ಯವಿದ್ದರೆ ಪಾಕಿಸ್ತಾನದ ಜೊತೆ ಏಕಿಲ್ಲ
- ಸಮಸ್ಯೆ ಬಗೆಹರಿಸಲು ಕಾಶ್ಮೀರಿಗಳು ಮತ್ತು ಪಾಕಿಸ್ತಾನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ
- ಕೋವಿಡ್‌ನಿಂದ ದೇಶದಲ್ಲಿ ಕೈದಿಗಳನ್ನು ಬಿಡುಗಡೆ ಮಾಡಿದಂತೆ ಕಾಶ್ಮೀರದಲ್ಲೂ ಮಾಡಿ

ಕೋವಿಡ್ ಕಾರಣದಿಂದಾಗಿ ದೇಶದ ಇತರ ಭಾಗಗಳಲ್ಲಿ ಮಾಡಿರುವಂತೆ, ಕಾಶ್ಮೀರದಲ್ಲಿಯೂ ಕೈದಿಗಳನ್ನು ಬಿಡುಗಡೆ ಮಾಡಬೇಕು. ಜನರ ಆತ್ಮವಿಶ್ವಾಸ ಹೆಚ್ಚಿಸುವ ಇಂತಹ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಕಳೆದ ಎರಡು ವರ್ಷಗಳಲ್ಲಿ ತುಂಬಾ ಅವಮಾನಕ್ಕೊಳಗಾಗಿರುವ ರಾಜಕೀಯ ಪಕ್ಷಗಳು ಹಾಗೂ ಜನರ ವಿಶ್ವಾಸ ಗಳಿಸಬೇಕಾದರೆ, ಕೇಂದ್ರವು ರಾಜಕೀಯ ಕೈದಿಗಳು ಮತ್ತು ಇತರ ಬಂಧಿತರನ್ನು ಬಿಡುಗಡೆ ಮಾಡಬೇಕಾಗಿತ್ತು ಎಂದು ಮೆಹಬೂಬಾ ಹೇಳಿದರು.

ಬಿಜೆಪಿ ಸ್ವಾಗತ

ಜಮ್ಮು: ಪ್ರಧಾನಿ ನೇತೃತ್ವದ ಸಭೆಯಲ್ಲಿ ಭಾಗವಹಿಸಲು ಗುಪ್ಕಾರ್ ಕೂಟ ತೆಗೆದುಕೊಂಡಿರುವ ನಿರ್ಧಾರವನ್ನು ಜಮ್ಮು ಕಾಶ್ಮೀರ ಬಿಜೆಪಿ ಘಟಕದ ಮುಖ್ಯಸ್ಥ ರವೀಂದರ್ ರೈನಾ ಸ್ವಾಗತಿಸಿದ್ದಾರೆ.

'ನಾವೆಲ್ಲರೂ ರಾಷ್ಟ್ರದ ಹಿತದೃಷ್ಟಿಯಿಂದ ಒಂದಾಗಬೇಕು ಮತ್ತು 'ಏಕ ಭಾರತ ಶ್ರೇಷ್ಠ ಭಾರತ'ಕ್ಕಾಗಿ ಕೆಲಸ ಮಾಡಬೇಕಿದೆ' ಎಂದು ಅವರು ಹೇಳಿದ್ದಾರೆ.

ಸಮಸ್ಯೆಗಳನ್ನು ಬಗೆಹರಿಸುವ ಮತ್ತು ವಂಚಿತ ಸಮುದಾಯಗಳಿಗೆ ನ್ಯಾಯ ಒದಗಿಸುವ ಮೂಲಕ ಜಮ್ಮು ಮತ್ತು ಕಾಶ್ಮೀರದ ಅಭಿವೃದ್ಧಿಗೆ ಸದಾ ಚಿಂತಿಸುವ ಪ್ರಧಾನಿಯ ನಿಲುವನ್ನು ರೈನಾ ಶ್ಲಾಘಿಸಿದ್ದಾರೆ.

ಸಭೆಯ ಕಾರ್ಯಸೂಚಿ ಏನು ಎಂದು ಕೇಂದ್ರ ಸರ್ಕಾರ ತಿಳಿಸಿಲ್ಲ. ಹೀಗಾಗಿ ನಾವು ಯಾವ ವಿಷಯದ ಬಗ್ಗೆಯೂ ಮಾತನಾಡಬಹುದು

ಫಾರೂಕ್ ಅಬ್ದುಲ್ಲಾ, ಗುಪ್ಕಾರ್ ಮುಖ್ಯಸ್ಥ

ನಾವು ನಕ್ಷತ್ರಗಳನ್ನು ಕೇಳುತ್ತಿಲ್ಲ. ನಮ್ಮದನ್ನು ನಾವು ಕೇಳುತ್ತಿದ್ದೇವೆ. ಪ್ರಸ್ತಾವ ಕಾಶ್ಮೀರದ ಜನರ ಹಿತಕ್ಕೆ ಅನುಗುಣವಾಗಿದ್ದರೆ, ಒಪ್ಪುತ್ತೇವೆ

ಎಂ.ವೈ. ತಾರಿಗಾಮಿ, ಸಿಪಿಎಂ ಮುಖ್ಯಸ್ಥ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'**ಪಶ್ಚಿಮ ಬಂಗಾಳದಲ್ಲಿ** ಈಚೆಗೆ ನಡೆದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಹುದ್ದೆ ನೇಮಕಾತಿಯಲ್ಲಿ ಬಹುತೇಕ ಮುಸ್ಲಿಮರೇ ಆಯ್ಕೆಯಾಗಿದ್ದಾರೆ. ಈ ಪಟ್ಟಿಯನ್ನು ನೋಡಿ, ಆಯ್ಕೆಯಾದ ಮೊದಲ 50 ಮಂದಿ ಮುಸ್ಲಿಮರೇ ಆಗಿದ್ದಾರೆ' ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಈ ಪೋಸ್ಟ್ ಜತೆಗೆ ಆಯ್ಕೆ ಪಟ್ಟಿಯನ್ನೂ ಹಂಚಿಕೊಳ್ಳಲಾಗಿದೆ. 'ಮಮತಾ ಬ್ಯಾನರ್ಜಿ ಅವರು ಪಶ್ಚಿಮ ಬಂಗಾಳದಲ್ಲಿ ಮಿನಿ ಪಾಕಿಸ್ತಾನವನ್ನು ಸೃಷ್ಟಿಸಲು ಮುಂದಾಗಿದ್ದಾರೆ. ಹಿಂದೂಗಳಿಗೆ ಅಲ್ಲಿ ಉಳಿಗಾಲವಿಲ್ಲ' ಎಂದು ಕೆಲವರು ಕಳವಳ ವ್ಯಕ್ತಪಡಿಸಿದ್ದಾರೆ. ಇನ್ನೂ ಕೆಲವರು, 'ಮಮತಾ ಬ್ಯಾನರ್ಜಿ ಅವರು ಇಲ್ಲಿ ಮಿನಿ ಬಾಂಗ್ಲಾದೇಶ ಸೃಷ್ಟಿಸಲು ಹೊರಟಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸಚಿವ ಪೀಯೂಷ್ ಗೋಯೆಲ್ ಅವರು ಫೇಸ್‌ಬುಕ್‌ನಲ್ಲಿ ಫಾಲೊ ಮಾಡುತ್ತಿರುವ ಅತುಲ್ ಅಹುಜಾ ಅವರೂ ಈ ಇದನ್ನು ಟ್ವೀಟ್ ಮಾಡಿದ್ದಾರೆ.

ಇದು ಸುಳ್ಳು ಸುದ್ದಿ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ವೈರಲ್ ಆಗಿರುವ ಪೋಸ್ಟ್‌ಗಳಲ್ಲಿ ಇರುವ ಚಿತ್ರದಲ್ಲೇ ಆಯ್ಕೆಪಟ್ಟಿಗೆ ಸಂಬಂಧಿಸಿದ ವಿವರ ಇದೆ. ಇದು ಒಬಿಸಿ-ಎ ಕ್ಯಾಟಗರಿಯಲ್ಲಿ (ಇತರೆ ಹಿಂದುಳಿದ ವರ್ಗ-ಎ ವರ್ಗ) ಆಯ್ಕೆಯಾದವರ ವಿವರ ಎಂದು ಆ ಪಟ್ಟಿಯ ಆರಂಭದಲ್ಲೇ ಸ್ಪಷ್ಟವಾಗಿ ನಮೂದಿಸಲಾಗಿದೆ. ಇದನ್ನು ತಪ್ಪು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗಿದೆ. ಈ ಆಯ್ಕೆ ಪ್ರಕ್ರಿಯೆಯಲ್ಲಿ ಸಾಮಾನ್ಯ ವರ್ಗದಲ್ಲಿ 366, ಒಬಿಸಿ-ಎ ವರ್ಗದಲ್ಲಿ 112 ಮಂದಿ, ಒಬಿಸಿ-ಬಿ ವರ್ಗದಲ್ಲಿ 58 ಮಂದಿ, ಪರಿಶಿಷ್ಟ ಜಾತಿಯ 147 ಮತ್ತು ಪರಿಶಿಷ್ಟ ಪಂಗಡದ 40 ಮಂದಿ ಆಯ್ಕೆಯಾಗಿದ್ದಾರೆ. ಮುಸ್ಲಿಮರು ಒಬಿಸಿ-ಎ ವರ್ಗದಲ್ಲಿ ಆಯ್ಕೆಯಾಗಿದ್ದಾರೆ' ಎಂದು ಆಲ್ಟ್‌ನ್ಯೂಸ್ ವಿವರಿಸಿದೆ.

ಗುಂಡಣ್ಣ



ದಿನ ಭವಿಷ್ಯ

ಬುಧವಾರ ಜೂನ್ 23, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಆರ್ದ್ರೆ ಚತುರ್ದಶಿ ಗಂ. 51-34 (ರಾ. 2-40) ಬುಧವಾರ ನಿತ್ಯ ನಕ್ಷತ್ರ ಅನೂರಾಧ ಗಂ. 11-52 (ಹ. 10-47) ಸಾಧ್ಯ ನಾಮ ಯೋಗ ಗಂ. 8-36 ಗರಜ ಕರಣ ಗಂ. 24-37 ವಿಷ ಗಂ. 24-56 ಅಮೃತ ಗಂ. 47-19 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 5-58 ಸೂರ್ಯಾಸ್ತ: 6-44 ಅದೃಷ್ಟ ಸಂಖ್ಯೆ 3, 7

ಮೇಷ: ಕೆಲಸ ಕಾರ್ಯಗಳು ನಿರೀಕ್ಷೆಯಂತೆ ನಡೆಯಲಿವೆ. ಹಣದ ವಿಚಾರದಲ್ಲಿ ಉಂಟಾದ ಮನಸ್ತಾಪಗಳು ದೂರವಾಗಿ ನಿರಾಳತೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಮುನ್ನಡೆ. ಮನರಂಜನೆ ವಸ್ತು ಖರೀದಿ ಸಾಧ್ಯತೆ.

ವೃಷಭ: ಕೃಷಿ ಕೆಲಸಕಾರ್ಯಗಳಿಗೆ ಕೊಂಚಮಟ್ಟಿನ ಹಿನ್ನಡೆ. ವ್ಯಾಪಾರಿಗಳಿಗೆ ಗ್ರಾಹಕರೊಂದಿಗಿನ ಮನಸ್ತಾಪ ಸಂಭವ. ಆರೋಗ್ಯದಲ್ಲಿ ವ್ಯತ್ಯಯ. ಅಹಿತಕರ ಸುದ್ದಿ ಕೇಳಬೇಕಾದೀತು. ಶಿವ ಅಷ್ಟೋತ್ತರ ಪಠಿಸಿ.

ಮಿಥುನ: ಕೆಲಸಗಳು ಸರಾಗವಾಗಿ ನಡೆಯುವವು. ವ್ಯಾಪಾರದಲ್ಲಿ ಲಾಭ ವೃದ್ಧಿ. ಹಿರಿಯರೊಂದಿಗೆ ಸಮಾಲೋಚನೆ. ಸಂತಸದ ಸುದ್ದಿ. ವಿರೋಧಿಗಳಿಂದ ಒತ್ತಡ ಅನುಭವಿಸುವ ಸಾಧ್ಯತೆ.

ಕರ್ಕಾಟಕ: ಆಪ್ತರ ಸಲಹೆಯಂತೆ ನಿರೀಕ್ಷಿತ ಕೆಲಸ ಕಾರ್ಯಗಳಲ್ಲಿ ಯಶಸ್ಸು. ಕ್ರಯ ವಿಕ್ರಯ ಒಪ್ಪಂದದ ವ್ಯವಹಾರಗಳಿಂದ ವಿಶೇಷ ಲಾಭ. ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುವ ಅವಕಾಶ.

ಸಿಂಹ: ಕುಟುಂಬದಲ್ಲಿ ಏಕಾಭಿಪ್ರಾಯದಿಂದ ಕಾರ್ಯನಿರ್ವಹಣೆ. ಉದ್ಯೋಗದಲ್ಲಿ ಉನ್ನತಿ. ಆಪ್ತರ ಆಗಮನ ಸಾಧ್ಯತೆ. ಸಂತಸದ ವಾರ್ತೆ ಕೇಳಿಬರಲಿದೆ. ಕ್ರೀಡಾಳುಗಳಿಗೆ ಸಾಧನೆಗೆ ಉತ್ತಮ ಅವಕಾಶ.

ಕನ್ಯಾ: ಅತಿಯಾದ ಕಾರ್ಯಬಾಹುಳ್ಯದಿಂದಾಗಿ ಒತ್ತಡ. ಉದ್ವಿಗ್ನತೆಯಿಂದಾಗಿ ಕೆಲಸ ಕಾರ್ಯಗಳಲ್ಲಿ ಹಿನ್ನಡೆ. ವ್ಯಾಪಾರಸ್ಥರಿಗೆ ಹಾನಿ ಉಂಟಾಗಬಹುದು. ಗಾಯದ ಸಮಸ್ಯೆಯಿಂದ ಬಳಲುವ ಸಾಧ್ಯತೆ.

ತುಲಾ: ತಡೆಯಿಲ್ಲದೆ ಸಾಗುವ ಕೆಲಸ ಕಾರ್ಯಗಳು. ಪ್ರಿಯವಾದ ಸುದ್ದಿಯನ್ನೊಳಗೊಂಡ ಪತ್ರವು ಕೈ ಸೇರುವ ಸಾಧ್ಯತೆ. ಲೇವಾದೇವಿದಾರರಿಗೆ ಹೆಚ್ಚಿನ ಲಾಭ. ಪ್ರೀತಿಪಾತ್ರರ ಭೇಟಿಯ ಸಂಭವ. ಅನಾವಶ್ಯಕ ಖರ್ಚು ಭರಿಸಬೇಕಾದೀತು.

ವೃಶ್ಚಿಕ: ಕೆಲಸ–ಕಾರ್ಯಗಳಲ್ಲಿ ಯಶಸ್ಸು. ಮಾನಸಿಕ ಮತ್ತು ಸಾಂಸಾರಿಕ ನೆಮ್ಮದಿ. ವ್ಯಾಪಾರದಲ್ಲಿ ಲಾಭ ನಿರೀಕ್ಷೆ. ಹೋರಾಟಗಳಲ್ಲಿ ಗೆಲುವು. ವಾಹನಗಳಿಂದ ಉತ್ತಮ ಪ್ರತಿಫಲ. ಆಪ್ತರ ಆಗಮನ ನಿರೀಕ್ಷೆ.

ಧನು: ಉದ್ಯೋಗ, ವೃತ್ತಿಗಳಲ್ಲಿ ಪ್ರಗತಿ ಅಥವಾ ಪದೋನ್ನತಿ ಸಾಧ್ಯತೆ. ಅಧ್ಯಯನದಲ್ಲಿ ಆಸಕ್ತಿ ಮೂಡಿ ವಿದ್ಯಾರ್ಥಿಗಳಿಗೆ ಶುಭ ತರಲಿದೆ. ಆತ್ಮೀಯರ ಭೇಟಿ ಸಂಭವ. ಸಂಘ ಸಂಸ್ಥೆಗಳಿಂದ ಸಹಾಯ ಒದಗಿಬರಲಿದೆ.

ಮಕರ: ಅನಾವಶ್ಯಕ ಖರ್ಚು ಮತ್ತು ಭಯ. ಕೆಲಸಗಳಲ್ಲಿ ಹಿನ್ನಡೆ. ಲೇವಾದೇವಿ ವ್ಯವಹಾರ ಬೇಡವೇ ಬೇಡ. ಮಾಡಿದ ತಪ್ಪುಗಳು ಅರಿವಾಗಿ ಪಶ್ಚಾತ್ತಾಪ ಪಡಬೇಕಾದೀತು. ಬಾಕಿ ಇರುವ ಹಣ ವಸೂಲಾಗುವ ಸಾಧ್ಯತೆ.

ಕುಂಭ: ಖರ್ಚು ವೆಚ್ಚಗಳಲ್ಲಿ ನಿಯಂತ್ರಣ ಸಾಧಿಸುವಿರಿ. ಮಾನಸಿಕ ಶಾಂತಿ ನೆಲೆಸುವುದು. ಹಿತೈಷಿಗಳೊಂದಿಗೆ ಸಮಾಲೋಚನೆ, ವಿಶೇಷ ಸುದ್ದಿಯನ್ನು ಕೇಳಲಿದ್ದೀರಿ. ಅನ್ಯರಿಂದ ಮೋಸಹೋಗುವ ಸಾಧ್ಯತೆ.

ಮೀನ: ಸಮಯಕ್ಕೆ ಸರಿಯಾಗಿ ಕೆಲಸಕಾರ್ಯಗಳು ಸಾಗದೇ ಚಿಂತೆಗೊಳಗಾಗುವ ಸಾಧ್ಯತೆ. ನಿರೀಕ್ಷಿತ ಸುದ್ದಿಗಳಲ್ಲಿ ವಿಳಂಬ. ವ್ಯವಹಾರಗಳಲ್ಲಿ ಸ್ವಲ್ಪಮಟ್ಟಿನ ಲಾಭದ ನಿರೀಕ್ಷೆ. ಅನಾವಶ್ಯಕ ಪ್ರಯಾಣ. ಉದ್ಯೋಗದಲ್ಲಿ ಪ್ರಗತಿ.

ನಿಮ್ಮ ಜನ್ಮದಿನ 23-ಜೂನ್ ಈ ದಿನ ಅತ್ಯಂತ ಶುಭಕರ. ವೃತ್ತಿಜೀವನದಲ್ಲಿ ಕೆಲಸ ಕಾರ್ಯಗಳು ಸರಾಗವಾಗಿ ನಡೆದು ಸಂತಸ ನೀಡುವುದು. ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿದವರಿಗೆ ಉತ್ತಮ ಫಲ ದೊರಕುವುದು. ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ಏರುಪೇರು ಸಾಧ್ಯತೆ. ವಾಹನಗಳಿಂದಾಗಿ ಸಣ್ಣಪುಟ್ಟ ನೋವುಗಳನ್ನು ಅನುಭವಿಸಬೇಕಾದೀತು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಆತ್ಮ ವಿಸ್ತರಣೆ

ಕೊಳದಿ ನೀಂ ಮೀವಂದು ತೆರೆಯೆದ್ದು ಹರಡುತ್ತೆ |
ವಲಯವಲಯಗಳಾಗಿ ಸಾರುವುದು ದಡಕೆ ||
ಅಲೆಗಳಾ ತೆರದಿ ನಿನ್ನಾತ್ಮದಿಂ ಪರಿಪರಿದು |
ಕಲೆತುಕೊಳ್ಳಲಿ ಜಗದಿ - ಮಂಕುತಿಮ್ಮ || 431 ||

ಪದ-ಅರ್ಥ: ಮೀವಂದು = ಸ್ನಾನ ಮಾಡುವಾಗ, ಪರಿಪರಿದು = ಹರಿದು, ಕಲೆತುಕೊಳ್ಳಲಿ = ಬೆರೆಯಲಿ.

ವಾಚ್ಯಾರ್ಥ: ಕೊಳದಲ್ಲಿ ಸ್ನಾನ ಮಾಡುವಾಗ ವ್ಯಕ್ತಿಯಿಂದ ಹೊರಟ ತೆರೆಗಳು ಎಲ್ಲೆಡೆಗೆ, ವಲಯ, ವಲಯಗಳಾಗಿ ಹರಿದು ದಂಡೆಯನ್ನು ಸೇರುತ್ತವೆ. ಆ ಅಲೆಗಳ ರೀತಿಯಲ್ಲಿಯೇ ನಿನ್ನ ಆತ್ಮವೂ ಸರ್ವದಿಕ್ಕುಗಳಲ್ಲಿ ಹರಡಿ ವಿಶ್ವದಲ್ಲಿ ಬೆರೆತುಕೊಳ್ಳಲಿ.

ವಿವರಣೆ: ವಿಶ್ವದಲ್ಲಿರುವ ಸುಮಾರು ಏಳುನೂರು ಕೋಟಿ ಜನರಲ್ಲಿ ಒಬ್ಬರೂ ಮತ್ತೊಬ್ಬರಂತಿಲ್ಲ. ಕೆಲವರು ನೋಡಲು ಒಂದೇ ತೆರನಿದ್ದರೂ, ಬುದ್ಧಿ ಬೇರೆ. ನಮ್ಮ ಕೈ ಬೆರಳುಗಳ ತುದಿಯಲ್ಲಿರುವ ಗೆರೆಗಳು ಪ್ರಪಂಚದ ಉಳಿದ ಯಾವುದೇ ಮನುಷ್ಯನ ಕೈಬೆರಳುಗಳಿಗೆ ಹೊಂದುವುದಿಲ್ಲವೆಂಬುದು ಆಶ್ಚರ್ಯವಲ್ಲವೆ? ಅದೇ ಪ್ರತಿಯೊಬ್ಬ ವ್ಯಕ್ತಿಯ ವಿಶೇಷತೆ. ಅದೇ 'ವ್ಯಕ್ತಿ-ತ್ವ'. ತ್ವ-ಎಂದರೆ ಯಾವ ವಿಶೇಷತೆಯಿಂದ ಅದು ಅದಾಗಿಯೇ ಉಳಿದಿದೆಯೋ ಅದು. ಪ್ರತಿಯೊಬ್ಬ ವ್ಯಕ್ತಿ ವಿಶೇಷವಾಗಿರಲೆಂದು ಪ್ರಕೃತಿ ಮಾಡಿದ ಏರ್ಪಾಡು ಅದು. ಈ ವ್ಯಕ್ತಿತ್ವ ಅರಳಬೇಕು. ಅದೇ ವಿಕಸನ. ಅದು ವ್ಯಕ್ತಿಯಿಂದ ಪ್ರಾರಂಭವಾಗಿ ಏಳು ಸುತ್ತಿನ ಮಲ್ಲಿಗೆಯಂತೆ ಅರಳುತ್ತ ಬರಬೇಕು. ಈ ಅರಳುವಿಕೆಗೆ ಕಾರಣವಾಗುವವು ಮೂರು ಪ್ರಭಾವಗಳು - ಸಂಸ್ಕಾರ, ಪರಿಸರ ಮತ್ತು ಶಿಕ್ಷಣ.

ಇವು ಸರಿಯಾದ ಸಮಯದಲ್ಲಿ, ಸರಿಯಾದ ಪ್ರಮಾಣದಲ್ಲಿ ವ್ಯಕ್ತಿಗೆ ದೊರೆತಾಗ ವ್ಯಕ್ತಿತ್ವ ವಿಕಸನವಾಗುತ್ತದೆ. ಈ ವಿಕಸನ ಕ್ರಿಯೆ ಮುಖ್ಯವಾಗಿ ನಾಲ್ಕು ಬಗೆಗಳಲ್ಲಿ ಆಗುತ್ತದೆ. ಅವುಗಳನ್ನು ಭೌತಿಕ, ಬೌದ್ಧಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಎಂದು ಗುರುತಿಸುತ್ತಾರೆ. ಮೊದಲು ಪ್ರಾರಂಭವಾಗುವುದು ಶರೀರದಿಂದ. ಪ್ರಕೃತಿ ನಮಗೆ ಕೊಡಮಾಡಿರುವ ಅದ್ಭುತ ಕೊಡುಗೆ ಶರೀರ. ಧೃಡವಾದ ಶರೀರದಲ್ಲಿ ಮಾತ್ರ ಧೃಡವಾದ ಮನಸ್ಸು ಇರುವುದು. ಅದಕ್ಕೆ ಸರಿಯಾದ, ಪ್ರಮಾಣಬುದ್ಧವಾದ ಆಹಾರ, ವ್ಯಾಯಾಮ, ಪ್ರಾಣಾಯಾಮ, ವಿಶ್ರಾಂತಿ ಬೇಕು. ಇವು ದೇಹವನ್ನು ಯುದ್ಧಕ್ಕೆ ಸನ್ನದ್ಧವಾದ ಕುದುರೆಯಂತೆ ಸುಸ್ಥಿತಿಯಲ್ಲಿಡುತ್ತವೆ. ದೇಹಶಕ್ತಿಯೊಂದಿಗೆ ಬುದ್ಧಿಶಕ್ತಿಯೂ ಬೆಳೆಯಬೇಕು. ಅದಕ್ಕೆ ಶಿಸ್ತುಬದ್ಧವಾದ ಅಧ್ಯಯನ, ಪ್ರಪಂಚ ಪ್ರವಾಸ, ಧನಾತ್ಮಕ ಚಿಂತನೆಗಳು ಮುಖ್ಯ. ದೇಹ, ಬುದ್ಧಿಗಳ ಜೊತೆಗೆ ಭಾವನೆಗಳ ಪರಿಪಾಕವಾಗಬೇಕು. ತನ್ನ ಪರಿವಾರದವರ, ತನ್ನ ಜೊತೆಯವರ, ದೇಶವಾಸಿಗಳ ಮತ್ತು ಪ್ರಪಂಚದ ಎಲ್ಲರ ಬಗ್ಗೆ ಸರಿಯಾದ ಭಾವನೆಗಳನ್ನು, ಅಂತಃಕರಣವನ್ನು, ಪ್ರೇಮವನ್ನು ಬೆಳೆಸಿಕೊಳ್ಳುವುದು ಮುಖ್ಯ. ಇವೆಲ್ಲ ಹಂತಗಳ ನಂತರ ಆಧ್ಯಾತ್ಮಿಕ ಚಿಂತನೆ ಬೆಳೆಯಬೇಕು. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಆಧ್ಯಾತ್ಮಿಕ ಅಂಶವಿದೆ. ಅದು ಜಾತಿ, ಮತ, ಭಾಷೆ, ದೇಶವನ್ನು ಮೀರಿದ್ದು. ಆಧ್ಯಾತ್ಮಿಕತೆ ಬೆಳೆದಂತೆ ಬದುಕು ವಿಸ್ತಾರವಾಗಿ ಮೌಲ್ಯಪ್ರಧಾನವಾಗುತ್ತದೆ.

ಕಗ್ಗ ಅದನ್ನು ಮನಮುಟ್ಟುವಂತೆ ಹೇಳುತ್ತದೆ. ಕೊಳದಲ್ಲಿ ಅಲೆಗಳು ಕೇಂದ್ರದಿಂದ ಹೊರಟು ಅಲೆಅಲೆಯಾಗಿ ದಡವನ್ನು ಸೇರುವಂತೆ, ವ್ಯಕ್ತಿತ್ವದ ವಿಕಸನದಿಂದ ವ್ಯಕ್ತಿಯ ಆತ್ಮಶಕ್ತಿ ಎಲ್ಲೆಡೆಗೆ ಹರಿದು ವಿಶ್ವದಲ್ಲಿ ಬೆರೆತುಹೋಗಬೇಕು. ಅದೇ ಬದುಕಿನ ಸ್ವಾರಸ್ಯ ಮತ್ತು ಸಾರ್ಥಕ್ಯ.


ಪದಬಂಧ 4636 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಉತ್ಕಟೇಚ್ಛೆಯನ್ನು ಹೀಗೆ ಹೇಳಿ (3)
6.ಗಡಿಯ ಕೊನೆಯಲ್ಲಿ ಹೂಡಿದ ವಂಚನೆ! (5)
7.ಜನರ ಹತ್ತಿರದಲ್ಲೇ ಕಳೆದ ರಾತ್ರಿ! (3)
10.ಮನಸ್ಸು ಬದಲಾಗುವಿಕೆ (5)
15.ಮನ್ಮಥನಿಂದ ಶುರುವಾದ ಆಸೆ (3)
16.ಯಾರಿಗೂ ಕಾಣದಂತೆ ಪ್ರವಹಿಸುವುದು (5)
17.ನರನ ಜಿಹ್ವೆ ಇಲ್ಲಿದೆ (3)

ಮೇಲಿಂದ ಕೆಳಕ್ಕೆ

1.ಆ ಭರಣಿಯಲ್ಲಿರುವ ನಗ (4)
2.ಕೋರೆಗಳನ್ನುಳ್ಳದ್ದು (3)
3.ಏಳು ಲೋಕಗಳಲ್ಲಿ ಇದೊಂದು (3)
4.ಪ್ರಸೂತಿ ತಜ್ಞೆ ಮಾಡಿದ ಶಪಥ! (3)
5.ಎಡಬಿಡದೆ ಸುರಿವ ಮಳೆ (4)
8.ಪ್ರಶ್ನೆಗೆ ಪೂರಕವಾಗಿ ಹೇಳುವ ಜವಾಬು (3)
9.ಗಾಬರಿ ಅಥವಾ ತಳಮಳ (3)
11.ಅವನ ಕೆಟ್ಟಗುಣವಿದು (4)
12.ಮನದೊಳಗಿರುವ ಕುಲ (4)
13.ಬರಬೇಕಾದ ವಸ್ತುವಿಗೆ ಒತ್ತಾಯ ಮಾಡುವುದು (3)
14.ಗಾಳಿ ಇಲ್ಲಿದೆ (3)
15.ಕುತೂಹಲಭರಿತ ಆತುರ (3)



4635ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮರ್ಮ 3.ಜ್ಞಾನಿ 5.ಹಸ್ತಲಾಘವ 6.ಗಡವ 7.ಜಳಕ 8.ದಳ್ಳಾಳಿತನ 9.ಪ್ರಧಾನ 10.ನಾಸ್ತಿಕ 13.ಕೂಪಮಂಡೂಕ 14.ನಗ್ನ 15.ಮಬ್ಬು

ಮೇಲಿಂದ ಕೆಳಕ್ಕೆ: 1.ಮಲರೋಗ 2.ಆಲಾಪ 4.ನಿರರ್ಥಕ 5.ಹಯವದನ 7.ಜನನಾಯಕ 9.ಪ್ರಹಸನ 11.ಕಲಗಚ್ಚು 12.ಸಾಮಂತ

ಸುಡೊಕು 5022

4			3		8			2
	7						8	
9					2			6
							6	
	2	6	9		7			
	4		6		1		7	5
			1					7
8		7					9	1
1	9		8		6	4		3

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5021 ಸುಡೊಕು

1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2

‘ಟಾಯ್‌ಕಥಾನ್–2021’ರ ಸ್ಪರ್ಧಿಗಳ ಜತೆ ಪ್ರಧಾನಿ ಸಂವಾದ

ನವದೆಹಲಿ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಅವರು ‘ಟಾಯ್ ಕಥಾನ್–2021’ರ ಸ್ಪರ್ಧಾಳುಗಳೊಂದಿಗೆ ಗುರುವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಸಂವಾದ ನಡೆಸಲಿದ್ದಾರೆ’ ಎಂದು ಪ್ರಧಾನಿ ಕಚೇರಿ ತಿಳಿಸಿದೆ.


‘ಶ್ವೇತಪತ್ರ’ ಬಿಡುಗಡೆ ಮಾಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ; ಬಿಜೆಪಿ ಟೀಕಾಪ್ರಹಾರ

ಕೇಂದ್ರದ ಕೋವಿಡ್ ನಿರ್ವಹಣೆ ‘ವಿನಾಶಕಾರಿ’

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಕೋವಿಡ್ ನಿರ್ವಹಣೆ ಕುರಿತು ಕಾಂಗ್ರೆಸ್ ಮಂಗಳವಾರ ‘ಶ್ವೇತ ಪತ್ರ’ ಬಿಡುಗಡೆ ಮಾಡಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಇದನ್ನು ಬಿಡುಗಡೆ ಮಾಡಿದ್ದು, ಮೂರನೇ ಅಲೆಯನ್ನು ಸಮರ್ಪಕವಾಗಿ ಎದುರಿಸಲು ಸೂಕ್ತ ಸಿದ್ಧತೆ ಮಾಡಿಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾರೆ.

‘ಕೋವಿಡ್‌’ನ ಮೊದಲ ಮತ್ತು ಎರಡನೇ ಅಲೆ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ನಿರ್ವಹಣೆ ‘ವಿನಾಶಕಾರಿ’ಯಾಗಿರುವುದು ಸ್ಪಷ್ಟವಾಗಿದೆ. ಅದು ಯಾವ ರೀತಿ ವಿನಾಶಕಾರಿಯಾಗಿದೆ, ಸರ್ಕಾರ ಎಲ್ಲೆಲ್ಲಿ ಎಡವಿದೆ, ಎಂಬುದನ್ನು ಈ ಶ್ವೇತಪತ್ರದಲ್ಲಿ ಎತ್ತಿ ತೋರಿಸಲು ಪ್ರಯತ್ನಿಸಿದ್ದೇವೆ‘ ಎಂದು ರಾಹುಲ್ ಗಾಂಧಿ ಹೇಳಿದರು.

ಕೋವಿಡ್ ನಿರ್ವಹಣೆಯಲ್ಲಿ ಏನು ತಪ್ಪಾಗಿದೆ ಎಂಬುದರ ಕುರಿತು ಸರ್ಕಾರಕ್ಕೆ ಮಾಹಿತಿ ಮತ್ತು ಒಳನೋಟಗಳನ್ನು ಒದಗಿಸುವುದು ನಮ್ಮ ಉದ್ದೇಶ ಎಂದು ಹೇಳಿದ ರಾಹುಲ್, ‘ಸರ್ಕಾರದತ್ತ ಬೊಟ್ಟು ಮಾಡಿ ತೋರಿಸುವುದಷ್ಟೇ ನಮ್ಮ ಉದ್ದೇಶವಲ್ಲ. ಹಿಂದೆ ಆಗಿರುವ ತಪ್ಪುಗಳನ್ನು ಸರಿಪಡಿಸಿಕೊಂಡು, ಮೂರನೇ ಅಲೆ ಎದುರಿಸಲು ಸಿದ್ಧವಾಗಲು ಸಹಾಯ ಮಾಡುವುದು ಈ ಶ್ವೇತಪತ್ರದ ಉದ್ದೇಶವಾಗಿದೆ‘ ಎಂದು ಹೇಳಿದರು.



ರಾಹುಲ್ ಗಾಂಧಿ

ಕೋವಿಡ್ ವಿರುದ್ಧ ಹೋರಾಡುವುದಕ್ಕಿರುವ ಏಕೈಕ ಪ್ರಮುಖ ಅಸ್ತ್ರ ಲಸಿಕೆ ಎಂದು ಪ್ರತಿಪಾದಿಸಿದ ಅವರು, ‘ಸಾಧ್ಯವಾದಷ್ಟು ಬೇಗ ಶೇ 100 ರಷ್ಟು ಲಸಿಕೆ ಗುರಿಯನ್ನು ತಲುಪಬೇಕು‘ ಎಂದು ಒತ್ತಾಯಿಸಿದರು.

ಕೋವಿಡ್ 19 ಲಸಿಕೆ ನೀಡುವ ವಿಚಾರದಲ್ಲಿ ಕೇಂದ್ರ ಸರ್ಕಾರ ಪಕ್ಷಪಾತ ಮಾಡದೆ ಎಲ್ಲ ರಾಜ್ಯಗಳನ್ನು ಸಮವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದರು.

‘ಕೋವಿಡ್ ಪರಿಸ್ಥಿತಿ ಬಳಸಿ ರಾಹುಲ್‌ಗಾಂಧಿ ರಾಜಕಾರಣ’

ನವದೆಹಲಿ (ಪಿಟಿಐ): ಕೋವಿಡ್–19ನಿಂದಾಗಿ ದೇಶದಲ್ಲಿ ಕಂಡುಬಂದ ಸಂಕಷ್ಟ ಪರಿಸ್ಥಿತಿ ಬಳಸಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ರಾಜಕಾರಣ ಮಾಡುತ್ತಿದ್ದಾರೆ ಎಂದು ಬಿಜೆಪಿ ಮಂಗಳವಾರ ಟೀಕಿಸಿದೆ.

ಕೇಂದ್ರ ಸರ್ಕಾರ ಕೋವಿಡ್ ಪಿಡುಗನ್ನು ನಿರ್ವಹಣೆ ಮಾಡಿದ ಬಗ್ಗೆ ಕಾಂಗ್ರೆಸ್ ಪಕ್ಷ ‘ಶ್ವೇತಪತ್ರ’ ಬಿಡುಗಡೆ ಮಾಡಿದ ಬೆನ್ನಲ್ಲೇ, ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ಟೀಕಾಪ್ರಹಾರ ಮಾಡಿದೆ.

‘ಶ್ವೇತ ಪತ್ರ’ ಬಿಡುಗಡೆ ಮಾಡಿ ಮಾತನಾಡಿದ ರಾಹುಲ್ ಗಾಂಧಿ, ‘ಕೋವಿಡ್–19ನ ಒಂದು ಮತ್ತು ಎರಡನೇ ಅಲೆಯನ್ನು ಕೇಂದ್ರ ಸರ್ಕಾರ ಸರಿಯಾಗಿ ನಿರ್ವಹಣೆ ಮಾಡಲಿಲ್ಲ. ಹೀಗಾಗಿ ಪಿಡುಗಿನ ಈ ಎರಡೂ ಅಲೆಗಳು ವಿನಾಶಕಾರಿಯಾಗಿ ಪರಿಣಮಿಸಿವೆ’ ಎಂದು ಟೀಕಿಸಿದರು.



ಸಂಬಿತ್ ಪಾತ್ರಾ

ಈ ದಾಖಲೆ ಬಿಡುಗಡೆಗೊಂಡ ಕೆಲ ಗಂಟೆಗಳ ನಂತರ ಪತ್ರಿಕಾಗೋಷ್ಠಿ ನಡೆಸಿದ ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ, ‘ಕೋವಿಡ್ ವಿರುದ್ಧದ ಹೋರಾಟದಲ್ಲಿ ಏನಾದರೂ ಉತ್ತಮ ಸಾಧನೆ ಕಂಡು ಬಂದರೆ, ಅದಕ್ಕೆ ಕಳಂಕ ತರುವ ಕೆಲಸವನ್ನು ಕಾಂಗ್ರೆಸ್ ಹಾಗೂ ವಿಶೇಷವಾಗಿ ರಾಹುಲ್ ಗಾಂಧಿ ಅವರಿಂದಾಗುತ್ತದೆ. ಅವರಿಂದ ಇಂಥ ಪ್ರತಿಕ್ರಿಯೆ ಬರುವ ಬಗ್ಗೆ ನಿನ್ನೆಯೇ ನಮ್ಮಲ್ಲಿ ಶಂಕೆ ಮೂಡಿತ್ತು’ ಎಂದರು.

‘ಸೋಮವಾರ ನಮಗೆ ಮಹತ್ವದ ದಿನ. ವಿಶ್ವದಲ್ಲಿ ಒಂದೇ ದಿನದಲ್ಲಿ ಕೋವಿಡ್ ಲಸಿಕೆಯ 87 ಲಕ್ಷ ಡೋಸ್‌ಗಳನ್ನು ನೀಡಿದ ದೇಶ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಯಿತು. ಜನರೂ ಈ ಸಾಧನೆಯನ್ನು ಸಂಭ್ರಮಿಸಿದರು. ಆದರೆ, ಇಂದು ರಾಹುಲ್ ಗಾಂಧಿ ಅವರು ಶ್ವೇತಪತ್ರ ಬಿಡುಗಡೆ ಮಾಡಿ, ಈ ಸಂಭ್ರಮ ಕಸಿಯುವ ಪ್ರಯತ್ನ ಮಾಡಿದ್ದಾರೆ’ ಎಂದು ಪಾತ್ರಾ ಟೀಕಿಸಿದರು.

‘ದೇಶದಲ್ಲಿ ಕೋವಿಡ್–19 ವಿರುದ್ಧದ ಹೋರಾಟ ಆರಂಭವಾದಾಗಿನಿಂದಲೂ ಕಾಂಗ್ರೆಸ್, ಸರ್ಕಾರದ ಪ್ರತಿ ನಡೆ ಪ್ರಶ್ನಿಸುತ್ತಾ ಬಂದಿದೆ’ ಎಂದೂ ಹೇಳಿದರು.

ಲಸಿಕೆ ಹಾಕಿಸಿಕೊಳ್ಳದಿದ್ದರೆ ಬಂಧನ: ಫಿಲಿಪ್ಪೀನ್ಸ್ ಅಧ್ಯಕ್ಷ

ಸಿಂಗಪುರ (ಪಿಟಿಐ): ಕೋವಿಡ್ 19 ಸಾಂಕ್ರಾಮಿಕ ರೋಗದ ಎರಡನೇ ಅಲೆ ಫಿಲಿಪ್ಪೀನ್ಸ್‌ಗೆ ಹಾನಿಕಾರಕವಾಗಲಿದೆ ಎಂದು ಎಚ್ಚರಿಸಿರುವ ಫಿಲಿಪ್ಪೀನ್ಸ್ ಅಧ್ಯಕ್ಷ ರೊಡ್ರಿಗೋ ಡುಟರ್ಟೆ ಅವರು, ಕೋವಿಡ್ 19 ಲಸಿಕೆ ಹಾಕಿಸಿಕೊಳ್ಳದ ಫಿಲಿಪಿನೋಗಳನ್ನು ಬಂಧಿಸುವುದಾಗಿ ಬೆದರಿಕೆ ಹಾಕಿದ್ದಾರೆ.



ರೊಡ್ರಿಗೋ ಡುಟರ್ಟೆ

ಲಸಿಕೆ ಹಾಕಿಸಿಕೊಳ್ಳದವರು ದೇಶ ತೊರೆಯಲು ಸೂಚಿಸಿರುವ ಅವರು, ‘ಭಾರತ, ಅಮೆರಿಕ ಅಥವಾ ನಿಮಗೆ ಬೇಕಾದ ಕಡೆಗೆ ಹೋಗಬಹುದು’ ಎಂದು ಕಠಿಣ ಸಂದೇಶ ನೀಡಿದ್ದಾರೆ.

‘ದೇಶವು ರಾಷ್ಟ್ರೀಯ ತುರ್ತು ಪರಿಸ್ಥಿತಿ ಎದುರಿಸುತ್ತಿದೆ. ದೇಶದಲ್ಲಿ ಕೊರೊನಾ ವೈರಸ್ ಇರುವುದರಿಂದ ನಾವು ನಮ್ಮ ಪ್ರಯತ್ನಗಳನ್ನು ಮೂರು ಪಟ್ಟು ಹೆಚ್ಚಿಸಬೇಕು’ ಎಂದು ಡುಟರ್ಟೆ ಹೇಳಿರುವುದಾಗಿ ಮನಿಲಾದ ಮಾಧ್ಯಮ ವರದಿಗಳು ತಿಳಿಸಿವೆ. ಈ ಭಾಷಣ ಸೋಮವಾರ ದೂರದರ್ಶನದ ಮೂಲಕ ಸಾರ್ವಜನಿಕರನ್ನು ಉದ್ದೇಶಿಸಿ ಮಾಡಿರುವುದಾಗಿದೆ ಎಂದು ವರದಿಗಳು ಹೇಳಿವೆ.

‘ನನ್ನನ್ನು ತಪ್ಪಾಗಿ ಭಾವಿಸಬೇಡಿ. ಈ ದೇಶದಲ್ಲಿ ಬಿಕ್ಕಟ್ಟು ಎದುರಾಗಿದೆ. ರಾಷ್ಟ್ರೀಯ ತುರ್ತು ಪರಿಸ್ಥಿತಿಯೂ ಇದೆ. ನೀವು ಲಸಿಕೆ ಪಡೆಯಲು ಬಯಸದಿದ್ದರೆ, ನಾನು ನಿಮ್ಮನ್ನು ಬಂಧಿಸುವೆ. ಅಲ್ಲದೆ ನಿಮ್ಮ ರಟ್ಟೆಗೆ ನಾನೇ ಲಸಿಕೆ ಚುಚ್ಚುತ್ತೇನೆ. ನೀವು ಕೀಟಗಳಿದ್ದಂತೆ. ನಾವು ಈಗಾಗಲೇ ತೊಂದರೆಯಲ್ಲಿದ್ದು, ನೀವು ಅದರ ಹೊರೆಯನ್ನು ಇನ್ನಷ್ಟು ಹೆಚ್ಚಿಸುತ್ತಿದ್ದೀರಿ’ ಎಂದು ಡುಟರ್ಟೆ ಹೇಳಿರುವುದಾಗಿ ಇನ್‌ಕ್ವೈರರ್ ಡಾಟ್ ನೆಟ್ ವರದಿ ಮಾಡಿದೆ.

ಕೋವಿಡ್ ಲಸಿಕೆ ಸುರಕ್ಷಿತವಲ್ಲ ಎನ್ನುವ ಭಯದಿಂದಾಗಿ ಫಿಲಿಪ್ಪೀನ್ಸ್ ದೇಶದಲ್ಲಿ ಅರ್ಧಕ್ಕೂ ಹೆಚ್ಚು ಜನರು ಲಸಿಕೆ ಪಡೆಯಲು ಸಿದ್ಧರಿಲ್ಲವೆಂಬ ಅಧ್ಯಯನ ವರದಿಯನ್ನು ಸ್ಥಳೀಯ ಮಾಧ್ಯಮಗಳು ಉಲ್ಲೇಖಿಸಿವೆ.



ಪ್ರತಿಭಟನೆ... ಮುಂಬೈನಲ್ಲಿ ಮಂಗಳವಾರ ಜೆಜೆ ಆಸ್ಪತ್ರೆಯ ನರ್ಸ್‌ಗಳು 7ನೇ ವೇತನ ಆಯೋಗದ ಶಿಫಾರಸುಗಳನ್ನು ಅನುಷ್ಠಾನಗೊಳಿಸುವಂತೆ ಒತ್ತಾಯಿಸಿ ಘೋಷಣೆ ಕೂಗಿದರು ಪಿಟಿಐ ಚಿತ್ರ

‘ರಾಜ್ಯಗಳಿಗೆ ಲಸಿಕೆ ಪೂರೈಕೆ ಬಾಕಿ ಇಲ್ಲ’

ನವದೆಹಲಿ (ಪಿಟಿಐ): ರಾಜ್ಯಗಳಿಗೆ ಪೂರೈಸಬೇಕಾಗಿದ್ದ ನಿಗದಿತ ಪ್ರಮಾಣದ ಕೋವಿಡ್–19 ನಿರೋಧಕ ಲಸಿಕೆಗಳನ್ನು ಜೂನ್ 21ರೊಳಗೆ ಸರಬರಾಜು ಮಾಡಲಾಗಿದ್ದು, ಯಾವುದೇ ಬಾಕಿ ಉಳಿದಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಮಂಗಳವಾರ ತಿಳಿಸಿದೆ.

18 ವರ್ಷದಿಂದ 44 ವರ್ಷದೊಳಗಿನ ವಯಸ್ಸಿನವರಿಗೆ ಉಚಿತ ಲಸಿಕೆಗಳನ್ನು ಹಾಕಲು ದೆಹಲಿಗೆ ಕೇಂದ್ರ ಸರ್ಕಾರವು ಲಸಿಕೆ ಸರಬರಾಜು ಮಾಡಿಲ್ಲ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿದ್ದವು. ಇದರ ಬೆನ್ನಲ್ಲೇ ಆರೋಗ್ಯ ಸಚಿವಾಲಯವು ತನ್ನ ಹೇಳಿಕೆಯನ್ನು ಬಿಡುಗಡೆ ಮಾಡಿದೆ.

ಜೂನ್ 21ರೊಳಗೆ ಲಸಿಕಾ ತಯಾರಿಕಾ ಸಂಸ್ಥೆಗಳು ನೇರ ಖರೀದಿಯ ಮೂಲಕ ದೆಹಲಿಗೆ 5.6 ಲಕ್ಷ ಡೋಸ್‌ಗಳನ್ನು ಪೂರೈಸಿವೆ ಎಂದೂ ಸಚಿವಾಲಯವು ಸ್ಪಷ್ಟಪಡಿಸಿದೆ.

ಕೇಂದ್ರ ಸರ್ಕಾರವು ಖರೀದಿಸಿರುವ ಲಸಿಕೆಗಳಲ್ಲಿ ಹೆಚ್ಚುವರಿಯಾಗಿ 8.8 ಲಕ್ಷದಷ್ಟು ಲಸಿಕೆಗಳನ್ನು ದೆಹಲಿಗೆ ಉಚಿತವಾಗಿ ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ.

ಜೂನ್ ಅಂತ್ಯದ ವೇಳೆಗೆ ಅಷ್ಟೂ ಪ್ರಮಾಣದ ಲಸಿಕೆಗಳು ಪೂರೈಕೆಯಾಗಲಿವೆ. ಜೂನ್ 22ರ ವೇಳೆಗೆ ದೆಹಲಿಯಲ್ಲಿ 9.9ಲಕ್ಷಕ್ಕೂ ಹೆಚ್ಚಿನ ಲಸಿಕೆಗಳು ಬಳಕೆಯಾಗದೇ ಉಳಿದಿವೆ ಎಂದೂ ಸಚಿವಾಲಯವು ವಿವರಿಸಿದೆ.

ಕೋವಿಡ್: ಹೊಸ ಪ್ರಕರಣ 3,709ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 3,709 ಮಂದಿ ಕೋವಿಡ್ ಪೀಡಿತರಾಗಿರುವುದು ಮಂಗಳವಾರ ದೃಢಪಟ್ಟಿದೆ. ಇವು 84 ದಿನಗಳಲ್ಲಿ ಅವಧಿಯಲ್ಲಿ ವರದಿಯಾದ ಕನಿಷ್ಠ ಪ್ರಕರಣಗಳಾಗಿವೆ.

ಒಂದು ದಿನ ಅವಧಿಯಲ್ಲಿ 1.29 ಲಕ್ಷ ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 2.87ರಷ್ಟು ವರದಿಯಾಗಿದೆ. ಬೆಂಗಳೂರಿನಲ್ಲಿ 803 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500 ರ ಗಡಿಯೊಳಗೆ ವರದಿಯಾಗಿವೆ. 16 ಜಿಲ್ಲೆಗಳಲ್ಲಿ ಈ ಸಂಖ್ಯೆ ಎರಡಂಕಿಯಲ್ಲಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.15 ಲಕ್ಷ ದಾಟಿದೆ.

ಕೊರೊನಾ ಸೋಂಕಿತರಲ್ಲಿ 139 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮರಣ ಪ್ರಮಾಣ ದರವು ಶೇ 3.79ಕ್ಕೆ ಏರಿಕೆಯಾಗಿದೆ. ರಾಜ್ಯದ 23 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 26 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

ದಕ್ಷಿಣ ಕನ್ನಡದಲ್ಲಿ 15 ಮಂದಿ, ಮೈಸೂರಿನಲ್ಲಿ 11 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10 ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 34,164ಕ್ಕೆ ತಲುಪಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 1.18 ಲಕ್ಷಕ್ಕೆ ಇಳಿಕೆಯಾಗಿದೆ. ಸೋಂಕಿತರಲ್ಲಿ 8,111 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 26.62 ಲಕ್ಷ ದಾಟಿದೆ.

ಪರಿಹಾರ ಸಿಗದ ವರ್ಗಕ್ಕೆ ನೆರವು: ಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಾಕ್‌ಡೌನ್‌ನಿಂದ ಸಂಕಷ್ಟದಲ್ಲಿರುವ ಮತ್ತು ಈವರೆಗೂ ಪರಿಹಾರ ಸಿಗದ ವರ್ಗಗಳಿಗೆ ನೆರವು ನೀಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ ‘ಕೃಷ್ಣಾ’ದಲ್ಲಿ ಚಲನಚಿತ್ರ ಕಲಾವಿದರಿಗೆ ತಲಾ ₹3,000 ಆರ್ಥಿಕ ನೆರವು ನೀಡುವ ಯೋಜನೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಒಟ್ಟು 20 ಸಾವಿರಕ್ಕೂ ಹೆಚ್ಚು ಕಲಾವಿದರಿಗೆ ಡಿಬಿಟಿ ಮೂಲಕ ಒಟ್ಟು ₹6.23 ಕೋಟಿ ನೆರವು ನೀಡಲಾಗುವುದು. ಮೊದಲ ಅಲೆಯ ಸಂದರ್ಭದಲ್ಲಿಯೂ ಕಲಾವಿದರಿಗೆ ನೆರವು ನೀಡಲಾಗಿತ್ತು. ಈ ಬಾರಿಯೂ ಸರ್ಕಾರ ಅವರ ನೆರವಿಗೆ ಧಾವಿಸಿತ್ತು. ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಆಹ್ವಾನಿಸಿ, ಕಲಾವಿದರ ದಾಖಲೆಗಳನ್ನು ಪರಿಶೀಲಿಸಿ, ಅತ್ಯಂತ ಪಾರದರ್ಶಕವಾಗಿ ಮಂಜೂರು ನೀಡಲಾಗಿದೆ ಎಂದು ಹೇಳಿದರು.

ಕಲಾವಿದರು ಮುನ್ನೆಚ್ಚರಿಕೆಯ ಕ್ರಮಗಳನ್ನು ತಪ್ಪದೆ ಪಾಲಿಸಬೇಕು. ಜೊತೆಗೆ ಲಸಿಕೆಯನ್ನು ಸಹ ಸರ್ಕಾರ ಉಚಿತವಾಗಿ ನೀಡುತ್ತಿದ್ದು, ತಪ್ಪದೆ ಹಾಕಿಸಿಕೊಳ್ಳುವ ಮೂಲಕ ಆರೋಗ್ಯದ ಬಗ್ಗೆ ಕಾಳಜಿ ವಹಿಸುವಂತೆ ಮನವಿ ಮಾಡಿದರು.

ಕೋವಿಡ್ ಎರಡನೇ ಅಲೆಯಿಂದ ಸಂಕಷ್ಟಕ್ಕೆ ಸಿಲುಕಿದ ದುರ್ಬಲ ಮತ್ತು ಶ್ರಮಿಕ ವರ್ಗಕ್ಕೆ ಈವರೆಗೆ ₹2,050 ಕೋಟಿ ಮೊತ್ತದ ಆರ್ಥಿಕ ನೆರವಿನ ಪ್ಯಾಕೇಜ್ ಘೋಷಿಸಲಾಗಿದೆ. ಈಗಾಗಲೇ ಹೂವು, ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ, ಕಟ್ಟಡ ನಿರ್ಮಾಣ ಕಾರ್ಮಿಕರಿಗೆ, ಬೀದಿಬದಿ ವ್ಯಾಪಾರಿಗಳು ಮೊದಲಾದವರಿಗೆ ಡಿ.ಬಿ.ಟಿ ಮೂಲಕ ಆರ್ಥಿಕ ನೆರವನ್ನು ನೇರವಾಗಿ ಅವರ ಖಾತೆಗಳಿಗೆ ವರ್ಗಾಯಿಸಲಾಗಿದೆ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಹಾಗೂ ಅರಣ್ಯ ಸಚಿವ ಅರವಿಂದ ಲಿಂಬಾವಳಿ ಮಾತನಾಡಿ, ಮೊದಲ ಅಲೆಯ ಸಂದರ್ಭದಲ್ಲಿಯೂ 17 ಸಾವಿರಕ್ಕೂ ಹೆಚ್ಚು ಕಲಾವಿದರಿಗೆ ನೆರವು ನೀಡಲಾಗಿತ್ತು ಎಂದು ತಿಳಿಸಿದರು.

ಲಸಿಕೆ ಬಳಿಕ ಪದವಿ ತರಗತಿ

ಒಂದನೇ ಪುಟದಿಂದ

ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಆದ್ಯತೆಯ ಮೇಲೆ ಲಸಿಕೆ ನೀಡಬೇಕು. ಶಾಲೆ, ಕಾಲೇಜುಗಳಲ್ಲಿ ತರಗತಿ ಆರಂಭಿಸುವ ಪ್ರಕ್ರಿಯೆಯನ್ನು ಬಹು ಹಂತಗಳಲ್ಲಿ ಅನುಷ್ಠಾನಕ್ಕೆ ತರುವಂತೆ ಸಮಿತಿ ಶಿಫಾರಸು ಮಾಡಿದೆ. ಈ ಎಲ್ಲ ವಿಷಯಗಳ ಬಗ್ಗೆಯೂ ಚರ್ಚಿಸಿ, ತೀರ್ಮಾನಕ್ಕೆ ಬರಲಾಗುವುದು ಎಂದು ಹೇಳಿದರು.

ವಿಶೇಷ ಆಸ್ಪತ್ರೆಗಳ ಆರಂಭಕ್ಕೆ ಸಲಹೆ: ‘ಕೋವಿಡ್ ಮೂರನೇ ಅಲೆಯಲ್ಲಿ ಮಕ್ಕಳಿಗೆ ಹೆಚ್ಚಿನ ತೊಂದರೆ ಆಗಬಹುದು ಎಂಬ ಅಂದಾಜು ಇದೆ. ಈ ಕಾರಣಕ್ಕಾಗಿಯೇ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ವಿಶೇಷ ಆಸ್ಪತ್ರೆಗಳು, ಮಕ್ಕಳ ಚಿಕಿತ್ಸಾ ವಾರ್ಡ್‌ಗಳನ್ನು ಸಜ್ಜುಗೊಳಿಸುವಂತೆ ಸಮಿತಿ ಸಲಹೆ ನೀಡಿದೆ ಎಂದು ಯಡಿಯೂರಪ್ಪ ತಿಳಿಸಿದರು.

ಎಲ್ಲ ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳು, ವೈದ್ಯಕೀಯ ಕಾಲೇಜು ಆಸ್ಪತ್ರೆಗಳ ಮಕ್ಕಳ ಚಿಕಿತ್ಸಾ ವಿಭಾಗಗಳಲ್ಲಿ ಹೆಚ್ಚುವರಿಯಾಗಿ ‘ಹೈ ಡಿಪೆಂಡೆನ್ಸಿ’ ವಾರ್ಡ್, ಮಕ್ಕಳ ತೀವ್ರ ನಿಗಾ ಘಟಕಗಳನ್ನು ಆರಂಭಿಸುವಂತೆ ತಜ್ಞರ ಸಮಿತಿ ಶಿಫಾರಸು ಮಾಡಿದೆ. ಎಲ್ಲ ಆಸ್ಪತ್ರೆಗಳಲ್ಲೂ ಕೊರೊನಾ ವೈರಾಣು ಸೋಂಕಿತ ಮಕ್ಕಳಿಗೆ ಆತ್ಮಸ್ಥೈರ್ಯ ತುಂಬಲು ಮನೋವೈದ್ಯರನ್ನು ಒದಗಿಸಬೇಕು ಎಂಬ ಸಲಹೆಯನ್ನೂ ನೀಡಿದೆ.

ಅಪೌಷ್ಟಿಕತೆ ನಿವಾರಣೆಗೆ ಆದ್ಯತೆ ನೀಡಬೇಕು. ಆಮ್ಲಜನಕದ ಕೊರತೆ ನೀಗಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಕೋವಿಡ್ ನಂತರದ ದಿನಗಳಲ್ಲಿ ಎದುರಾಗುವ ಇತರ ಆರೋಗ್ಯದ ಸಮಸ್ಯೆಗಳು ಹಾಗೂ ಕೋವಿಡೇತರ ರೋಗಗಳ ಚಿಕಿತ್ಸೆಗೆ ಅಗತ್ಯ ವ್ಯವಸ್ಥೆ ಮಾಡಬೇಕು. ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಹೆಚ್ಚಿನ ಸೌಲಭ್ಯ ಕಲ್ಪಿಸಬೇಕು ಮತ್ತು ಮಕ್ಕಳ ಕೋವಿಡ್ ಪರೀಕ್ಷೆಗೆ ವಿಶೇಷ ವ್ಯವಸ್ಥೆ ಮಾಡಬೇಕು ಎಂಬ ಶಿಫಾರಸುಗಳು ವರದಿಯಲ್ಲಿವೆ.

ಖಾಸಗಿ ನೆರವು ಬಳಕೆಗೆ ಸಲಹೆ: ಕೋವಿಡ್ ಮೂರನೇ ಅಲೆ ನಿಯಂತ್ರಿಸುವ ಪ್ರಕ್ರಿಯೆಯಲ್ಲಿ ಕಾರ್ಪೊರೇಟ್ ವಲಯವೂ ಸೇರಿದಂತೆ ಖಾಸಗಿ ನೆರವನ್ನು ಸರ್ಕಾರ ಬಳಕೆ ಮಾಡಿಕೊಳ್ಳಬೇಕು. ಅಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲ ಮತ್ತು ಹಣಕಾಸಿನ ನೆರವನ್ನು ಬಳಸಿಕೊಳ್ಳಬೇಕು ಎಂದು ತಜ್ಞರ ಸಮಿತಿ ಸಲಹೆ ನೀಡಿದೆ.

ವೈದ್ಯರು, ನರ್ಸ್‌ಗಳು ಮತ್ತಿತರ ವೈದ್ಯಕೀಯ ಸಿಬ್ಬಂದಿಯ ಕೊರತೆಗೆ ಪರಿಹಾರ ಕಂಡುಕೊಳ್ಳಲು ವಿವಿಧ ವೈದ್ಯಕೀಯ ಸಂಘಟನೆಗಳ ಜತೆಗೂಡಿ ಕೆಲಸ ಮಾಡಬೇಕು. ಸರ್ಕಾರೇತರ ಸಂಸ್ಥೆಗಳನ್ನೂ ಈ ಕೆಲಸದಲ್ಲಿ ಬಳಸಿಕೊಳ್ಳಬೇಕು. ಸೋಂಕು ಹರಡುವುದನ್ನು ತಡೆಯುವ ದಿಸೆಯಲ್ಲಿ ಸಾರ್ವಜನಿಕರನ್ನೂ ಈ ಪ್ರಕ್ರಿಯೆಯಲ್ಲಿ ಜತೆಗೆ ಸೇರಿಸಿಕೊಳ್ಳಬೇಕು ಎಂದು ಸಮಿತಿ ಹೇಳಿದೆ.

‘ಶಾಲೆ ಆರಂಭ: ಸ್ಪಷ್ಟ ನಿರ್ಧಾರ ಅಗತ್ಯ’

ಬೆಂಗಳೂರು: ‘ಡಾ. ದೇವಿ ಪ್ರಸಾದ್ ಶೆಟ್ಟಿ ವರದಿ ಅಭಿಪ್ರಾಯದಂತೆ ಶಾಲೆಗಳನ್ನು ತೆರೆಯುವ ಬಗ್ಗೆ ರಾಜ್ಯ ಸರ್ಕಾರ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಬೇಕು’ ಎಂದು ಖಾಸಗಿ ಶಾಲಾಡಳಿತ ಮಂಡಳಿಗಳು ಶಿಕ್ಷಕ, ಶಿಕ್ಷಕೇತರ ಸಮನ್ವಯ ಸಮಿತಿಯ ಸಂಚಾಲಕ ಡಿ. ಶಶಿಕುಮಾರ್ ಒತ್ತಾಯಿಸಿದ್ದಾರೆ.

‘ಮಕ್ಕಳನ್ನು ನಿರಂತರ ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಶಾಲೆಗಳನ್ನು ಆರಂಭಿಸಲೇಬೇಕಿದೆ. ಈ ನಿಟ್ಟಿನಲ್ಲಿ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಅದಕ್ಕೂ ಮೊದಲು ಶಾಲೆಗೆ ಹೋಗುವ ಮಕ್ಕಳ ಪಾಲಕ–ಪೋಷಕರಿಗೆ, ಶಿಕ್ಷಕರಿಗೆ ಮತ್ತು ಶಿಕ್ಷಕೇತರ ಸಿಬ್ಬಂದಿಗೆ ಆದ್ಯತೆಯಲ್ಲಿ ಲಸಿಕೆ ನೀಡಬೇಕು. ಬಳಿಕ ಶಾಲೆ ಆರಂಭಿಸುವ ದಿನ ನಿಗದಿಪಡಿಸಬೇಕು’ ಎಂದು ಆಗ್ರಹಿಸಿದ್ದಾರೆ.



ಜುಲೈ ಮೊದಲ ವಾರದಲ್ಲಿ ರಾಜ್ಯದಾದ್ಯಂತ ಆಯಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ, ಉಪನ್ಯಾಸಕರು, ಶಿಕ್ಷಕರಿಗೂ ಲಸಿಕೆ ಹಾಕಿ, ಬಳಿಕ ಕಾಲೇಜು ಆರಂಭಿಸಲು ತೀರ್ಮಾನಿಸಲಾಗುವುದು

ಡಾ.ಸಿ.ಎನ್. ಅಶ್ವತ್ಥನಾರಾಯಣ, ಉನ್ನತ ಶಿಕ್ಷಣ ಸಚಿವ

ಕೌರ್ ಜಾತಿ ಪ್ರಮಾಣಪತ್ರ ರದ್ದು: ‘ಸುಪ್ರೀಂಕೋರ್ಟ್’ ತಡೆಯಾಜ್ಞೆ

ನವದೆಹಲಿ: ಮಹಾರಾಷ್ಟ್ರದ ಅಮರಾವತಿ ಲೋಕಸಭಾ ಕ್ಷೇತ್ರದ ಸಂಸದೆ ನವನೀತ್ ಕೌರ್ ರಾಣಾ ಅವರ ಪರಿಶಿಷ್ಟ ಜಾತಿ ಪ್ರಮಾಣಪತ್ರವನ್ನು ರದ್ದುಪಡಿಸುವ ಬಾಂಬೆ ಹೈಕೋರ್ಟ್‌ನ ಆದೇಶಕ್ಕೆ ಮಂಗಳವಾರ ಸುಪ್ರೀಂ ಕೋರ್ಟ್ ತಡೆ ನೀಡಿದೆ.

ಜೂನ್ 9ರಂದು ರಾಣಾ ಅವರ ಜಾತಿ ಪ್ರಮಾಣಪತ್ರವನ್ನು ಬಾಂಬೆ ಹೈಕೋರ್ಟ್ ರದ್ದುಗೊಳಿಸಿತ್ತು. ನಕಲಿ ದಾಖಲೆಗಳನ್ನು ಬಳಸಿ ಜಾತಿ ಪ್ರಮಾಣ ಪತ್ರವನ್ನು ಪಡೆಯಲಾಗಿದೆ ಎಂದು ಹೇಳಿದ್ದ ಹೈಕೋರ್ಟ್, ರಾಣಾ ಅವರಿಗೆ ₹ 2 ಲಕ್ಷ ದಂಡವನ್ನೂ ವಿಧಿಸಿತ್ತು.

ನ್ಯಾಯಮೂರ್ತಿಗಳಾದ ವಿನೀತ್ ಸರಣ್ ಮತ್ತು ದಿನೇಶ್ ಮಾಹೇಶ್ವರಿ ಅವರನ್ನೊಳಗೊಂಡ ರಜಾಪೀಠವು ತಡೆಯಾಜ್ಞೆ ನೀಡಿದೆ.

ನಾರದಾ ಪ್ರಕರಣ: ಮಮತಾ, ಘಟಕ್ ಅರ್ಜಿ ವಿಚಾರಣೆ 25ಕ್ಕೆ

ನವದೆಹಲಿ (ಪಿಟಿಐ): ‘ನಾರದಾ ಸ್ಟಿಂಗ್ ಆಪರೇಷನ್ ಟೇಪ್’ ಪ್ರಕರಣಕ್ಕೆ ಸಂಬಂಧಿಸಿ ಕಲ್ಕತ್ತ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಕಾನೂನು ಸಚಿವ ಮಲಯ್ ಘಟಕ್ ಅವರು ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಜೂನ್ 25ರಂದು ನಡೆಸಲು ಸುಪ್ರೀಂಕೋರ್ಟ್ ಮಂಗಳವಾರ ನಿರ್ಧರಿಸಿದೆ.

ಮಮತಾ ಬ್ಯಾನರ್ಜಿ, ಘಟಕ್ ಅವರ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತ ಹಾಗೂ ಅನಿರುದ್ಧ ಬೋಸ್ ಅವರಿರುವ ರಜಾಕಾಲದ ನ್ಯಾಯಪೀಠ ನಡೆಸಬೇಕಿತ್ತು. ಆದರೆ, ಅರ್ಜಿಗಳ ವಿಚಾರಣೆಯಿಂದ ಹಿಂದೆ ಸರಿಯುವುದಾಗಿ ನ್ಯಾಯಮೂರ್ತಿ ಬೋಸ್ ಪ್ರಕಟಿಸಿದರು.

ಹೀಗಾಗಿ, ಈ ವಿಷಯವನ್ನು ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ ಅವರ ಗಮನಕ್ಕೆ ತರಲಾಯಿತು. ನಂತರ ಅರ್ಜಿಗಳನ್ನು ನ್ಯಾಯಮೂರ್ತಿಗಳಾದ ವಿನೀತ್ ಸರನ್ ಹಾಗೂ ದಿನೇಶ್ ಮಾಹೇಶ್ವರಿ ಅವರಿರುವ ನ್ಯಾಯಪೀಠಕ್ಕೆ ವರ್ಗಾಯಿಸಲಾಯಿತು.


ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಅರ್ಜಿದಾರರ ಪರ ವಕೀಲರಾದ ರಾಕೇಶ್ ದ್ವಿವೇದಿ ಮತ್ತು ವಿಕಾಸ್ ಸಿಂಗ್ ಅವರ ಅಭಿಪ್ರಾಯವನ್ನು ಪಡೆದ ನ್ಯಾಯಪೀಠ, ಜೂನ್ 25ರಂದು ಅರ್ಜಿಗಳ ವಿಚಾರಣೆ ನಡೆಸುವುದಾಗಿ ಆದೇಶ ಹೊರಡಿಸಿತು.

‘ನಾರದಾ ಸ್ಟಿಂಗ್ ಆಪರೇಷನ್ ಟೇಪ್’ ಪ್ರಕರಣಕ್ಕೆ ಸಂಬಂಧಿಸಿ ನಾಲ್ವರು ಟಿಎಂಸಿ ಮುಖಂಡರನ್ನು ಮೇ 17ರಂದು ಸಿಬಿಐ ಅಧಿಕಾರಿಗಳು ಬಂಧಿಸಿದ್ದರು. ಈ ಮುಖಂಡರನ್ನು ಬಂಧಿಸಿದ ನಂತರ, ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಸಿಬಿಐಗೆ ಟಿಎಂಸಿ ಮುಖಂಡರು ಅಡ್ಡಿಪಡಿಸಿದ್ದರು ಎಂದು ಆರೋಪಿಸಲಾಗಿದೆ.

ನಂತರ, ಪ್ರಕರಣದ ವಿಚಾರಣೆಯನ್ನು ಸಿಬಿಐನ ವಿಶೇಷ ನ್ಯಾಯಾಲಯದಿಂದ ಹೈಕೋರ್ಟ್‌ಗೆ ವರ್ಗಾಯಿಸಬೇಕು ಎಂದು ಸಿಬಿಐ ಅರ್ಜಿ ಸಲ್ಲಿಸಿತ್ತು.

ತುರ್ತು ನೆರವು ಸಿಗದಿದ್ದರೆ ಉಳಿವು ಕಷ್ಟ: ಕಾಸಿಯಾ

ಪ್ರಜಾವಾಣಿ ವಾರ್ತೆ



ಕೆ.ಬಿ. ಅರಸಪ್ಪ


ಬೆಂಗಳೂರು: ಕಿರು, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ (ಎಂಎಸ್‌ಎಂಇ) ಕಾರ್ಯಾಚರಣೆ ವೆಚ್ಚ ಹೆಚ್ಚಾಗುತ್ತಿದ್ದು, 'ಇಂತಹ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರವು ವಿಶೇಷ ಆರ್ಥಿಕ ಕೊಡುಗೆ ನೀಡದಿದ್ದರೆ ಇವುಗಳಿಗೆ ಅಸ್ತಿತ್ವ ಉಳಿಸಿಕೊಳ್ಳುವುದೇ ಕಷ್ಟವಾಗಲಿದೆ' ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ) ಹೇಳಿದೆ.

ಸಣ್ಣ ಗಾತ್ರದ ಉದ್ದಿಮೆಗಳು ಬಳಸುವ ಕಚ್ಚಾಸಾಮಗ್ರಿಗಳ ದರವು ಒಂದು ವರ್ಷದಲ್ಲಿ ತೀವ್ರ ಏರಿಕೆ ಕಂಡಿದೆ. ಆದರೆ, ಉತ್ಪನ್ನಗಳನ್ನು ಖರೀದಿ ಮಾಡುವವರು ಈ ದರ ಏರಿಕೆಯ ಅಷ್ಟೂ ಹೊರೆ ಹೊತ್ತುಕೊಳ್ಳಲು ಸಿದ್ಧರಿಲ್ಲ. ಇದು ಕೈಗಾರಿಕೆಗಳನ್ನು ಸಂಕಷ್ಟಕ್ಕೆ ಸಿಲುಕಿಸಿದೆ ಎಂದು ಕಾಸಿಯಾ ಅಧ್ಯಕ್ಷ ಕೆ.ಬಿ. ಅರಸಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಕೋವಿಡ್ ರೋಗಿಗಳ ಚಿಕಿತ್ಸೆಗೆ ಆಮ್ಲಜನಕದ ಬೇಡಿಕೆ ಹೆಚ್ಚಾಗಿದ್ದರಿಂದ ಸರ್ಕಾರವು ಕೈಗಾರಿಕೆಗಳಿಗೆ ಆಮ್ಲಜನಕ ವಿತರಣೆಯನ್ನು ಗಣನೀಯವಾಗಿ ತಗ್ಗಿಸಿದೆ. ಪ್ರತಿ ದಿನವೂ 60 ಟನ್ ಆಮ್ಲಜನಕದ ಅಗತ್ಯವಿದೆ. ಆದರೆ, ಸಿಗುತ್ತಿರುವುದು 20 ಟನ್ ಮಾತ್ರ. ಖಾಸಗಿ ಪೂರೈಕೆದಾರರು ಪ್ರತಿ ಕೆ.ಜಿ. ಆಮ್ಲಜನಕದ ದರವನ್ನು ಶೇಕಡ 170ರಷ್ಟು ಏರಿಸಿದ್ದಾರೆ. ಮೊದಲು ಕೆ.ಜಿ.ಗೆ ₹ 15 ಇದ್ದ ದರವು ಈಗ ₹ 40 ಆಗಿದೆ. 'ಇದು ಸಣ್ಣ ಕೈಗಾರಿಕೆಗಳಿಗೆ ಸಮಸ್ಯೆ ತಂದೊಡ್ಡಿದೆ' ಎಂದು ಪೀಣ್ಯದಲ್ಲಿ ಮೆಟಲ್ ಕಟಿಂಗ್ ಮತ್ತು ಫ್ಯಾಬ್ರಿಕೇಷನ್ ಘಟಕ ಹೊಂದಿರುವ ಎಸ್.ಕೆ. ಷಣ್ಮುಖಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಉದ್ಯೋಗ ನಷ್ಟ: 'ಕೋವಿಡ್ ಸಾಂಕ್ರಾಮಿಕದ ಎರಡನೇ ಅಲೆಯಿಂದಾಗಿ ಅತಿಸಣ್ಣ ಮತ್ತು ಸಣ್ಣ ಪ್ರಮಾಣದ ಶೇಕಡ 25ರಿಂದ ಶೇ 30ರಷ್ಟು ಕೈಗಾರಿಕೆಗಳು ಸಂಪೂರ್ಣವಾಗಿ ಮುಚ್ಚುವ ಸಾಧ್ಯತೆ ಇದೆ. ಇದರಿಂದಾಗಿ ಸುಮಾರು 15 ಲಕ್ಷದಿಂದ 20 ಲಕ್ಷ ಉದ್ಯೋಗ ನಷ್ಟವಾಗುತ್ತದೆ ಎಂಬ ಅಂದಾಜು ಮಾಡಲಾಗಿದೆ' ಎಂದು ಅರಸಪ್ಪ ಹೇಳಿದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,745
ಇಂದಿನ ಅಂತ್ಯ	15,772
▲	27
ದಿನದ ಗರಿಷ್ಠ	15,895

ವಿನಿಮಯ ದರ

$ ಡಾಲರ್	74.37
£ ಪೌಂಡ್	103.01
€ ಯೂರೊ	88.34
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹520

53 ಸಾವಿರದ ಗಡಿ ದಾಟದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಮಂಗಳವಾರ, ದಿನದ ವಹಿವಾಟಿನ ಸಾರ್ವಕಾಲಿಕ ಗರಿಷ್ಠ ಮಟ್ಟವಾದ 53 ಸಾವಿರ ಅಂಶಗಳ ಗಡಿಯನ್ನು ತಲುಪಿತ್ತು. ನಂತರ, ವರ್ತಕರ ಲಾಭ ಗಳಿಕೆಯ ವಹಿವಾಟಿನ ಕಾರಣ ಕುಸಿತ ಕಂಡು 52,588 ಅಂಶಗಳಲ್ಲಿ ಕೊನೆಗೊಂಡಿತು.

ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 26 ಅಂಶ ಏರಿಕೆ ಕಂಡಿದೆ. ಅಮೆರಿಕದ ಡಾಲರ್ ಎದುರು 27 ಪೈಸೆ ಕುಸಿತ ಕಂಡ ರೂಪಾಯಿ ಮೌಲ್ಯವು 74.37ಕ್ಕೆ ತಲುಪಿದೆ.

'ಈಕ್ವಿಟಿ'ಯತ್ತ ಸಣ್ಣ ಹೂಡಿಕೆದಾರರ ಆಸಕ್ತಿ: ಎಸ್‌ಬಿಐ ಅರ್ಥಶಾಸ್ತ್ರಜ್ಞರ ವರದಿ

ಅತ್ಯಂತ ವೇಗವಾಗಿ ಬೆಳೆದ ಕಂಪನಿಗಳ ಬಂಡವಾಳ ಮೌಲ್ಯ

ಮುಂಬೈ (ಪಿಟಿಐ): ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳಲ್ಲಿನ ಕಂಪನಿಗಳ ಪೈಕಿ ಭಾರತದ ಅರ್ಥ ವ್ಯವಸ್ಥೆಯಲ್ಲಿನ ಕಂಪನಿಗಳ ಮಾರುಕಟ್ಟೆ ಬಂಡವಾಳದ ಮೌಲ್ಯವು ಕಳೆದ ವರ್ಷದಲ್ಲಿ ಅತಿಹೆಚ್ಚಿನ ವೇಗದಲ್ಲಿ ಬೆಳವಣಿಗೆ ಕಂಡಿದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.



ದೇಶದ ಒಟ್ಟು ಆಂತರಿಕ ಉತ್ಪಾದನೆಯು (ಜಿಡಿಪಿ) ಕುಸಿತ ಕಂಡಿದ್ದರೂ, ಕಂಪನಿಗಳ ಮಾರುಕಟ್ಟೆ ಮೌಲ್ಯದಲ್ಲಿ ಈ ಬಗೆಯ ಬೆಳವಣಿಗೆ ಕಂಡುಬಂದಿದೆ ಎಂದು ಅವರು ಹೇಳಿದ್ದಾರೆ.

ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಸಣ್ಣ ಹೂಡಿಕೆದಾರರು ಷೇರು ಮಾರುಕಟ್ಟೆ ಹೂಡಿಕೆಗಳಲ್ಲಿ ಹೆಚ್ಚಿನ ಆಸಕ್ತಿ ತೋರಿಸಿದ್ದಾರೆ. ಒಂದು ವರ್ಷದ ಅವಧಿಯಲ್ಲಿ ಸಣ್ಣ ಹೂಡಿಕೆದಾರರ ಸಂಖ್ಯೆಯಲ್ಲಿ 1.42 ಕೋಟಿಯಷ್ಟು ಹೆಚ್ಚಳ ಆಗಿದೆ. ಹಾಲಿ ಆರ್ಥಿಕ ವರ್ಷದ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸಣ್ಣ ಹೂಡಿಕೆದಾರರ ಸಂಖ್ಯೆಯು 44 ಲಕ್ಷದಷ್ಟು ಏರಿಕೆ ಆಗಿದೆ. ಆದರೆ, ಸಣ್ಣ ಹೂಡಿಕೆದಾರರಲ್ಲಿ ಮಾರುಕಟ್ಟೆಗಳ ಬಗ್ಗೆ ಮೂಡಿರುವ ಆಕರ್ಷಣೆಯು ಬಹುಕಾಲ ಉಳಿದುಕೊಳ್ಳುವುದೇ ಎಂಬ ಪ್ರಶ್ನೆಯನ್ನು ಅವರು ತಮ್ಮ ವರದಿಯಲ್ಲಿ ಎತ್ತಿದ್ದಾರೆ.

'ಇತರ ಹಣಕಾಸು ಉತ್ಪನ್ನಗಳಿಂದ ಬರುವ ಲಾಭವು ಕಡಿಮೆ ಆಗಿದ್ದು, ಜಾಗತಿಕ ಮಾರುಕಟ್ಟೆಗಳಲ್ಲಿ ಹಣದ ಹರಿವು ಹೆಚ್ಚಾಗಿದ್ದು, ಜನ ಮನೆಯಲ್ಲೇ ಹೆಚ್ಚು ಕಾಲ ಕಳೆಯುತ್ತಿರುವುದರಿಂದ ಹೂಡಿಕೆ ಹಾಗೂ ಷೇರು ಮಾರಾಟಗಳಲ್ಲಿ ಹೆಚ್ಚು ಆಸಕ್ತಿ ಮೂಡಿರುವುದು ಈಕ್ವಿಟಿ ಮಾರುಕಟ್ಟೆಯ ಬೆಳವಣಿಗೆಗೆ ಒಂದು ಕಾರಣ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

2020ರ ಏಪ್ರಿಲ್‌ನ ಆರಂಭದಲ್ಲಿ 28 ಸಾವಿರಕ್ಕೆ ಕುಸಿದಿದ್ದ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಈಗ 52 ಸಾವಿರದ ಗಡಿಯನ್ನು ದಾಟಿದೆ. 'ನೈಜ ಅರ್ಥ ವ್ಯವಸ್ಥೆಯಲ್ಲಿ ಗಮನಾರ್ಹವಾದ ಬೆಳವಣಿಗೆ ಆಗದೆ ಇದ್ದರೂ ಷೇರು ಮಾರುಕಟ್ಟೆಯು ಏರಿಕೆಯ ಹಾದಿಯಲ್ಲಿ ಇರುವುದು ಹಣಕಾಸಿನ ಸ್ಥಿರತೆ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಬಹುದು' ಎಂದು ವರದಿ ಹೇಳಿದೆ.

ಷೇರು ಮಾರುಕಟ್ಟೆಗಳಲ್ಲಿ ಕಂಡುಬರುತ್ತಿರುವ ಏರಿಕೆಯ ಗತಿಯನ್ನು ಕಂಡು ಭಾರತೀಯ ರಿಸರ್ವ್ ಬ್ಯಾಂಕ್ ಕೂಡ ಹಣಕಾಸಿನ ಸ್ಥಿರತೆಯ ಪ್ರಶ್ನೆಗಳನ್ನು ಈ ಹಿಂದೆ ಎತ್ತಿತ್ತು. ಸಣ್ಣ ಹೂಡಿಕೆದಾರರು ಈಕ್ವಿಟಿ ಮಾರುಕಟ್ಟೆಗಳಲ್ಲಿ ಹಣ ತೊಡಗಿಸುವುದು ಹೆಚ್ಚಾದರೆ ಭಾರತದ ಮೂಲಸೌಕರ್ಯ ಯೋಜನೆಗಳಿಗೆ ಹೆಚ್ಚಿನ ಸಂಪನ್ಮೂಲ ದೊರೆತಂತೆ ಆಗುತ್ತದೆ ಎಂದು ವರದಿ ಹೇಳಿದೆ.

ಮುಂಬೈ ಧಾರಣೆ

ಶೇಂಗಾ

22-6-2021

ಜಾವಾ 70/80(ಹೊಸ)	9750-9800
ಜಾವಾ 80/90(ಹೊಸ)	9050-9100
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1440 (1450)
ಒಂದು ವಾರದ ಡೆಲಿವರಿ	1435 (1445)
ಸೋಯಾ ಕಚ್ಚಾ	1265 (1250)
ಪಾಮ್ ವಾರದ ಡೆಲಿವರಿ	1158 (1148)
ಸೂರ್ಯಕಾಂತಿ ಎಣ್ಣೆ ಕಚ್ಚಾ	1240 (1250)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,150 (47,050)
ಬೆಳ್ಳಿ ಕೆ.ಜಿ 68,200 (67,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಒಡಿಶಾ: ₹ 100ರ ಗಡಿ ದಾಟಿದ ಡೀಸೆಲ್

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಮಂಗಳವಾರ ಇಂಧನ ದರ ಹೆಚ್ಚಿಸಿದ್ದು, ಒಡಿಶಾದಲ್ಲಿ ಡೀಸೆಲ್ ದರವು ಲೀಟರಿಗೆ ₹ 100ರ ಗಡಿ ದಾಟಿದೆ.

ಮಂಗಳವಾರ ಪೆಟ್ರೋಲ್ ದರ 28 ಪೈಸೆ, ಡೀಸೆಲ್ ದರ 26 ಪೈಸೆ ಹೆಚ್ಚಾಗಿದೆ. ಹೀಗಾಗಿ ದೇಶದ ಹಲವು ಭಾಗಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರವು ಲೀಟರಿಗೆ ₹ 100ರ ಗಡಿ ದಾಟಿದೆ.

ಬೆಂಗಳೂರಿನಲ್ಲಿ ಮಂಗಳವಾರ ಪೆಟ್ರೋಲ್ ದರ ₹ 100.76 ಮತ್ತು ಡೀಸೆಲ್ ದರ ₹ 93.54ರಷ್ಟಾಗಿದೆ.

ಮೇ 4ರಿಂದ ಇಲ್ಲಿಯವರೆಗೆ ಒಟ್ಟಾರೆ 28 ಬಾರಿ ದರ ಹೆಚ್ಚಿಸಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಹೊಸತು	23500-42000
ಕೋಕ	10000-22500
ಕುಂದಾಪುರ	
ಹಳೆಚಾಲಿ	45000-51000
ಹೊಸಚಾಲಿ	35000-42000
ಪುತ್ತೂರು	
ಕೋಕ	9500-25000
ಹೊಸತು	29500-42100
ಸಿದ್ದಾಪುರ	
ಬಿಳಿಗೋಟು	26108-31999
ಚಾಲಿ	34099-38099
ಕೋಕ	24309-29299
ಕೆಂಪುಗೋಟು	24711-32899
ರಾಶಿ	38099-41899
ತಟ್ಟಿಬೆಟ್ಟೆ	30109-37099
ಶಿರಸಿ	
ಬೆಟ್ಟೆ	29609-39699
ಬಿಳಿಗೋಟು	19699-33472
ಚಾಲಿ	30899-39611
ರಾಶಿ	35599-42769

ರಾಮನಗರ ರೇಷ್ಮೆ ಧಾರಣೆ

ಮಿಶ್ರತಳಿ (ಸಿ.ಬಿ)	325-393
ದ್ವಿತಳಿ (ಬಿ.ವಿ)	343-485

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	11100
ಎಸಿ	4760
ಆರ್‌ಪಿ	5400
ಆರ್‌ಸಿ	3125



ಬಿಹಾರದ ಪಟ್ನಾದಲ್ಲಿ ಗಂಗಾ ಘಾಟ್ ತುಂಬಿ ಹರಿಯುತ್ತಿರುವುದು –ಪಿಟಿಐ ಚಿತ್ರ

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಶಂಭುಲಿಂಗ ಶಾಸ್ತ್ರಿ, ಮೈಸೂರು

- **ನನ್ನ ವಯಸ್ಸು 66 ವರ್ಷ. ನಿವೃತ್ತನಾಗಿದ್ದೇನೆ. ಪಿಂಚಣಿ ₹ 28 ಸಾವಿರ. ಇತ್ತೀಚಿನ ದಿನಗಳಲ್ಲಿ ಠೇವಣಿ ಮೇಲಿನ ಬಡ್ಡಿ ಬಹಳ ಕಡಿಮೆ ಆಗುತ್ತಿದೆ. ಯಾವ ಠೇವಣಿಗಳಿಂದ ಬರುವ ಬಡ್ಡಿ ವರಮಾನಕ್ಕೆ ತೆರಿಗೆ ವಿನಾಯಿತಿ ಇದೆ ಹಾಗೂ ಯಾವ ಸಾಲಗಳ ಮೇಲಿನ ಬಡ್ಡಿಯಿಂದ ತೆರಿಗೆ ವಿನಾಯಿತಿ ಪಡೆಯಬಹುದು? ನನ್ನ ಮಕ್ಕಳು ಆದಾಯ ತೆರಿಗೆ ಪಾವತಿಸುತ್ತಾರೆ. ತೆರಿಗೆ ಉಳಿಸಲು ಮಾರ್ಗದರ್ಶನ ಮಾಡಿ.**

ಉತ್ತರ: ಸೆಕ್ಷನ್ 10 (II) ಪ್ರಕಾರ ಪಿ.ಎಫ್., ಪಿಪಿಎಫ್ ಠೇವಣಿಗಳ ಮೇಲೆ ಬರುವ ಬಡ್ಡಿಗೆ ಸಂಪೂರ್ಣ ತೆರಿಗೆ ವಿನಾಯಿತಿ ಇದೆ. ಉಳಿದ ಠೇವಣಿಗಳ ಮೇಲಿನ ಬಡ್ಡಿ ವರಮಾನಕ್ಕೆ ಈ ವಿನಾಯಿತಿ ಇರುವುದಿಲ್ಲ. ವ್ಯಕ್ತಿಯ ಬಡ್ಡಿ ವರಮಾನವೂ ಸೇರಿ ವಾರ್ಷಿಕ ಆದಾಯ ₹ 5 ಲಕ್ಷದ ಒಳಗಿದ್ದಲ್ಲಿ ಹಾಗೂ ಹಿರಿಯ ನಾಗರಿಕನ ಬಡ್ಡಿ ವರಮಾನ ಸೇರಿ ವಾರ್ಷಿಕ ಆದಾಯ ₹ 5.5 ಲಕ್ಷದೊಳಗೆ ಇದ್ದಲ್ಲಿ ಆದಾಯ ತೆರಿಗೆ ಪಾವತಿಸುವ ಅಗತ್ಯವಿಲ್ಲ. ಸೆಕ್ಷನ್ 80ಸಿ ಆಧಾರದಲ್ಲಿ ಗೃಹ ಸಾಲದ ಕಂತು ಗರಿಷ್ಠ ₹ 1.50 ಲಕ್ಷ, ಗೃಹ ಸಾಲದ ಬಡ್ಡಿ ಸೆಕ್ಷನ್ 24 (ಬಿ) ಆಧಾರದಲ್ಲಿ ಗರಿಷ್ಠ ₹ 2 ಲಕ್ಷ, ಶಿಕ್ಷಣ ಸಾಲದ ಬಡ್ಡಿ ಸೆಕ್ಷನ್ 80ಇ ಆಧಾರದ ಮೇಲೆ ಯಾವ ಮಿತಿ ಇಲ್ಲದೇ ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಬಹುದು.

ನಿಮ್ಮ ಮಕ್ಕಳ ತೆರಿಗೆ ಉಳಿಸಲು ಸೆಕ್ಷನ್ 80ಸಿ ಆಧಾರದ ಮೇಲೆ ಪಿಪಿಎಫ್, ವಿಮಾ ಕಂತು, 5 ವರ್ಷಗಳ ಬ್ಯಾಂಕ್ ಠೇವಣಿಗಳಲ್ಲಿ ಹಣ ಹೂಡಿದರೆ ವಾರ್ಷಿಕ ₹ 1.50 ಲಕ್ಷದ ತನಕ ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಬಹುದು. ಇದೇ ವೇಳೆ ಸೆಕ್ಷನ್ 80ಸಿ ಹೊರತುಪಡಿಸಿ, ₹ 50 ಸಾವಿರ ರಾಷ್ಟ್ರೀಯ ಪಿಂಚಣಿ ಯೋಜನೆಯಲ್ಲಿ ಹಣ ಇಟ್ಟರೆ ಈ ಮೊತ್ತವನ್ನು ಕೂಡ ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಬಹುದು.

ಚಂದ್ರಶೇಖರಯ್ಯ, ವಿಜಯನಗರ

- **ಪ್ರಶ್ನೆ: ನನ್ನ ವಯಸ್ಸು 80 ವರ್ಷ. ನನಗೆ ವಿಜಯನಗರದಲ್ಲಿ ಸ್ವಂತ ಮನೆ ಇದೆ. ಈ ಮನೆ ಮಾರಾಟ ಮಾಡಬೇಕೆಂದಿದ್ದೇನೆ. ಇದರಿಂದ ಸುಮಾರು ₹ 1 ಕೋಟಿಯಷ್ಟು ಸಿಗಬಹುದು. ಇದರಲ್ಲಿ ಅರ್ಧಭಾಗ ನಾನಿಟ್ಟುಕೊಂಡು ಉಳಿದ ಭಾಗವನ್ನು ನನ್ನ ಮಕ್ಕಳಿಗೆ ದಾನರೂಪದಲ್ಲಿ ಕೊಡಲು ಬಯಸಿದ್ದೇನೆ. ಎನ್‌ಎಚ್‌ಎಐ/ಆರ್‌ಇಸಿ (NHAI/REC) ಬಾಂಡ್‌ಗಳ ವಿಚಾರ ತಿಳಿಸಿ. ತೆರಿಗೆ ಉಳಿಸಲು ಮಾರ್ಗದರ್ಶನ ಮಾಡಿ.**

ಉತ್ತರ: ಸ್ಥಿರ ಆಸ್ತಿ ಮಾರಾಟ ಮಾಡಿ ಬಂದ ಹಣದಲ್ಲಿ ನೀವು ಆರಂಭದಲ್ಲಿ ನಿವೇಶನಕ್ಕೆ ಕೊಟ್ಟ ಹಣ, ನಂತರ ಮನೆ ಕಟ್ಟಿಸಲು ಮಾಡಿದ ಖರ್ಚು ಹಾಗೂ ಅಂದಿನಿಂದ ಮಾರಾಟ ಮಾಡುವ ತನಕದ ಅವಧಿಯಲ್ಲಿ ಈ ಆಸ್ತಿಯ ಕಾಸ್ಟ್ ಆಫ್ ಇನ್‌ಫ್ಲೇಷನ್ ಮೊತ್ತವನ್ನು ಕಳೆದು ಉಳಿದ ಮೊತ್ತಕ್ಕೆ ಬಂಡವಾಳ ವೃದ್ಧಿ ತೆರಿಗೆ ಕೊಡಬಹುದು. ತೆರಿಗೆಯಲ್ಲಿ ವಿನಾಯಿತಿ ಪಡೆಯಲು, ಮಾರಾಟ ಮಾಡಿ ಬಂದ ಮೊತ್ತದಲ್ಲಿ ಗರಿಷ್ಠ ₹ 50 ಲಕ್ಷ ಎನ್‌ಎಚ್‌ಎಐ/ಆರ್‌ಇಸಿ ಬಾಂಡ್‌ಗಳಲ್ಲಿ ತೊಡಗಿಸಬಹುದು. ಉಳಿದ ಹಣದಿಂದ ನಿವೇಶನ ಕೊಂಡು ಮನೆ ಕಟ್ಟಿಸಬಹುದು. ಈ ಮಾರ್ಗದ ಹೊರತಾಗಿ ಮಾರಾಟ ಮಾಡಿ ಬಂದ ಹಣವನ್ನು ನೀವಾಗಲಿ, ನಿಮ್ಮ ಮಕ್ಕಳಾಗಲಿ ತೆರಿಗೆ ಕೊಡದೇ ಅನುಭವಿಸುವಂತಿಲ್ಲ. ಎನ್‌ಎಚ್‌ಎಐ/ಆರ್‌ಇಸಿ ಬಾಂಡ್ ಅವಧಿ 5 ವರ್ಷ. ಅವಧಿಗೆ ಮುನ್ನ ಹಣ ಪಡೆಯುವಂತಿಲ್ಲ. ಬಡ್ಡಿದರ ಶೇಕಡ 5ರಷ್ಟು. ಇನ್ನೂ ಹೆಚ್ಚಿನ ಮಾಹಿತಿಗೆ ನನಗೆ ಕರೆ ಮಾಡಿ.

ಚೌಡಮ್ಮ, ಚನ್ನಪಟ್ಟಣ

- **ಪ್ರಶ್ನೆ: ನನ್ನ ವಯಸ್ಸು 68 ವರ್ಷ. ನಾನು ಗೃಹಿಣಿ. ನನ್ನ ಪತಿ ನಿವೃತ್ತ ಸರ್ಕಾರಿ ನೌಕರ. ನಮಗೆ ಒಬ್ಬಳು ಮಗಳು, ಒಬ್ಬ ಮಗ. ನನ್ನ ತಂದೆಯವರು '40X60' ಅಡಿ ಅಳತೆಯ ನಿವೇಶನವನ್ನು ದಾನರೂಪದಲ್ಲಿ ಪತ್ರಮುಖೇನ ಕೊಟ್ಟಿರುತ್ತಾರೆ. ನನ್ನ ಮಗಳಿಗೆ ನಗರಸಭೆ ವ್ಯಾಪ್ತಿಯಲ್ಲಿ ಒಂದು ನಿವೇಶನ ಇದೆ. ನಾನು ನನ್ನ ನಿವೇಶನ ಮಾರಾಟ ಮಾಡಿ ಬರುವ ಹಣದಿಂದ ಮಗಳ ನಿವೇಶನದಲ್ಲಿ ಎರಡು ಮಹಡಿಗಳ ಮನೆ ಕಟ್ಟಿಸಿ, ಮಗಳಿಗೂ, ಮಗನಿಗೂ ದಾನಪತ್ರ ಮಾಡಿಕೊಡಬೇಕೆಂದಿದ್ದೇನೆ. ಆದಾಯ ತೆರಿಗೆ ಬರಬಹುದೇ? ಬೇರೆ ದಾರಿ ಇದ್ದರೆ ತಿಳಿಸಿ.**

ಉತ್ತರ: ಒಬ್ಬ ವ್ಯಕ್ತಿ ತಾನು ಮಾರಾಟ ಮಾಡಿದ ಸ್ಥಿರ ಆಸ್ತಿಯಿಂದ ಬರುವ ಹಣದಿಂದ ಸ್ವಂತ ಮಕ್ಕಳ ಹೆಸರಿನಲ್ಲಿ ಆಗಲಿ, ಬೇರೆಯವರ ಹೆಸರಿನಲ್ಲಿ ಆಗಲಿ ಇನ್ನೊಂದು ನಿವೇಶನ–ಮನೆ ಮಾಡಿದರೆ ತೆರಿಗೆ ವಿನಾಯಿತಿ ಪಡೆಯುವಂತಿಲ್ಲ. ಸೆಕ್ಷನ್ 54ಇಸಿ ಆಧಾರದ ಮೇಲೆ ಗರಿಷ್ಠ ₹ 50 ಲಕ್ಷ ಎನ್‌ಎಚ್‌ಎಐ/ಆರ್‌ಇಸಿ ಬಾಂಡ್‌ಗಳಲ್ಲಿ ತೊಡಗಿಸಿ. ಅಷ್ಟರಮಟ್ಟಿಗೆ ಮಾತ್ರ ತೆರಿಗೆ ವಿನಾಯಿತಿ ಪಡೆಯಬಹುದು. ತಂದೆಯಿಂದ ದಾನವಾಗಿ ಪಡೆದಿರುವ ನಿವೇಶನ ಮಾರಾಟ ಮಾಡಿ, ಮಗಳ ನಿವೇಶನದಲ್ಲಿ ಎರಡು ಅಂತಸ್ತಿನ ಮನೆ ಮಾಡುವ ವಿಚಾರ ಕಾನೂನು ಬದ್ಧವಲ್ಲ. ಮಗಳ ನಿವೇಶನದಲ್ಲಿ ಮನೆ ಕಟ್ಟಿಸಿದಾಗ ಹಾಗೆ ಕಟ್ಟಿಸಿದ ಮನೆ ಮಗಳಿಗೇ ಸಲ್ಲುತ್ತದೆ. ನಿಮ್ಮ ಉದ್ದೇಶ ಒಳ್ಳೆಯದಾದರೂ ಹಾಗೆ ಕಟ್ಟಿಸಿದ ಮನೆಯನ್ನು ಕಾನೂನಿನ ಪ್ರಕಾರ ಮಗನಿಗಾಗಲಿ, ಬೇರೆಯವರಿಗಾಗಲಿ ದಾನಪತ್ರ ಮೂಲಕ ವರ್ಗಾಯಿಸುವಂತಿಲ್ಲ. ನಿವೇಶನ ಮಾರಾಟ ಮಾಡಿದಾಗ ₹ 50 ಲಕ್ಷಕ್ಕೂ ಹೆಚ್ಚಿನ ಮೊತ್ತ ಬರಲಾರದು ಎನ್ನುವುದು ನನ್ನ ಅಭಿಪ್ರಾಯ. ₹ 50 ಲಕ್ಷ ಬಂದರೆ ₹ 25 ಲಕ್ಷದಂತೆ ವಿಂಗಡಿಸಿ, ಪ್ರತ್ಯೇಕವಾಗಿ ಬಾಂಡ್ ಇರಿಸಿ. ಮಗಳು ಹಾಗೂ ಮಗನಿಗೆ ನಾಮನಿರ್ದೇಶನ ಮಾಡಿ. ಐದು ವರ್ಷಗಳ ನಂತರ ಬಾಂಡ್ ಅವಧಿ ಮುಗಿದಾಗ ಇಚ್ಛಿಸಿದಲ್ಲಿ ಮಕ್ಕಳಿಗೆ ಸಮನಾಗಿ ಹಂಚಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. ಇ-ಮೇಲ್: businessdesk@prajavani.co.in

ಚರ್ಚೆಗೆ ಗ್ರಾಸವಾದ ದೆಹಲಿ ಭೇಟಿ

ಕೇಂದ್ರ ಸಂಪುಟಕ್ಕೆ ಜೆಡಿಯು?

ಪಟ್ನಾ (ಪಿಟಿಐ): ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ದೆಹಲಿಗೆ ಮಂಗಳವಾರ ಭೇಟಿ ನೀಡಿರುವುದು ಹಲವು ಊಹಾಪೋಹಗಳಿಗೆ ಕಾರಣವಾಗಿದೆ.

ವೈದ್ಯಕೀಯ ಕಾರಣಗಳಿಂದಾಗಿ ಅವರು ರಾಷ್ಟ್ರ ರಾಜಧಾನಿಗೆ ತೆರಳಿದ್ದಾರೆ ಎಂಬ ಮಾಹಿತಿ ಇದೆ ಒಂದೆಡೆಯಾದರೆ, ಕೇಂದ್ರ ಸಚಿವ ಸಂಪುಟದಲ್ಲಿ ಪಕ್ಷಕ್ಕೆ ಸೂಕ್ತ ಪ್ರಾತಿನಿಧ್ಯ ಗಿಟ್ಟಿಸಿಕೊಳ್ಳುವ ಪ್ರಯತ್ನ ಈ ಭೇಟಿಯ ಉದ್ದೇಶ ಎಂಬ ಮಾತುಗಳು ಸಹ ಕೇಳಿಬರುತ್ತಿವೆ.

2013-2017ರ ಅವಧಿಯನ್ನು ಹೊರತುಪಡಿಸಿದರೆ, ಮೂರು ದಶಕಗಳಿಂದ ಜೆಡಿಯು, ಬಿಜೆಪಿಯ ಮಿತ್ರ ಪಕ್ಷವಾಗಿದೆ. ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದಾಗ, ಸಚಿವ ಸಂಪುಟದಲ್ಲಿ ಸ್ವತಃ ನಿತೀಶ್ ಕುಮಾರ್ ಇದ್ದರು. 2019 ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಗೆಲುವಿನ ಮೂಲಕ ಅಧಿಕಾರಕ್ಕೆ ಬಂತು. ಮಿತ್ರಪಕ್ಷಗಳಿಗೆ ಸಂಪುಟದಲ್ಲಿ 'ಸಾಂಕೇತಿಕ ಪ್ರಾತಿನಿಧ್ಯ' ನೀಡುವ ಬಿಜೆಪಿ ಪ್ರಸ್ತಾವವನ್ನು ಆಗ ನಿತೀಶ್ ಕುಮಾರ್ ತಿರಸ್ಕರಿಸಿದ್ದರು.

'ಅವರ ದೆಹಲಿ ಪ್ರವಾಸಕ್ಕೂ ಉದ್ದೇಶಿತ ಸಂಪುಟ ಪುನಾರಚನೆ ವಿಷಯಕ್ಕೂ ಏಕೆ ಸಂಬಂಧ ಕಲ್ಪಿಸಲಾಗುತ್ತಿದೆ ಎಂದು ನನಗೆ ತಿಳಿಯುತ್ತಿಲ್ಲ. ನನಗೆ ತಿಳಿದಿರುವಂತೆ, ಅವರ ಕಣ್ಣಿನ ಸಮಸ್ಯೆಗೆ ಚಿಕಿತ್ಸೆ ಅಗತ್ಯವಿದೆ. ಹೀಗಾಗಿ, ರಾಷ್ಟ್ರ ರಾಜಧಾನಿಗೆ ಭೇಟಿ ನೀಡುತ್ತಿದ್ದಾರೆ' ಎಂದು ನಿತೀಶ್ ಕುಮಾರ್ ಅವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿರುವ ರಾಜೀವ್ ರಂಜನ್ ಸಿಂಗ್ ಅಲಿಯಾಸ್ ಲಾಲನ್ ಹೇಳಿದ್ದಾರೆ.

'2017ರಿಂದಲೂ ಸಚಿವ ಸ್ಥಾನಕ್ಕೆ ನನ್ನ ಹೆಸರು ಕೇಳಿಬರುತ್ತಿದೆ. ನಮ್ಮ ಪಕ್ಷದಿಂದ ಕೇಂದ್ರ ಸಚಿವ ಸಂಪುಟದಲ್ಲಿ ಯಾರು ಇರಬೇಕು ಎಂಬುದನ್ನು ನಮ್ಮ ನಾಯಕರು ನಿರ್ಧರಿಸುತ್ತಾರೆ' ಎಂದು ಸಚಿವ ಸ್ಥಾನದ ಸಂಭಾವ್ಯರಲ್ಲೊಬ್ಬರಾದ ಪಕ್ಷದ್ ಮುಖಂಡ ಆರ್.ಸಿ.ಪಿ ಸಿಂಗ್ ಹೇಳಿದ್ದಾರೆ.

ಬಿಜೆಪಿಯ ಮೌನ ನೋವುಂಟು ಮಾಡಿದೆ: ಚಿರಾಗ್

ನವದೆಹಲಿ (ಪಿಟಿಐ): ಪಕ್ಷದಲ್ಲಿ ಬಿಕ್ಕಟ್ಟು ಸೃಷ್ಟಿಯಾಗಿರುವ ಸಂದರ್ಭದಲ್ಲಿ ಬಿಜೆಪಿಯ ಮೌನವು ನೋವುಂಟುಮಾಡಿದೆ. ಆ ಪಕ್ಷದ ಜತೆಗಿನ ಬಾಂಧವ್ಯ ಏಕಮುಖವಾಗಿರಲು ಸಾಧ್ಯವಿಲ್ಲ ಎಂದು ಎಲ್‌ಜೆಪಿ ನಾಯಕ ಚಿರಾಗ್ ಪಾಸ್ವಾನ್ ಹೇಳಿದ್ದಾರೆ.

ತಂದೆ ರಾಮ್ ವಿಲಾಸ್ ಪಾಸ್ವಾನ್ ಅವರು ಬಂಡೆಯಂತೆ ಅಚಲವಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಜತೆ ನಿಂತಿದ್ದರು. ಆದರೆ ಈ ಸಂಕಷ್ಟದ ಸಂದರ್ಭದಲ್ಲಿ ಮಧ್ಯಪ್ರವೇಶವನ್ನು ಬಯಸಿದಾಗ ಕೇಸರಿ ಪಕ್ಷದ ಸುಳಿವೇ ಇಲ್ಲ ಎಂದು 'ಪಿಟಿಐ' ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಜೆಟ್ ಏರ್‌ವೇಸ್: ಪುನಶ್ಚೇತನ ಪ್ರಸ್ತಾವಕ್ಕೆ ಎನ್‌ಸಿಎಲ್‌ಟಿ ಸಮ್ಮತಿ

ಮುಂಬೈ (ಪಿಟಿಐ): ಆರ್ಥಿಕವಾಗಿ ದಿವಾಳಿ ಎದ್ದಿರುವ ಜೆಟ್ ಏರ್‌ವೇಸ್ ಕಂಪನಿಯ ಪುನಶ್ಚೇತನಕ್ಕೆ ಜಲನ್ ಕಲ್‌ರಾಕ್ ಒಕ್ಕೂಟ ಸಲ್ಲಿಸಿರುವ ಪ್ರಸ್ತಾವನೆಗೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (ಎನ್‌ಸಿಎಲ್‌ಟಿ) ಮಂಗಳವಾರ ಒಪ್ಪಿಗೆ ನೀಡಿದೆ.

ಎರಡು ದಶಕಕ್ಕೂ ಹೆಚ್ಚು ಅವಧಿಯಿಂದ ವಿಮಾನಯಾನ ಸೇವೆ ಒದಗಿಸುತ್ತಿದ್ದ ಜೆಟ್ ಏರ್‌ವೇಸ್ ಕಂಪನಿಯು ಹಣಕಾಸಿನ ಮುಗ್ಗಟ್ಟಿನ ಕಾರಣದಿಂದಾಗಿ 2019ರ ಏಪ್ರಿಲ್‌ನಲ್ಲಿ ಕಾರ್ಯಾಚರಣೆ ಸ್ಥಗಿತಗೊಳಿಸಿತು. ಕಂಪನಿಯಿಂದ ಬರಬೇಕಿರುವ ₹ 8 ಸಾವಿರ ಕೋಟಿಗಿಂತ ಹೆಚ್ಚಿನ ಮೊತ್ತದ ವಸೂಲಿಗೆ ಎಸ್‌ಬಿಐ ನೇತೃತ್ವದಲ್ಲಿ ಸಾಲದಾತರು ಕಾನೂನು ಕ್ರಮಕ್ಕೆ ಮುಂದಾಗಿದ್ದರು.

ಈಗ ಜಲನ್ ಕಲ್‌ರಾಕ್ ಒಕ್ಕೂಟದ ಪ್ರಸ್ತಾವನೆಗೆ ಎನ್‌ಸಿಎಲ್‌ಟಿ ಅನುಮೋದನೆ ನೀಡಿದ್ದು, ಪ್ರಸ್ತಾವನೆಯನ್ನು 90 ದಿನಗಳಲ್ಲಿ ಅನುಷ್ಠಾನಕ್ಕೆ ತರಬೇಕಿದೆ. ಕಂಪನಿಗೆ ಸಾಲ ನೀಡಿರುವ ಸಂಸ್ಥೆಗಳು, ಮುರಾರಿಲಾಲ್ ಜಲನ್ ಹಾಗೂ ಕಲ್‌ರಾಕ್ ಕ್ಯಾಪಿಟಲ್ ಒಟ್ಟಾಗಿ ಸಲ್ಲಿಸಿದ ಪ್ರಸ್ತಾವಕ್ಕೆ 2020ರ ಅಕ್ಟೋಬರ್‌ನಲ್ಲಿ ಒಪ್ಪಿಗೆ ನೀಡಿದ್ದವು. ಜೆಟ್ ಏರ್‌ವೇಸ್ ವಿಮಾನಯಾನ ಸೇವೆಗಳು ಈ ವರ್ಷದ ಅಂತ್ಯಕ್ಕೂ ಮೊದಲೇ ಪುನರಾರಂಭ ಆಗುವ ನಿರೀಕ್ಷೆ ಇದೆ ಎನ್ನಲಾಗಿದೆ.

ಮೌಲ್ಯಮಾಪನ ಯೋಜನೆ ಎತ್ತಿಹಿಡಿದ 'ಸುಪ್ರೀಂ'

ನವದೆಹಲಿ (ಪಿಟಿಐ) : ಪರೀಕ್ಷೆಗಳನ್ನು ರದ್ದುಗೊಳಿಸುವ ಸಿಬಿಎಸ್‌ಇ ಮತ್ತು ಐಸಿಎಸ್‌ಇ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾಗೊಳಿಸಿದೆ.

ಪರೀಕ್ಷೆ ಬದಲಿಗೆ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಲು ಮಂಡಳಿಗಳು ಹೊರತಂದಿರುವ ಮೌಲ್ಯಮಾಪನ ಯೋಜನೆಗೆ ನ್ಯಾಯಾಲಯ ಅನುಮತಿ ನೀಡಿದೆ.

'ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪ್ರಸ್ತಾಪಿಸಿರುವ ಯೋಜನೆಯಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯವಿಲ್ಲ ಎಂದು ನಾವು ಭಾವಿಸುತ್ತೇವೆ. ಇದು ಎಲ್ಲಾ ವಿದ್ಯಾರ್ಥಿಗಳ ಕಾಳಜಿಯನ್ನು ಗಣನೆಗೆ ತೆಗೆದುಕೊಳ್ಳುತ್ತದೆ' ಎಂದು ನ್ಯಾಯಾಲಯ ಹೇಳಿದೆ.

'ಮಾದರಿ ಬಾಡಿಗೆ ಕಾಯ್ದೆ ಪೂರ್ವಾನ್ವಯ ಆಗದು'

ಪ್ರಜಾವಾಣಿ ವಾರ್ತೆ




ನವದೆಹಲಿ: ಮಾದರಿ ಬಾಡಿಗೆ ಕಾಯ್ದೆಯು ಪೂರ್ವಾನ್ವಯವಾಗಿ ಜಾರಿಯಾಗುವುದಿಲ್ಲ ಎಂದು ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯವು ಹೇಳಿದೆ.

ಮುಂಬೈ ಮತ್ತು ಮಹಾರಾಷ್ಟ್ರದಲ್ಲಿ ಈಗ ಪಾಗ್ಡಿ ಬಾಡಿಗೆ ನಿಯಮಗಳು ಜಾರಿಯಲ್ಲಿವೆ. ಈ ನಿಯಮಗಳ ಅನ್ವಯ ಜಾರಿಯಲ್ಲಿರುವ ಒಪ್ಪಂದಗಳಿಗೆ ಮಾದರಿ ಬಾಡಿಗೆ ಕಾಯ್ದೆಯು ಅನ್ವಯವಾಗುತ್ತದೆಯೇ ಎಂದು ಮುಂಬೈನ ಬಿಜೆಪಿ ಶಾಸಕರ ನಿಯೋಗವೇ ಸಚಿವಾಲಯದ ಸ್ಪಷ್ಟನೆ ಕೇಳಿತ್ತು. ಅದಕ್ಕೆ ಪ್ರತಿಕ್ರಿಯೆಯಾಗಿ ಸಚಿವಾಲಯವು ಈ ಸ್ಪಷ್ಟನೆ ನೀಡಿದೆ.

ದೇಶದಾದ್ಯಂತ ಬಾಡಿಗೆ ನಿಯಮಗಳಲ್ಲಿ ಸುಧಾರಣೆ ತರುವ ಉದ್ದೇಶದಿಂದ ಮಾದರಿ ಬಾಡಿಗೆ ಕಾಯ್ದೆಯನ್ನು ಜಾರಿಗೆ ತರಲು ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯವು ಸಿದ್ಧತೆ ನಡೆಸಿದೆ. ದೊಡ್ಡ ಉದ್ಯಮ ಸಂಸ್ಥೆಗಳು ಬಾಡಿಗೆ ಮನೆ ವಲಯದಲ್ಲಿ ಹೂಡಿಕೆ ಮಾಡಲು ನೂತನ ಕಾಯ್ದೆಯು ಅವಕಾಶ ಮಾಡಿಕೊಡಲಿದೆ.

ನಿಧನ ವಾರ್ತೆ

ಕರ್ನಾಟಕ ಸಂಗೀತಗಾರ್ತಿ ಪೊನ್ನಮ್ಮಾಳ್



ತಿರುವನಂತಪುರ (ಪಿಟಿಐ): ಖ್ಯಾತ ಕರ್ನಾಟಕ ಸಂಗೀತಗಾರ್ತಿ ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಪರಸ್ಸಲ ಬಿ. ಪೊನ್ನಮ್ಮಾಳ್ (96) ಅವರು ಮಂಗಳವಾರ ಇಲ್ಲಿನ ವಾಲಿಯಾಸಾಲಾದಲ್ಲಿರುವ ತಮ್ಮ ಮನೆಯಲ್ಲಿ ನಿಧನರಾದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂಟು ದಶಕಗಳಿಂದ ಶಾಸ್ತ್ರೀಯ ಸಂಗೀತ ಪ್ರಿಯರನ್ನು ತಮ್ಮ ಸಂಗೀತ ಕಛೇರಿಗಳ ಮೂಲಕ ಸೆಳೆದಿದ್ದ ಪೊನ್ನಮ್ಮಾಳ್ ಅವರು ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದರು.

ಅವರಿಗೆ ಇಬ್ಬರು ಪುತ್ರರಿದ್ದಾರೆ. ಪತಿ ದೇವನಾಯಕಂ ಅಯ್ಯರ್ ಮತ್ತು ಒಬ್ಬ ಮಗ ಮತ್ತು ಮಗಳು ಈ ಹಿಂದೆಯೇ ಮೃತಪಟ್ಟಿದ್ದಾರೆ. ಪುರುಷ ಪ್ರಾಬಲ್ಯದ, ಶತಮಾನಗಳಷ್ಟು ಹಳೆಯದಾದ ಸಂಪ್ರದಾಯವನ್ನು ಮುರಿದು, 2006ರಲ್ಲಿ ಶ್ರೀ ಪದ್ಮನಾಭ ಸ್ವಾಮಿ ದೇವಸ್ಥಾನದಲ್ಲಿ ನಡೆದ ನವರಾತ್ರಿ ಆಚರಣೆಯಲ್ಲಿ ನವರಾತ್ರಿ ಮಂಟಪದಲ್ಲಿ ಹಾಡಿದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾಗಿದ್ದರು.

ಮಲಯಾಳ ಕವಿ ಪೂವಾಚಲ್ ಖಾದರ್



ತಿರುವನಂತಪುರ (ಪಿಟಿಐ): ಮಲಯಾಳ ಭಾಷೆಯ ಪ್ರಸಿದ್ಧ ಗೀತ ರಚನೆಕಾರ, ಕವಿ ಪೂವಾಚಲ್ ಖಾದರ್ ಅವರು (73) ಮಂಗಳವಾರ ನಿಧನರಾದರು.

'ಇಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜ್ ಮತ್ತು ಆಸ್ಪತ್ರೆಯಲ್ಲಿ ಕೋವಿಡ್-19ರ ಚಿಕಿತ್ಸೆ ಪಡೆಯುತ್ತಿದ್ದ ಪೂವಾಚಲ್ ಅವರು ಹೃದಯಾಘಾತದಿಂದ ಆಸ್ಪತ್ರೆಯಲ್ಲಿ ಕೊನೆ ಉಸಿರೆಳೆದರು' ಎಂದು ಮೂಲಗಳು ತಿಳಿಸಿವೆ.

ಪೂವಾಚಲ್ ಖಾದರ್ ಅವರು ಐದು ದಶಕಗಳಲ್ಲಿ 400ಕ್ಕೂ ಹೆಚ್ಚು ಚಲನಚಿತ್ರಗಳಿಗೆ ಸುಮಾರು 1500 ಗೀತೆಗಳನ್ನು ರಚಿಸಿದ್ದಾರೆ.

'ಪೂಮನಮೆ' (ನಿರಕೂಟ್ಟು), 'ಏದೋ ಜನ್ಮ ಕಲ್ಪಾನಾಯಿ' (ಪಲಂಗಲ್) ಸೇರಿದಂತೆ ಹಲವು ಪ್ರಸಿದ್ಧ ಗೀತೆಗಳನ್ನು ಅವರು ಬರೆದಿದ್ದಾರೆ. ಅವರು 1972ರಲ್ಲಿ ಮಲಯಾಳ ಚಿತ್ರರಂಗಕ್ಕೆ ಕಾಲಿಟ್ಟಿದ್ದರು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್: ಮೊದಲ ಇನಿಂಗ್ಸ್‌ನಲ್ಲಿ ಕಿವೀಸ್‌ಗೆ ಅಲ್ಪ ಮುನ್ನಡೆ

ನ್ಯೂಜಿಲೆಂಡ್ ಓಟಕ್ಕೆ ಶಮಿ ಅಡ್ಡಿ

ಸೌತಾಂಪ್ಟನ್ (ಪಿಟಿಐ): ಮೊಹಮ್ಮದ್ ಶಮಿ ಶಿಸ್ತಿನ ದಾಳಿಯ ನಡುವೆಯೂ ನ್ಯೂಜಿಲೆಂಡ್ ತಂಡವು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನ ಮೊದಲ ಇನಿಂಗ್ಸ್‌ನಲ್ಲಿ ಅಲ್ಪ ಮುನ್ನಡೆ ಸಾಧಿಸಿತು.

ಐದನೇ ದಿನದಾಟದಲ್ಲಿ ನಾಯಕ ಕೇನ್ ವಿಲಿಯಮ್ಸನ್ (49) ಮತ್ತು ಟಿಮ್ ಸೌಥಿ (30 ರನ್) ಅವರ ಪ್ರಯತ್ನದಿಂದಾಗಿ ತಂಡವು 99.2 ಓವರ್‌ಗಳಲ್ಲಿ 249 ರನ್ ಗಳಿಸಿತು. 32 ರನ್‌ಗಳ ಮುನ್ನಡೆ ಪಡೆಯಿತು. ಎರಡನೇ ಇನಿಂಗ್ಸ್ ಆರಂಭಿಸಿರುವ ಭಾರತ ತಂಡವು ಮಂಗಳವಾರ ದಿನದಾಟದ ಅಂತ್ಯಕ್ಕೆ 30 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 64 ರನ್ ಗಳಿಸಿತು.

ಶುಭಮನ್ ಗಿಲ್ 8 ರನ್ ಗಳಿಸಿ ಟಿಮ್ ಸೌಥಿಗೆ ವಿಕೆಟ್ ಒಪ್ಪಿಸಿದ್ದರು. ಉತ್ತಮವಾಗಿ ಬ್ಯಾಟ್ ಬೀಸುತ್ತಿದ್ದ ರೋಹಿತ್ ಶರ್ಮಾ(30) ಕೂಡ ಸೌಥಿ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಚೇತೇಶ್ವರ್ ಪೂಜಾರ ಮತ್ತು ನಾಯಕ ವಿರಾಟ್ ಕೊಹ್ಲಿ ಕ್ರೀಸ್ ಕಾಯ್ದುಕೊಂಡಿದ್ದಾರೆ.

ಸೋಮವಾರ ಮಳೆಯಿಂದಾಗಿ ಆಟ ನಡೆದಿರಲಿಲ್ಲ. ಪಂದ್ಯದ ಮೊದಲ ದಿನವೂ ಮಳೆ ಕಾರಣ ಆಟವಾಗಿರಲಿಲ್ಲ. ಎರಡನೇ ದಿನ ಟಾಸ್ ಗೆದ್ದ ಕಿವೀಸ್ ಫೀಲ್ಡಿಂಗ್ ಮಾಡಿತ್ತು. ಭಾರತ ತಂಡವು 217 ರನ್ ಗಳಿಸಿತ್ತು.

ಪಂದ್ಯದ ಮೀಸಲು ದಿನವಾದ ಬುಧವಾರ ಆಟ ಮುಂದುವರಿಯಲಿದೆ. ಆದರೆ ಸ್ಪಷ್ಟ ಫಲಿತಾಂಶ ಬರುವ ಸಾಧ್ಯತೆಗಳು ಕಡಿಮೆ ಇವೆ. ಒಂದೊಮ್ಮೆ ಭಾರತ ತಂಡವನ್ನು ಅಲ್ಪಮೊತ್ತಕ್ಕೆ, ಬೇಗನೆ ನಿಯಂತ್ರಿಸಿದರೆ ಕೇನ್ ಬಳಗಕ್ಕೆ ಜಯಿಸುವ ಅವಕಾಶವಿದೆ.

ಶಮಿ ಮಿಂಚು: ಭಾನುವಾರ ದಿನದಾಟದ ಅಂತ್ಯಕ್ಕೆ ನ್ಯೂಜಿಲೆಂಡ್ ತಂಡವು 49 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 101 ರನ್ ಗಳಿಸಿತ್ತು. ದೊಡ್ಡ ಮೊತ್ತದ ಮುನ್ನಡೆ ಗಳಿಸುವ ಅವಕಾಶ ನ್ಯೂಜಿಲೆಂಡ್‌ಗೆ ಇತ್ತು. ಆದರೆ ನಾಲ್ಕು ವಿಕೆಟ್ ಗಳಿಸಿದ ಶಮಿ ಈ ಉದ್ದೇಶಕ್ಕೆ ತಡೆಯೊಡ್ಡಿದರು.

ಮಂಗಳವಾರ ಮೈದಾನದ ಹೊರಾಂಗಣವು ಒದ್ದೆಯಾಗಿದ್ದ ಕಾರಣ ಆಟವು ವಿಳಂಬವಾಗಿ ಆರಂಭವಾಯಿತು. ಕ್ರೀಸ್‌ನಲ್ಲಿದ್ದ ಕೇನ್ ಮತ್ತು ರಾಸ್ ಟೇಲರ್ ತಾಳ್ಮೆಯಿಂದ ಇನಿಂಗ್ಸ್ ಕಟ್ಟುವತ್ತ ಗಮನ ನೀಡಿದರು. 64ನೇ ಓವರ್‌ನಲ್ಲಿ ಟೇಲರ್ ವಿಕೆಟ್ ಗಳಿಸಿದ ಶಮಿ ಜೊತೆಯಾಟವನ್ನು ಮುರಿದರು. ಆದರೆ ಕೇನ್ ವಿಲಿಯಮ್ಸನ್ ಮಾತ್ರ ಗಟ್ಟಿಯಾಗಿ ನಿಂತು ಆಡಿದರು. ರನ್‌ಗಳಿಕೆಗಿಂತ ವಿಕೆಟ್ ಉಳಿಕೆಗೆ ಹೆಚ್ಚು ಒತ್ತು ನೀಡಿದರು.



ಮೊಹಮ್ಮದ್ ಶಮಿ ಸಂಭ್ರಮ


ವಿಲಿಯಮ್ಸನ್

ಇನ್ನೊಂದು ತುದಿಯಿಂದ ಇಶಾಂತ್ ಶರ್ಮಾ ಕೂಡ ಉತ್ತಮ ಬೌಲಿಂಗ್ ಮಾಡಿದರು. ಹೆನ್ರಿ ನಿಕೋಲ್ಸ್ ವಿಕೆಟ್ ಗಳಿಸಿದರು. ಶಮಿ ಎಸೆತದಲ್ಲಿ ಬಿಜೆ ವಾಟ್ಲಿಂಗ್ ಕ್ಲೀನ್ ಬೌಲ್ಡ್ ಆದರು. 13 ರನ್ ಗಳಿಸಿದ ಕಾಲಿನ್ ಡಿ ಗ್ರ್ಯಾಂಡ್‌ಹೋಮ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಜಿಗುಟುತನದ ಬ್ಯಾಟಿಂಗ್ ತೋರಿದ ಕೈಲ್ ಜೆಮಿಸನ್ (21 ರನ್) ಕೂಡ ಶಮಿಗೆ ವಿಕೆಟ್ ಒಪ್ಪಿಸಿದರು.

ಆದರೆ ಟೀಮ್ ಸೌಥಿ ಎರಡು ಸಿಕ್ಸರ್ ಮತ್ತು ಒಂದು ಬೌಂಡರಿ ಗಳಿಸಿ ತಂಡದ ಮೊತ್ತ ಹೆಚ್ಚಿಸಿದರು. ಇದರಿಂದಾಗಿ ಮುನ್ನಡೆ ಸಾಧ್ಯವಾಯಿತು. ರವೀಂದ್ರ ಜಡೇಜ ಬೌಲಿಂಗ್‌ನಲ್ಲಿ ಸೌಥಿ ಔಟಾದರು. ತಮ್ಮ ಅರ್ಧಶತಕ ಪೂರೈಸಲು ಒಂದು ರನ್ ಅಗತ್ಯವಿದ್ದಾಗ ವಿಲಿಯಮ್ಸನ್ ಇಶಾಂತ್ ಬೌಲಿಂಗ್‌ನಲ್ಲಿ ವಿರಾಟ್ ಕೊಹ್ಲಿಗೆ ಕ್ಯಾಚಿತ್ತರು.

ಭಾರತ–ನ್ಯೂಜಿಲೆಂಡ್ ಸ್ಕೋರ್

ಭಾರತ ಮೊದಲ ಇನಿಂಗ್ಸ್ 92.1 ಓವರ್‌ಗಳಲ್ಲಿ 217

ನ್ಯೂಜಿಲೆಂಡ್ ಮೊದಲ ಇನಿಂಗ್ಸ್ 99.2 ಓವರ್‌ಗಳಲ್ಲಿ 249(ಭಾನುವಾರ 49 ಓವರ್‌ಗಳಲ್ಲಿ 2 ವಿಕೆಟ್‌ಗೆ 101)

ವಿಲಿಯಮ್ಸನ್ ಸಿ ಕೊಹ್ಲಿ ಬಿ ಇಶಾಂತ್49 (177ಎ, 4X6)
ಟೇಲರ್ ಸಿ ಶುಭಮನ್ ಬಿ ಶಮಿ 11(37ಎ, 4X2), ನಿಕೋಲ್ಸ್ ಸಿ ರೋಹಿತ್ ಬಿ ಇಶಾಂತ್ 7 (23ಎ, 4X1), ವಾಟ್ಲಿಂಗ್ ಬಿ ಶಮಿ 1 (3ಎ), ಗ್ರ್ಯಾಂಡ್‌ಹೋಮ್ ಬಿ ಶಮಿ 13 (30ಎ, 4X1), ಜೆಮಿಸನ್ ಸಿ ಬೂಮ್ರಾ ಬಿ ಶಮಿ 21 (16ಎ, 6X1), ಸೌಥಿ ಬಿ ಜಡೇಜ 30 (46ಎ, 4X1, 6X2), ವಾಗ್ನರ್ ಸಿ ರಹಾನೆ ಬಿ ಅಶ್ವಿನ್ 0 (5ಎ), ಬೌಲ್ಟ್ ಔಟಾಗದೆ 7 (8ಎ, 4X1)
ಇತರೆ: (ಲೆಗ್ ಬೈ 3, ನೋಬಾಲ್ 2) 26
ವಿಕೆಟ್ ಪತನ: 3–117 (ರಾಸ್ ಟೇಲರ್, 63.1), 4–134 (ಹೆನ್ರಿ ನಿಕೋಲ್ಸ್, 69.3), 5–135 (ಬಿಜೆ ವಾಟ್ಲಿಂಗ್, 70.2), 6–162 (ಕಾಲಿನ್ ಡಿ ಗ್ರ್ಯಾಂಡ್‌ಹೋಮ್, 82.1), 7–192 (ಕೈಲ್ ಜೆಮಿಸನ್, 86.6), 8–221 (ಕೇನ್ ವಿಲಿಯಮ್ಸನ್, 93.6), 9–234 (ನೀಲ್ ವಾಗ್ನರ್, 96.3), 10–249 (ಟಿಮ್ ಸೌಥಿ, 99.2)
ಬೌಲಿಂಗ್: ಇಶಾಂತ್ ಶರ್ಮಾ 25–9–48–3, ಜಸ್‌ಪ್ರೀತ್ ಬೂಮ್ರಾ 26–9–57–0, ಮೊಹಮ್ಮದ್ ಶಮಿ 26–8–76–4, ಅಶ್ವಿನ್ 15–5–28–2, ರವಿಂದ್ರ ಜಡೇಜ 7.2–2–20–1

ಭಾರತ ಎರಡನೇ ಇನಿಂಗ್ಸ್ 30 ಓವರ್‌ಗಳಲ್ಲಿ 2 ವಿಕೆಟ್‌ಗೆ 64

ರೋಹಿತ್ ಎಲ್‌ಬಿಡಬ್ಲ್ಯು ಬಿ ಸೌಥಿ 30 (81ಎ, 4X2), ಶುಭಮನ್ ಎಲ್‌ಬಿಡಬ್ಲ್ಯು ಬಿ ಸೌಥಿ 8 (33ಎ), ಪೂಜಾರ ಬ್ಯಾಟಿಂಗ್ 12 (55ಎ, 4X2), ವಿರಾಟ್ ಕೊಹ್ಲಿ ಬ್ಯಾಟಿಂಗ್ 8 (12ಎ).
ಇತರೆ: (ಲೆಗ್‌ಬೈ 4, ನೋಬಾಲ್ 1, ವೈಡ್ 1) 6
ವಿಕೆಟ್ ಪತನ: 1–24 (ಶುಭಮನ್ ಗಿಲ್, 10.4), 2–51 (ರೋಹಿತ್ ಶರ್ಮಾ, 26.5)
ಬೌಲಿಂಗ್: ಟಿಮ್ ಸೌಥಿ 9–3–17–2, ಟ್ರೆಂಟ್ ಬೌಲ್ಟ್ 8–1–20–0, ಕೈಲ್ ಜೆಮಿಸನ್ 10–4–15–0, ನೀಲ್ ವಾಗ್ನರ್ 3–0–8–0.

ಒಲಿಂಪಿಕ್ಸ್: ಶ್ರೀಹರಿ, ಮಾನಾ ನಾಮನಿರ್ದೇಶನ



ಶ್ರೀಹರಿ ನಟರಾಜ್

ನವದೆಹಲಿ (ಪಿಟಿಐ): ಕರ್ನಾಟಕದ ಶ್ರೀಹರಿ ನಟರಾಜ್ ಮತ್ತು ಮಾನಾ ಪಟೇಲ್ ಅವರು 'ಸಾರ್ವತ್ರಿಕ ಸ್ಥಾನಗಳ ಅರ್ಹತೆ' ಪದ್ಧತಿಯಡಿ ಟೋಕಿಯೊ ಒಲಿಂಪಿಕ್ಸ್‌ಗೆ ನಾಮನಿರ್ದೇಶನಗೊಂಡಿದ್ದಾರೆ. ಭಾರತ ಈಜು ಫೆಡರೇಷನ್ (ಎಸ್‌ಎಫ್‌ಐ) ಮಂಗಳವಾರ ಇವರಿಬ್ಬರ ಹೆಸರುಗಳನ್ನು ಶಿಫಾರಸು ಮಾಡಿದೆ.

ಈ ನಾಮನಿರ್ದೇಶನ ಕುರಿತು ಜೂನ್ 20ರಂದು ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಮೂಲಕ ಅಂತರರಾಷ್ಟ್ರೀಯ ಈಜು ಫೆಡರೇಷನ್‌ಗೆ (ಫಿನಾ) ಮಾಹಿತಿ ನೀಡಲಾಗಿದೆ.

ಸಾಮಾನ್ಯ ಅರ್ಹತಾ ಪ್ರಕ್ರಿಯೆ ಮೂಲಕ ಯಾರೂ ಆಯ್ಕೆಯಾಗದಿದ್ದಾಗ, ಅತಿ ಹೆಚ್ಚು ಫಿನಾ ಪಾಯಿಂಟ್ಸ್ ಹೊಂದಿರುವ ತಲಾ ಒಬ್ಬ ಪುರುಷ ಹಾಗೂ ಮಹಿಳಾ ಈಜುಪಟುವನ್ನು ಶಿಫಾರಸು ಮಾಡುವ ಅವಕಾಶ ರಾಷ್ಟ್ರೀಯ ಫೆಡರೇಷನ್‌ಗೆ ಇತ್ತು.

100 ಮೀ. ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ ಸ್ಪರ್ಧಿಸುವ ಶ್ರೀಹರಿ ಮತ್ತು ಮಾನಾ ಕ್ರಮವಾಗಿ 863 ಮತ್ತು 735 ಪಾಯಿಂಟ್ಸ್ ಗಳಿಸಿದ್ದಾರೆ.

ಮಾನಾ ಅವರನ್ನು ಹೊರತುಪಡಿಸಿ ಭಾರತದ ಯಾವ ಮಹಿಳಾ ಈಜುಪಟುಗಳು 'ಬಿ' ಅರ್ಹತೆ ಗಳಿಸಿಲ್ಲವಾದ್ದರಿಂದ ಅವರು ಟೋಕಿಯೊಗೆ ತೆರಳುವುದು ಖಚಿತ. ಆದರೆ ಶ್ರೀಹರಿ ಅವರ ಆಯ್ಕೆ ಇನ್ನೂ ದೃಢಪಟ್ಟಿಲ್ಲ. ಏಕೆಂದರೆ ಶ್ರೀಹರಿ ಸೇರಿ ಭಾರತದ ಆರು ಮಂದಿ 'ಬಿ' ಅರ್ಹತೆ ಗಳಿಸಿದ್ದಾರೆ. 'ಎ' ಅರ್ಹತೆ ಗಳಿಸುವ ಈಜುಪಟು ಟೋಕಿಯೊಗೆ ತೆರಳುವ ಅವಕಾಶ ಪಡೆಯುತ್ತಾರೆ. ಆಗ ಸಾರ್ವತ್ರಿಕ ಅರ್ಹತಾ ವ್ಯವಸ್ಥೆಯಡಿಯ ಆಯ್ಕೆಯನ್ನು ರದ್ದು ಮಾಡಲಾಗುತ್ತದೆ.

ಸುದ್ದಿ 2 ನಿಮಿಷ

ಒಲಿಂಪಿಕ್ಸ್ ನಿಯಮಗಳು: ತಾರತಮ್ಯ ಸಾಧ್ಯವಿಲ್ಲ– ರಿಜಿಜು

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ಗೆ ತೆರಳಲಿರುವ ಭಾರತದ ಅಥ್ಲೀಟ್‌ಗಳ ಮೇಲೆ ಜಪಾನ್ ಸರ್ಕಾರ ಸಿದ್ಧಪಡಿಸಿರುವ ಹೆಚ್ಚುವರಿ ನಿಯಮಗಳ ಕುರಿತು ಮಾತನಾಡಿರುವ ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು, 'ತಾರತಮ್ಯ ಸಾಧ್ಯವಿಲ್ಲ' ಎಂದಿದ್ದಾರೆ. ಅಲ್ಲದೆ ಈ ಕುರಿತು ಔಪಚಾರಿಕ ದೂರು ಸಲ್ಲಿಸಿದ್ದು, ಸಮಸ್ಯೆ ಪರಿಹರಿಸಲಾಗುವುದು ಎಂದು ಹೇಳಿದ್ದಾರೆ.

ಭಾರತ ಒಳಗೊಂಡಂತೆ ಇತ್ತೀಚೆಗೆ ಕೋವಿಡ್–19ರ ವಿವಿಧ ರೂಪಾಂತರಿತ ವೈರಸ್‌ಗಳು ಕಂಡುಬಂದ 11 ದೇಶಗಳಿಂದ ತೆರಳುವ ಕ್ರೀಡಾಪಟುಗಳು ಮತ್ತು ಅಧಿಕಾರಿಗಳಿಗೆ ಸಂಬಂಧಿಸಿ ಕಠಿಣ ನಿಯಮಾವಳಿಗಳನ್ನು ಜಪಾನ್ ಸರ್ಕಾರ ಸಿದ್ಧಪಡಿಸಿದೆ.



ಟೋಕಿಯೊಗೆ ತೆರಳುವ ಮುನ್ನ ಒಂದು ವಾರ ಪ್ರತಿದಿನ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕೆಂದೂ ಟೋಕಿಯೊಗೆ ತಲುಪಿದ ನಂತರ ಮೂರು ದಿನ ಬೇರೆ ದೇಶದ ಯಾರೊಂದಿಗೂ ಮಾತನಾಡಬಾರದು ಎಂದು ಭಾರತದ ಪ್ರತಿನಿಧಿಗಳಿಗೆ ಜಪಾನ್ ಸರ್ಕಾರ ಸೂಚಿಸಿತ್ತು. ಇದಕ್ಕೆ ಭಾರತ ಒಲಿಂಪಿಕ್ ಸಂಸ್ಥೆಯು (ಐಒಎ) ಅಸಮಾಧಾನ ವ್ಯಕ್ತಪಡಿಸಿತ್ತು. ಇದು ತಾರತಮ್ಯ ನೀತಿ; ಅನ್ಯಾಯ ಎಂದು ಕಿಡಿ ಕಾರಿತ್ತು.

'ಒಲಿಂಪಿಕ್ ಕಾಯ್ದೆಯ ಪ್ರಕಾರ ಯಾವುದೇ ದೇಶದೊಂದಿಗೆ ತಾರತಮ್ಯ ಮಾಡಲು ಸಾಧ್ಯವಿಲ್ಲ. ಅಂತಹ ಸಮಸ್ಯೆಗಳಿದ್ದರೂ ಪರಿಹರಿಸಲಾಗುವುದು' ಎಂದು ಮಾಧ್ಯಮಗಳೊಂದಿಗೆ ನಡೆಸಿದ ಆನ್‌ಲೈನ್ ಸಂವಾದದಲ್ಲಿ ರಿಜಿಜು ತಿಳಿಸಿದ್ದಾರೆ.

ಒಲಿಂಪಿಕ್ಸ್‌ಗೆ ಅಥ್ಲೀಟ್‌ಗಳ ಸಿದ್ಧತೆ ಕುರಿತು ಅವರು ತೃಪ್ತಿ ವ್ಯಕ್ತಪಡಿಸಿದರು.

ಕ್ರಿಕೆಟ್: ಪಾಕ್ ಬ್ಯಾಟಿಂಗ್ ಕೋಚ್ ಯೂನಿಸ್ ಖಾನ್ ರಾಜೀನಾಮೆ

ಕರಾಚಿ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ತಂಡದ ಬ್ಯಾಟಿಂಗ್ ತರಬೇತುದಾರನ ಸ್ಥಾನಕ್ಕೆ ಮಾಜಿ ನಾಯಕ ಯೂನಿಸ್ ಖಾನ್ ರಾಜೀನಾಮೆ ನೀಡಿದ್ದಾರೆ.

ಪಾಕಿಸ್ತಾನ ತಂಡವು ಜೂನ್ 25ರಿಂದ ಜುಲೈ 20ರವರೆಗೆ ಇಂಗ್ಲೆಂಡ್ ವಿರುದ್ಧ ತಲಾ ಮೂರು ಏಕದಿನ ಮತ್ತು ಟಿ20 ಪಂದ್ಯಗಳನ್ನು ಆಡಬೇಕಿದೆ. ಬಳಿಕ ಜುಲೈ 21ರಿಂದ ಆಗಸ್ಟ್ 24ರವರೆಗೆ ವೆಸ್ಟ್ ಇಂಡೀಸ್ ಪ್ರವಾಸ ಕೈಗೊಳ್ಳಲಿದೆ. ಈ ಸಂದರ್ಭದಲ್ಲಿ ಯೂನಿಸ್ ಖಾನ್ ರಾಜೀನಾಮೆ ನೀಡಿದ್ದು ಅಚ್ಚರಿಗೆ ಕಾರಣವಾಗಿದೆ.

'ಯೂನಿಸ್ ಖಾನ್ ಅವರು ತರಬೇತುದಾರನ ಸ್ಥಾನಕ್ಕೆ ನೀಡಿರುವ ರಾಜೀನಾಮೆಯನ್ನು ಸ್ವೀಕರಿಸಲು ಮನಸ್ಸಿಲ್ಲವಾದರೂ ಸ್ನೇಹಪೂರ್ವಕವಾಗಿ ಸ್ವೀಕರಿಸಲಾಗಿದೆ' ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ ತಿಳಿಸಿದೆ. 'ಬ್ಯಾಟಿಂಗ್ ತರಬೇತುದಾರರಿಲ್ಲದೆ ಪಾಕಿಸ್ತಾನ ಕ್ರಿಕೆಟ್ ತಂಡವು ಇಂಗ್ಲೆಂಡ್ ಪ್ರವಾಸ ಕೈಗೊಳ್ಳಲಿದೆ. ವೆಸ್ಟ್ ಇಂಡೀಸ್ ಪ್ರವಾಸದ ವೇಳೆಗೆ ಯೂನಿಸ್ ಖಾನ್ ಸ್ಥಾನವನ್ನು ತುಂಬುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ ತಿಳಿಸಿದೆ.


ಮಗಳು ಝೀವಾ ಜೊತೆ ಮಹೇಂದ್ರ ಸಿಂಗ್ ಧೋನಿ– ಟ್ವಿಟರ್ ಚಿತ್ರ

ಹೊಸ 'ಲುಕ್'ನಲ್ಲಿ ಧೋನಿ!

ಬೆಂಗಳೂರು:ತಮ್ಮ ಆಕರ್ಷಕವಾದ ಕೇಶವಿನ್ಯಾಸಗಳ ಮೂಲಕ ಸದಾ ಗಮನ ಸೆಳೆಯುವ ಕ್ರಿಕೆಟಿಗ ಮಹೇಂದ್ರಸಿಂಗ್ ಧೋನಿ ಈಗ ತಮ್ಮ ಮೀಸೆಯಿಂದ ಜಾಲತಾಣಗಳಲ್ಲಿ ಸುದ್ದಿಯಾಗಿದ್ದಾರೆ.

ಅವರು ಈಗ ಬೆಳೆಸಿರುವ ಮೀಸೆಗೆ ಟ್ವಿಟರ್‌ನಲ್ಲಿ ಅಭಿಮಾನಿಗಳು, 'ಸಿಂಘಂ' ಹಿಂದಿ ಚಲನಚಿತ್ರದ ನಾಯಕನ ಮೀಸೆಗೆ ಹೋಲಿಕೆ ಮಾಡಿ, ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಧೋನಿ ತಮ್ಮ ಮಗಳು ಝೀವಾ ಜೊತೆಗೆ ಇರುವ ಚಿತ್ರವನ್ನು ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ತಂಡವು ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಿದೆ. ಇದಕ್ಕೆ 'ಕಣ್ಣಾಣೆ ಕಣ್ಣೆ' ಎಂದು ಶೀರ್ಷಿಕೆ ನೀಡಿದೆ.

ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗಿರುವ ಧೋನಿ ಐಪಿಎಲ್‌ನಲ್ಲಿ ಸಿಎಸ್‌ಕೆ ತಂಡದ ನಾಯಕರಾಗಿದ್ದಾರೆ.

ಸಂಕ್ಷಿಪ್ತ ಸುದ್ದಿ

ವಿಂಬಲ್ಡನ್ ಅರ್ಹತೆ: ಎರಡನೇ ಸುತ್ತಿಗೆ ರಾಮಕುಮಾರ್

ಲಂಡನ್ (ಪಿಟಿಐ): ಭಾರತದ ರಾಮಕುಮಾರ್ ರಾಮನಾಥನ್ ಅವರು ವಿಂಬಲ್ಡನ್ ಟೆನಿಸ್ ಅರ್ಹತಾ ಟೂರ್ನಿಯಲ್ಲಿ ಎರಡನೇ ಸುತ್ತಿಗೆ ಕಾಲಿಟ್ಟಿದ್ದಾರೆ. ಆದರೆ ಪ್ರಜ್ಞೇಶ್ ಗುಣೇಶ್ವರನ್ ಅವರು ಸೋತು ನಿರ್ಗಮಿಸಿದರು.


ರಾಮಕುಮಾರ್ ರಾಮನಾಥನ್

ಮಂಗಳವಾರ ಇಲ್ಲಿ ನಡೆದ ಮೊದಲ ಸುತ್ತಿನ ಹಣಾಹಣಿಯಲ್ಲಿ ರಾಮಕುಮಾರ್ ಅವರು 6-3, 6-0ಯಿಂದ ಸ್ಲೊವಾಕಿಯಾದ ಜೋಸೆಫ್ ಕೊವಾಲಿಕ್ ಅವರನ್ನು ಮಣಿಸಿದರು. ಬರೋಬ್ಬರಿ ಒಂದು ತಾಸಿನವರೆಗೆ ಈ ಪಂದ್ಯ ನಡೆಯಿತು.

ಪ್ರಜ್ಞೇಶ್ ಅವರು ಬ್ರಿಟನ್ ಆಟಗಾರ ಅರ್ಥರ್ ಫೆರಿ ಎದುರು 1–6, 6–7ರಿಂದ ಸೋಲು ಅನುಭವಿಸಿದರು. 18 ವರ್ಷದ ಫೆರಿ ವಿಶ್ವ ರ್‍ಯಾಂಕಿಂಗ್‌ನಲ್ಲಿ 1038ನೇ ಸ್ಥಾನದಲ್ಲಿದ್ದರೆ, ಪ್ರಜ್ಞೇಶ್ ಸ್ಥಾನ 148ನೇ ಸ್ಥಾನದಲ್ಲಿದ್ದಾರೆ.

ಗಾಲ್ಫ್: ಅನಿರ್ಬನ್‌ಗೆ ಒಲಿಂಪಿಕ್ಸ್ ಟಿಕೆಟ್

ನವದೆಹಲಿ (ಪಿಟಿಐ): ಭಾರತದ ಅನುಭವಿ ಗಾಲ್ಫ್ ಆಟಗಾರ ಅನಿರ್ಬನ್ ಲಾಹಿರಿ ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಿದ್ದಾರೆ. ರ್‍ಯಾಂಕಿಂಗ್ ಆಧಾರದಲ್ಲಿ ಅವರು ಈ ಸ್ಥಾನ ಗಳಿಸಿದ್ದಾರೆ.



ಅನಿರ್ಬನ್ ಲಾಹಿರಿ

ಟೋಕಿಯೊ ಕೂಟದ ರ್‍ಯಾಂಕಿಂಗ್ ಪ್ರಕಾರ ಕೊನೆಯದಾಗಿ ಲಭ್ಯವಿದ್ದ 60ನೇ ಸ್ಥಾನ ಲಾಹಿರಿಗೆ ಒಲಿಯಿತು. ಭಾರತದಲ್ಲಿ ಗರಿಷ್ಠ ರ್‍ಯಾಂಕ್ ಹೊಂದಿರುವ ಆಟಗಾರ ಅವರು. ವಿಶ್ವ ರ್‍ಯಾಂಕಿಂಗ್‌ನಲ್ಲಿ 340ನೇ ಸ್ಥಾನದಲ್ಲಿದ್ದಾರೆ.

ಅನಿರ್ಬನ್ ಸತತ ಎರಡನೇ ಬಾರಿ ಒಲಿಂಪಿಕ್ ಕೂಟಕ್ಕೆ ತೆರಳಲಿದ್ದಾರೆ. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಎಸ್‌ಎಸ್‌ಪಿ ಚೌರಾಸಿಯಾ ಹಾಗೂ ಲಾಹಿರಿ ಆಡಿದ್ದರು.


ನೆದರ್ಲೆಂಡ್ಸ್‌ನ ಜಾರ್ಜಿನಿಯೊ ವಿಜ್ನಾಲ್ಡಮ್ ಮತ್ತು ನಾರ್ತ್ ಮೆಸಿಡೋನಿಯಾದ ಎಜ್‌ಗಾನ್ ಅಲಿಯೊಸ್ಕಿ ನಡುವೆ ಚೆಂಡಿಗಾಗಿ ಪೈಪೋಟಿ– ರಾಯಿಟರ್ಸ್ ಚಿತ್ರ

ವಿಜ್ನಾಲ್ಡಮ್ ಎರಡು ಗೋಲು

ಆ್ಯಮ್‌ಸ್ಟರ್‌ಡ್ಯಾಮ್ (ರಾಯಿಟರ್ಸ್): ಎರಡು ಗೋಲು ಗಳಿಸಿ ಮಿಂಚಿದ ಜಾರ್ಜಿನಿಯೊ ವಿಜ್ನಾಲ್ಡಮ್ ನೆದರ್ಲೆಂಡ್ಸ್ ತಂಡಕ್ಕೆ ಜಯ ತಂದುಕೊಟ್ಟರು. ಯೂರೊ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಆ ತಂಡವು ಸೋಮವಾರ ರಾತ್ರಿ 3–0ಯಿಂದ ನಾರ್ತ್ ಮೆಸಿಡೋನಿಯಾ ತಂಡವನ್ನು ಪರಾಭವಗೊಳಿಸಿತು.

'ಸಿ' ಗುಂಪಿನ ಈ ಹಣಾಹಣಿಯಲ್ಲಿ ವಿಜೇತ ತಂಡದ ಪರ ವಿಜ್ನಾಲ್ಡಮ್ (51ನೇ ನಿಮಿಷ, 58ನೇ ನಿಮಿಷ) ಎರಡು ಗೋಲು ಹೊಡೆದು ಮಿಂಚಿದರು. ಇನ್ನೊಂದು ಗೋಲನ್ನು 24ನೇ ನಿಮಿಷದಲ್ಲಿ ಮೆಂಫಿಸ್ ಡಿಪೇ ದಾಖಲಿಸಿದರು.

'ಬಿ' ಗುಂಪಿನ ಪಂದ್ಯದಲ್ಲಿ ಡೆನ್ಮಾರ್ಕ್ 4–1ರಿಂದ ರಷ್ಯಾವನ್ನು ಮಣಿಸಿತು. ಡೆನ್ಮಾರ್ಕ್ ಪರ ಮಿಕ್ಕೆಲ್ ಡ್ಯಾಮ್ಸ್‌ಗಾರ್ಡ್ (38ನೇ ನಿಮಿಷ), ಯೂಸುಫ್ ಪೌಲ್‌ಸನ್ (59ನೇ ನಿ.), ಆ್ಯಂಡ್ರಿಯಾಸ್ ಕ್ರಿಸ್ಟೆನ್ಸನ್ (79ನೇ ನಿ.), ಜೋಕಿಮ್ ಮಾಹ್ಲೆ (82ನೇ ನಿ.) ಗೋಲು ದಾಖಲಿಸಿದರು.

ರಷ್ಯಾದ ಆರ್ಟೆಮ್ ಡಿಜುಬಾ 70ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿ ಅವಕಾಶವನ್ನು ಗೋಲಾಗಿಸಿದರು.

ಆರ್ಚರಿ ವಿಶ್ವಕಪ್: ಪ್ರೀಕ್ವಾರ್ಟರ್‌ಗೆ ಭಾರತ ಮಹಿಳಾ ತಂಡ

ಪ್ಯಾರಿಸ್ (ಪಿಟಿಐ): ಆರ್ಚರಿ ವಿಶ್ವಕಪ್ ಮೂರನೇ ಹಂತದ ಟೂರ್ನಿಯಲ್ಲಿ ಭಾರತ ಮಹಿಳಾ ರಿಕರ್ವ್ ತಂಡವು ಪ್ರೀಕ್ವಾರ್ಟರ್‌ಫೈನಲ್ ತಲುಪಿದೆ. ಅರ್ಹತಾ ಸುತ್ತಿನಲ್ಲಿ ತಂಡವು ಎರಡನೇ ಸ್ಥಾನ ಗಳಿಸಿತು. ಮೆಕ್ಸಿಕೊ ಮೊದಲ ಸ್ಥಾನ ತನ್ನದಾಗಿಸಿಕೊಂಡಿತು. ಭಾನುವಾರ ಒಲಿಂಪಿಕ್ಸ್ ಅರ್ಹತೆ ಗಳಿಸಲು ವಿಫಲವಾಗಿದ್ದ ಭಾರತ ತಂಡವು ಮಂಗಳವಾರ ಇಲ್ಲಿ ಉತ್ತಮ ಸಾಮರ್ಥ್ಯ ತೋರಿತು.

ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ದೀಪಿಕಾ ಕುಮಾರಿ, ಅಂಕಿತಾ ಭಕತ್ ಹಾಗೂ ಕೋಮಲಿಕಾ ಬಾರಿ ಅವರನ್ನೊಳಗೊಂಡ ತಂಡವು ಭಾನುವಾರ ಒಲಿಂಪಿಕ್ಸ್ ಅರ್ಹತಾ ಅಂತಿಮ ಸುತ್ತಿನಿಂದ ಹೊರಬಿದ್ದಿತ್ತು.

ಭಾನುವಾರ ನಡೆದ ಅರ್ಹತಾ ಪಂದ್ಯದ ಬಳಿಕ ಮೆಕ್ಸಿಕೊ ಹಾಗೂ ಭಾರತ ಅಗ್ರಸ್ಥಾನದಲ್ಲಿದ್ದವು. ಆದರೆ ಕೊಲಂಬಿಯಾ ಎದುರು ಸೋಲು ಅನುಭವಿಸಿದ ಬಳಿಕ ಭಾರತ ತಂಡ ಎರಡನೇ ಸ್ಥಾನಕ್ಕೆ ಕುಸಿಯಿತು.

ಅರ್ಹತಾ ಸುತ್ತಿನಲ್ಲಿ ಭಾರತದ ಮಹಿಳೆಯರು 1986 ಪಾಯಿಂಟ್ಸ್ ಕಲೆಹಾಕಿದರು.

ಇಲ್ಲಿ ಎರಡನೇ ಶ್ರೇಯಾಂಕ ಗಳಿಸಿರುವ ಭಾರತದ ಮಹಿಳೆಯರು 16ರ ಘಟ್ಟದ ಪಂದ್ಯದಲ್ಲಿ, ಸ್ಪೇನ್ ಮತ್ತು ಸ್ವೀಡನ್ ಎದುರಿನ ವಿಜೇತರನ್ನು ಎದುರಿಸಲಿದ್ದಾರೆ.

ಒಲಿಂಪಿಕ್ಸ್: ಉಪನಾಯಕರಾಗಿ ಬಿರೇಂದ್ರ, ಹರ್ಮನ್‌ಪ್ರೀತ್ ಸಿಂಗ್ ನೇಮಕ

ಭಾರತ ಹಾಕಿ ತಂಡಕ್ಕೆ ಮನ್‌ಪ್ರೀತ್ ನಾಯಕ

ನವದೆಹಲಿ (ಪಿಟಿಐ): ಮಿಡ್‌ಫೀಲ್ಡ್ ಆಟಗಾರ ಮನ್‌ಪ್ರೀತ್ ಸಿಂಗ್ ಅವರನ್ನು, ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಆಡಲಿರುವ ಭಾರತ ಪುರುಷರ ಹಾಕಿ ತಂಡದ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. ಡಿಫೆಂಡರ್‌ಗಳಾದ ಬಿರೇಂದ್ರ ಲಾಕ್ರಾ ಮತ್ತು ಹರ್ಮನ್‌ಪ್ರೀತ್ ಸಿಂಗ್ ಅವರು ಉಪನಾಯಕರಾಗಿದ್ದಾರೆ.

ಜುಲೈ 23ರಿಂದ ಆಗಸ್ಟ್ 8ರವರೆಗೆ ನಡೆಯುವ ಒಲಿಂಪಿಕ್ಸ್‌ಗೆ ಹಾಕಿ ತಂಡವನ್ನು ಕಳೆದ ವಾರವೇ ಪ್ರಕಟಿಸಲಾಗಿತ್ತು. ಆದರೆ ನಾಯಕ, ಉಪನಾಯಕರ ಹೆಸರನ್ನು ಪ್ರಕಟಿಸಿರಲಿಲ್ಲ.

'ಮೂರನೇ ಬಾರಿ ಭಾರತ ತಂಡವನ್ನು ಪ್ರತಿನಿಧಿಸುತ್ತಿರುವುದರಿಂದ, ಜೊತೆಗೆ ಈ ಬಾರಿ ನಾಯಕತ್ವದ ಜವಾಬ್ದಾರಿ ವಹಿಸಿರುವುದರಿಂದ ವಿನೀತಭಾವ ಮೂಡಿದೆ. ಇದು ನನಗೆ ಅತ್ಯಂತ ಹೆಮ್ಮೆಯ ಕ್ಷಣ' ಎಂದು ಮನ್ ಪ್ರೀತ್ ಅವರು ಹಾಕಿ ಇಂಡಿಯಾ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.


ಗ್ರಹಾಂ ರೀಡ್ ಮತ್ತು ಮನ್‌ಪ್ರೀತ್

'ಕಳೆದ ಕೆಲವು ವರ್ಷಗಳಿಂದ ನಾವು ಪ್ರಬಲ ನಾಯಕತ್ವದ ಗುಂಪನ್ನು ರೂಪಿಸಿಕೊಂಡಿದ್ದೇವೆ. ಸಾಂಕ್ರಾಮಿಕ ಪಿಡುಗು ತಂದೊಡ್ಡಿದ ಸವಾಲಿನ ನಡುವೆಯೂ ಆಟದ ಮಟ್ಟ ಇಳಿಯದಂತೆ ಯಶಸ್ವಿಯಾಗಿ ನೋಡಿಕೊಂಡಿದ್ದೇವೆ. ಒಲಿಂಪಿಕ್ಸ್‌ಗೆ ದೈಹಿಕ ಕ್ಷಮತೆ ಕಾಪಾಡಿಕೊಳ್ಳುವ ಜೊತೆ, ನಮ್ಮ ಲಕ್ಷ್ಯ ತಪ್ಪದಂತೆ ಗಮನಹರಿಸಿದ್ದೇವೆ' ಎಂದು ಮನ್‌ಪ್ರೀತ್ ಹೇಳಿದ್ದಾರೆ.

ಮನ್‌ಪ್ರೀತ್ ನಾಯಕತ್ವದಲ್ಲಿ ಭಾರತ ಹಲವು ಮೈಲುಗಲ್ಲುಗಳನ್ನು ಸಾಧಿಸಿದೆ. 2017ರಲ್ಲಿ ಏಷ್ಯಾ ಕಪ್, 2018ರಲ್ಲಿ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಗೆದ್ದುಕೊಂಡಿದ್ದ ತಂಡ, ಎರಡು ವರ್ಷಗಳ ಹಿಂದೆ ಎಫ್‌ಐಎಚ್ ವಿಶ್ವ ಸರಣಿ ಫೈನಲ್‌ನಲ್ಲೂ ಜಯಗಳಿಸಿತ್ತು.

ಮನ್‌ಪ್ರೀತ್ ನಾಯಕರಾಗಿದ್ದಾಗಲೇ ಭಾರತ ತಂಡವು, ತವರಿನಲ್ಲಿ (ಭುವನೇಶ್ವರ) ನಡೆದ 2018ರ ವಿಶ್ವಕಪ್‌ನಲ್ಲಿ ಎಂಟರ ಘಟ್ಟ ತಲುಪಿತ್ತು. ತಂಡವು ಈಗ ವಿಶ್ವ ರ್‍ಯಾಂಕಿಂಗ್‌ನಲ್ಲಿ ನಾಲ್ಕನೇ ಸ್ಥಾನಕ್ಕೆ ಏರಿದೆ.

'ಈ ಮೂರೂ ಆಟಗಾರರು ಕಳೆದ ಕೆಲವು ವರ್ಷಗಳಿಂದ ತಂಡದ ನಾಯಕತ್ವದ ಅವಿಭಾಜ್ಯ ಅಂಗವಾಗಿದ್ದಾರೆ. ಸವಾಲಿನ ಸಮಯದಲ್ಲಿ ಆಟಗಾರರಿಗೆ ಮಾರ್ಗದರ್ಶನ ಮಾಡುವಲ್ಲಿ ಪ್ರಬುದ್ಧತೆ ತೋರಿದ್ದಾರೆ' ಎಂದು ಮುಖ್ಯ ಕೋಚ್ ಗ್ರಹಾಂ ರೀಡ್ ಹೇಳಿದ್ದಾರೆ.

ನೇಪಾಳ: 20 ಸಚಿವರ ನೇಮಕ ಅಸಿಂಧು


ಕೆ.ಪಿ.ಶರ್ಮಾ ಒಲಿ

ಕಠ್ಮಂಡು (ಪಿಟಿಐ): ಪ್ರಧಾನಿ ಕೆ.ಪಿ.ಶರ್ಮಾ ಒಲಿ ಅವರು 20 ಜನ ಸಚಿವರನ್ನು ನೇಮಕ ಮಾಡಿರುವುದು ಅಸಾಂವಿಧಾನಿಕ ಎಂದು ನೇಪಾಳ ಸುಪ್ರೀಂ ಕೋರ್ಟ್ ಮಂಗಳವಾರ ತೀರ್ಪು ನೀಡಿದೆ.

ಸಂಸತ್ ವಿಸರ್ಜನೆಗೊಳಿಸಿದ ನಂತರ ಪ್ರಧಾನಿ ಒಲಿ ಅವರು ಎರಡು ಬಾರಿ ಮಾಡಿದ್ದ ಸಂಪುಟ ವಿಸ್ತರಣೆ ಅಸಿಂಧುಗೊಂಡಂತಾಗಿದೆ. ಇದರೊಂದಿಗೆ ನೇಪಾಳದಲ್ಲಿ ಉದ್ಭವಿಸಿರುವ ರಾಜಕೀಯ ಬಿಕ್ಕಟ್ಟು ಈಗ ಮತ್ತಷ್ಟೂ ಜಟಿಲಗೊಂಡಂತಾಗಿದೆ.

ಮುಖ್ಯ ನ್ಯಾಯಮೂರ್ತಿ ಚೋಳೇಂದ್ರ ಶಂಷೇರ್ ರಾಣಾ ಹಾಗೂ ನ್ಯಾಯಮೂರ್ತಿ ಪ್ರಕಾಶಕುಮಾರ್ ಧುಂಗಾನಾ ಅವರಿರುವ ವಿಭಾಗೀಯ ನ್ಯಾಯಪೀಠ ಈ ತೀರ್ಪು ನೀಡಿದೆ.

ಈಗ, ಪ್ರಧಾನಿ ಒಲಿ ಸೇರಿದಂತೆ ಐವರು ಸಚಿವರು ಸಂಪುಟದಲ್ಲಿ ಉಳಿದುಕೊಂಡಿದ್ದಾರೆ. ಇಬ್ಬರು ಉಪಪ್ರಧಾನಿಗಳಾದ ರಾಜೇಂದ್ರ ಮಹತೊ (ಜನತಾ ಸಮಾಜವಾದಿ ಪಾರ್ಟಿ) ಹಾಗೂ ರಘುವೀರ್ ಮಹಾಸೇಠ್ (ಪ್ರಧಾನಿ ಒಲಿ ನೇತೃತ್ವದ ಸಿಪಿಎನ್–ಯುಎಂಎಲ್ ಪಾರ್ಟಿ) ಅಧಿಕಾರ ಕಳೆದುಕೊಂಡಿರುವ ಪ್ರಮುಖರಾಗಿದ್ದಾರೆ.

ಪ್ರವಾಸಿಗರಿಗೆ ಉಚಿತ ಲಸಿಕೆ ನೀಡಲು ಅಬುಧಾಬಿ ನಿರ್ಧಾರ

ದುಬೈ (ರಾಯಿಟರ್ಸ್): ಯುನೈಟೆಡ್ ಅರಬ್ ಎಮಿರೇಟ್ಸ್‌ನ (ಯುಎಇ) ರಾಜಧಾನಿ ಅಬುಧಾಬಿಯು ಪ್ರವಾಸಿಗರಿಗೆ ಉಚಿತ ಲಸಿಕೆಯನ್ನು ನೀಡುವುದಾಗಿ ಹೇಳಿದೆ.

ಈ ಹಿಂದೆ ಕೇವಲ ಯುಎಇ ನಾಗರಿಕರು ಮತ್ತು 'ರೆಸಿಡೆನ್ಸಿ ವೀಸಾ' ಹೊಂದಿದವರಿಗೆ ಮಾತ್ರ ಉಚಿತವಾಗಿ ಲಸಿಕೆ ನೀಡಲಾಗುತ್ತಿತ್ತು. ಈ ಹೊಸ ಬದಲಾವಣೆ ಅಬುಧಾಬಿಗೆ ಮಾತ್ರ ಸೀಮಿತವಾಗಿದೆಯೇ ಅಥವಾ ಇತರೆ ಐದು ಎಮಿರೇಟ್ಸ್‌ಗೆ ಅನ್ವಯಿಸುತ್ತದೆಯೇ ಎಂಬುದರ ಬಗ್ಗೆ ನಿಖರ ಮಾಹಿತಿ ಲಭ್ಯವಿಲ್ಲ.

ಅಬುಧಾಬಿ ಅನುಮೋದನೆ ನೀಡಿರುವ ವೀಸಾ ಮತ್ತು ಪಾಸ್‌ಪೋರ್ಟ್ ಹೊಂದಿರುವವರು ಲಸಿಕೆಗೆ ಅರ್ಹರು ಎಂದು ಅಬುಧಾಬಿ ಆರೋಗ್ಯ ಸೇವೆಗಳ ಕಂಪನಿ ಹೇಳಿದೆ.

ಮುಂಬೈ ದಾಳಿ ಪ್ರಕರಣ: 24ರಂದು ರಾಣಾ ಹಸ್ತಾಂತರ ಅರ್ಜಿ ವಿಚಾರಣೆ

ವಾಷಿಂಗ್ಟನ್ (ಪಿಟಿಐ): 2008ರಲ್ಲಿ ಮುಂಬೈ ಮೇಲೆ ನಡೆದಿದ್ದ ಉಗ್ರರ ದಾಳಿ ಪ್ರಕರಣಕ್ಕೆ ಸಂಬಂಧಿಸಿ ಪಾಕಿಸ್ತಾನ ಮೂಲದ ಕೆನಡಾ ಉದ್ಯಮಿ ತನಾವ್ವುರ್ ರಾಣಾ ಹಸ್ತಾಂತರ ಕೋರಿದ ಅರ್ಜಿಯ ಭೌತಿಕ ವಿಚಾರಣೆಯನ್ನು ಅಮೆರಿಕದ ಕೋರ್ಟ್ ಜೂ. 24ರಂದು ನಡೆಸಲಿದೆ ಎಂದು ಮೂಲಗಳು ತಿಳಿಸಿವೆ.

ಲಾಸ್ ಏಂಜಲೀಸ್‌ನಲ್ಲಿರುವ ಜಿಲ್ಲಾ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಲಿದ್ದು, ಈ ಕಲಾಪದಲ್ಲಿ ಪಾಲ್ಗೊಳ್ಳುವ ಸಲುವಾಗಿ ಭಾರತದ ಅಧಿಕಾರಿಗಳ ತಂಡ ಇಲ್ಲಿಗೆ ಬಂದಿಳಿದಿದೆ ಎಂದು ಇವೇ ಮೂಲಗಳು ಹೇಳಿವೆ.

ಮುಂಬೈ ಮೇಲೆ ನಡೆದ ದಾಳಿ ಪ್ರಕರಣದ ಪ್ರಮುಖ ಆರೋಪಿ ಡೇವಿಡ್ ಕೋಲ್‌ಮನ್ ಹೆಡ್ಲಿಯ ಬಾಲ್ಯ ಸ್ನೇಹಿತನಾದ ರಾಣಾ ಕೂಡ ಈ ಭಯೋತ್ಪಾದಕ ಕೃತ್ಯದಲ್ಲಿ ಭಾಗಿಯಾಗಿದ್ದ ಎಂಬ ಆರೋಪ ಇದೆ. ಈ ಕಾರಣಕ್ಕಾಗಿ ರಾಣಾನನ್ನು ಹಸ್ತಾಂತರಿಸುವಂತೆ ಭಾರತ ಕೋರಿದೆ.

ಈ ಭಯೋತ್ಪಾದಕ ದಾಳಿ ಘಟನೆಯಲ್ಲಿ 6 ಜನ ಅಮೆರಿಕನ್ನರು ಸೇರಿ ಒಟ್ಟು 166 ಜನರು ಮೃತಪಟ್ಟಿದ್ದರು.